# ಜನತಾವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಫೆಬ್ರವರಿ 3, 2025

ಸಂಪುಟ : 51 ಸಂಚಿಕೆ : 262 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




**ಶ್ರೀ ಸೀತಾರಾಮ ಕಲ್ಯಾಣೋತ್ಸವ ...**

ದಾವಣಗೆರೆ: ದೇವರಾಜ ಅರಸು ಬಡಾವಣೆಯಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಭಾನುವಾರ ಸಂಜೆ ಶ್ರೀ ಸೀತಾರಾಮ ಕಲ್ಯಾಣೋತ್ಸವ ವೈಭವದಿಂದ ಜರುಗಿತು. ಆರಂಭದಲ್ಲಿ ರಾಮಸೀತಾ ವಿಗ್ರಹಗಳನ್ನು ಒಡ್ಡೋಲಗದಲ್ಲಿ ಮೆರವಣಿಗೆ ನಡೆಸಿದ ಭಕ್ತರು, ಬಳಿಕ ರಾಮಚಂದ್ರ ಸ್ವಾಮಿ ವಿಜಯೋತ್ಸವ ಮಂಟಪದಲ್ಲಿ ಪ್ರತಿಷ್ಠಾಪಿಸಿದರು.

ವಿವಿಧ ವಾದ್ಯಘೋಷಗಳೊಂದಿಗೆ ದಿಬ್ಬಣ ಎದುರುಗೊಳ್ಳುವಿಕೆ, ವಧು ನಿರೀಕ್ಷಣೆ, ಅರಿಶಿಣ ಕುಂಕುಮ ಸಮರ್ಪಣೆ, ತಾಳಿ ಕಟ್ಟುವುದು, ಧಾರೆ ಎರೆಯುವುದು, ಚಿನ್ನಾಭರಣ ಮತ್ತು ಕಪ್ಪ ಕಾಣಿಕೆ ಸಮರ್ಪಣೆ, ಅಷ್ಟಾವಧಾನ ಸೇವೆ, ಪ್ರಸನ್ನ ಪೂಜೆ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು.

# ಜನರಿಂದ ಜನರಿಗಾಗಿ ಬಜೆಟ್

## ತೆರಿಗೆ ಕಡಿತ; ಅಧಿಕಾರಿಗಳ ಮನವೊಲಿಸಲು ಸಮಯ ಬೇಕಾಯಿತು: ನಿರ್ಮಲ

ನವದೆಹಲಿ, ಫೆ. 2 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮಧ್ಯಮ ವರ್ಗದ ಮೇಲಿನ ತೆರಿಗೆ ಕಡಿತವನ್ನು ಸಂಪೂರ್ಣವಾಗಿ ಬೆಂಬಲಿಸಿದ್ದರು. ಆದರೆ, ಅಧಿಕಾರಿಗಳ ಮನವೊಲಿಸಲು ಸ್ವಲ್ಪ ಸಮಯ ಬೇಕಾಯಿತು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಹೇಳಿದ್ದಾರೆ.

ನಾವು ಪ್ರಾಮಾಣಿಕವಾಗಿ ತೆರಿಗೆ ಪಾವತಿಸುತ್ತಿದ್ದರೂ ಸಹ, ನಮ್ಮ ಆಶಯಗಳನ್ನು ಈಡೇರಿಸುತ್ತಿಲ್ಲ ಎಂದು ಮಧ್ಯಮ ವರ್ಗದವರು ದೂರುತ್ತಿದ್ದರು. ಅವರ ಧ್ವನಿಯನ್ನು ನಾವು ಕೇಳಿದ್ದೇವೆ ಎಂದು ಖಾಸಗಿ ಸುದ್ದಿ ಸಂಸ್ಥೆ ಒಂದಕ್ಕೆ ಸಂದರ್ಶನ ನೀಡಿದ್ದ ಸೀತಾರಾಮನ್ ಹೇಳಿದ್ದಾರೆ.

ಹಣದುಬ್ಬರ ಮುಂತಾದ ಅಂಶಗಳಿಂದ ಆಗುವ ಪರಿಣಾಮಗಳನ್ನು ಸರ್ಕಾರ ತಗ್ಗಿಸಬೇಕು ಎಂದು ಪ್ರಾಮಾಣಿಕ ಹಾಗೂ ಹೆಮ್ಮೆಯ ತೆರಿಗೆ ಪಾವತಿದಾರರು ಬಯಸಿದ್ದರು. ಮಧ್ಯಮ ವರ್ಗದವರಿಗೆ ತ್ವರಿತವಾಗಿ ಪರಿಹಾರ ನೀಡುವಂತೆ ಪ್ರಧಾನಿ ನನಗೆ ತಿಳಿಸಿದ್ದರು ಎಂದು ಹಣಕಾಸು ಸಚಿವೆ ತಿಳಿಸಿದ್ದಾರೆ.

ಆದಾಯ ತೆರಿಗೆ ತಗ್ಗಿಸುವ ಬಗ್ಗೆ ಪ್ರಧಾನಿ



ತ್ವರಿತವಾಗಿ ಒಪ್ಪಿಕೊಂಡರು. ಆದರೆ ಹಣಕಾಸು ಸಚಿವಾಲಯ ಹಾಗೂ ಕೇಂದ್ರೀಯ ನೇರ ತೆರಿಗೆ ಮಂಡಳಿ ಅಧಿಕಾರಿಗಳ ಮನವೊಲಿಸಲು ಸ್ವಲ್ಪ ಸಮಯ ಬೇಕಾಯಿತು. ಜನಕಲ್ಯಾಣ ಹಾಗೂ ಇತರ ಯೋಜನೆಗಳಿಗೆ ಅಗತ್ಯ ಸಂಪನ್ಮೂಲ ಒದಗಿಸುವ ಹೊಣೆ ಅಧಿಕಾರಿಗಳದ್ದಾಗಿತ್ತು ಎಂದು ಸೀತಾರಾಮನ್ ಹೇಳಿದರು.

ಸೀತಾರಾಮನ್ ಅವರು ತಮ್ಮ ಎಂಟನೇ ಬಜೆಟ್‌ನಲ್ಲಿ ಆದಾಯ ತೆರಿಗೆ ವಿನಾಯಿತಿ ಮಿತಿಯನ್ನು 7 ಲಕ್ಷ ರೂ.ಗಳಿಂದ 12 ಲಕ್ಷ ರೂ. ಗಳಿಗೆ ಹೆಚ್ಚಿಸಿದ್ದರು. ಆದಾಯ ತೆರಿಗೆ ಪಾವತಿದಾರರಿಗೆ 1.1 ಲಕ್ಷ ರೂ.ಗಳವರೆಗೆ ಉಳಿತಾಯವಾಗಿತ್ತು.

ಇದೇ ಮೊದಲ ಬಾರಿಗೆ ಬಜೆಟ್‌ನಲ್ಲಿ ಆದಾಯ ತೆರಿಗೆ ಮಿತಿಯನ್ನು 5 ಲಕ್ಷ ರೂ.ಗಳ ಭಾರೀ ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ. ಇದು 2005 ರಿಂದ 2023ರ ನಡುವೆ ಹೆಚ್ಚಿಸಲಾದ ಮಿತಿಗೆ ಸಮವಾಗಿದೆ.

ತಾವು ಮಂಡಿಸಿದ ಬಜೆಟ್ ಜನರಿಗಾಗಿ ಹಾಗೂ ಜನರು ಬಯಸುವಂಥದ್ದು ಎಂದು ಪ್ರಧಾನ ಮಂತ್ರಿ ಹೇಳಿರುವುದು ಸೂಕ್ತವಾಗಿದೆ ಎಂದು ಸೀತಾರಾಮನ್, ಅಬ್ರಹಾಂ ಲಿಂಕನ್ ಅವರು ಹೇಳಿದಂತೆ ಈ ಬಜೆಟ್ ಜನರಿಂದ ಹಾಗೂ ಜನರಿಗೋಸ್ಕರ ಎಂದು ಬಣ್ಣಿಸಿದ್ದಾರೆ.

ಈ ಬಜೆಟ್ ಕಾರಣದಿಂದ ಮಧ್ಯಮ ವರ್ಗದ ಬಳಿ ಹೆಚ್ಚು ಹಣ ಉಳಿಯಲಿದೆ. ಇದರಿಂದ ಗೃಹಬಳಕೆ, ಉಳಿತಾಯ ಹಾಗೂ ಹೂಡಿಕೆ ಹೆಚ್ಚಾಗಲಿದೆ ಎಂದವರು ಹೇಳಿದರು.

ನೇರ ತೆರಿಗೆಯನ್ನು ಸರಳ ಹಾಗೂ ಪಾಲಿಸಲು ಸುಲಭ ಮಾಡಲು ಉದ್ದೇಶಿಸಿದ್ದೇವೆ. ಈ ದಿಸೆಯಲ್ಲಿ ಜುಲೈ 2024ರ ಬಜೆಟ್ ಮಂಡಿಸಿದಾಗಿನಿಂದ ಕಾರ್ಯನಿರ್ವಹಿಸಲಾಗುತ್ತಿದೆ. ಆದಾಯ ತೆರಿಗೆಗಾಗಿ ಹೊಸ ಕಾಯ್ದೆಯನ್ನು ರೂಪಿಸಲಾಗುವುದು ಇದು ಸರಳವಾಗಿರಲಿದೆ (5ನೇ ಪುಟಕ್ಕೆ)

# ದಾವಿವಿ ಪ್ರೊ. ಗಾಯತ್ರಿ ಸೇರಿ 10 ಜನರ ಬಂಧನ

## ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಕ್ರಮ



ನವದೆಹಲಿ, ಫೆ. 2 - ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತೆ ಮಂಡಳಿ (ನ್ಯಾಕ್) ಪರಿಶೀಲನಾ ಸಮಿತಿ ಅಧ್ಯಕ್ಷ ಹಾಗೂ ಆರು ಸದಸ್ಯರು ಸೇರಿದಂತೆ 10 ಜನರನ್ನು ಸಿಬಿಐ ಬಂಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಾವಣಗೆರೆ ವಿಶ್ವವಿದ್ಯಾಲಯದ ಮೈಕ್ರೋ ಬಯಾಲಜಿ ವಿಭಾಗದಲ್ಲಿ ಸೀನಿಯರ್ ಪ್ರೊಫೆಸರ್ ಆಗಿರುವ ಗಾಯತ್ರಿ ದೇವರಾಜ್, ಜೆ.ಎನ್.ಯು. ಉಪನ್ಯಾಸಕ ಹಾಗೂ ಆಂಧ್ರ ಪ್ರದೇಶದ ಗುಂಟೂರಿನ ಕೆ.ಎಲ್.ಇ. ಎಫ್. (ಕೊನೇರು ಲಕ್ಷ್ಮಯ್ಯ ಎಜುಕೇಷನ್ ಫೌಂಡೇಷನ್) ಉಪಕುಲಪತಿ ಹಾಗೂ ಇಬ್ಬರು ಕಾರ್ಯಕಾರಿ ಅಧಿಕಾರಿಗಳು ಸಹ ಬಂಧನಕ್ಕೆ ಒಳಗಾಗಿದ್ದಾರೆ.

ಸಿಬಿಐ ದಾಖಲಿಸಿದ ಎಫ್.ಐ.ಆರ್. ನಲ್ಲಿ ಕೆ.ಎಲ್.ಇ.ಎಫ್. ಅಧ್ಯಕ್ಷ ಸತ್ಯನಾರಾಯಣ ನಾಯಕ್, ಮಾಜಿ ಉಪ ಸಲಹೆಗಾರ (2ನೇ ಪುಟಕ್ಕೆ)

# ಭರಮಸಾಗರದಲ್ಲಿ ನಾಳೆಯಿಂದ ತರಳಬಾಳು ಹುಣ್ಣಿಮೆ : ಬೈಕ್ ರ್‍ಯಾಲಿ



ಚಿತ್ರದುರ್ಗ, ಫೆ. 2- ತಾಲ್ಲೂಕಿನ ಭರಮಸಾಗರದಲ್ಲಿ ನಾಡಿದ್ದು ದಿನಾಂಕ 4 ರಿಂದ 12 ರವರೆಗೆ ನಡೆಯಲಿರುವ 76ನೇ ತರಳಬಾಳು ಹುಣ್ಣಿಮೆ ಮಹೋತ್ಸವದ ಅಂಗವಾಗಿ ಸಿರಿಗೆರೆಯ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದಿಂದ ಭರಮಸಾಗರ ದವರೆಗೆ ಬೃಹತ್ ಬೈಕ್ ರ್‍ಯಾಲಿಯ ಮೂಲಕ ಶ್ರೀ ತರಳಬಾಳು ಜಗದ್ಗುರು ಡಾ. ಶಿವ ಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಅವರನ್ನು ಕರೆತರಲಾಗುವುದು.

ಭರಮಸಾಗರದ ನಿರಂಜನ ಮೂರ್ತಿ ಕಲ್ಯಾಣ ಮಂಟಪದಲ್ಲಿ ಭಾನುವಾರ ನಡೆದ ಶ್ರೀ ತರಳಬಾಳು ಶಿವಸೈನ್ಯ ರಾಜ್ಯ ಘಟಕದ ಪದಾಧಿಕಾರಿಗಳ ಸಭೆಯಲ್ಲಿ ಈ ಬಗ್ಗೆ ತೀರ್ಮಾನಿಸಲಾಯಿತು.

ರ್‍ಯಾಲಿಯು ಸಿರಿಗೆರೆಯಿಂದ ನಾಡಿದ್ದು ದಿನಾಂಕ 4 ರ ಬೆಳಗ್ಗೆ 10 ಗಂಟೆಗೆ ಪ್ರಾರಂಭಗೊಂಡು ಭರಮಸಾಗರ ಹೋಬಳಿಯ ಸುಮಾರು 30 ಹಳ್ಳಿಗಳ ಮೂಲಕ ಸಾಗಿ ಸುಮಾರು 5000 ಬೈಕ್ ರ್‍ಯಾಲಿಯ ಮೂಲಕ ಸಂಜೆ ನಾಲ್ಕು ಗಂಟೆಗೆ ಭರಮಸಾಗರದಲ್ಲಿ ನಡೆಯಲಿರುವ ಶ್ರೀ ತರಳಬಾಳು ಹುಣ್ಣಿಮೆ ಮಹೋತ್ಸವದ ಮಹಾ ಮಂಟಪಕ್ಕೆ ತಲುಪಲಿದೆ.

ಭರಮಸಾಗರ ಹೋಬಳಿಯ ಭಕ್ತರ ಆಶಯದಂತೆ ಅಂದು ಸಂಜೆ 4 ಗಂಟೆಗೆ ಡಾ. ಶಿವಮೂರ್ತಿ ಶಿವಾ ಚಾರ್ಯ ಮಹಾಸ್ವಾಮಿಗಳವರ ತೆಪ್ಪೋತ್ಸವ ಕಾರ್ಯಕ್ರಮ ವನ್ನು ಭರಮಸಾಗರದ ಕೆರೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಸಭೆಯಲ್ಲಿ ಶಶಿಧರ ಹೆಮ್ಮನಬೇತೂರು, ಮೋಹನ್ ಸಿರಿಗೆರೆ, ಕುಮಾರ್ ಮೆಳ್ಳೆಕಟ್ಟೆ, ಬಸವ ರಾಜ್ ಸಿರಿಗೆರೆ, ಶೈಲೇಶ್ ಚೌಲಹಳ್ಳಿ, (2ನೇ ಪುಟಕ್ಕೆ)

### ಫ್ಲೆಕ್ಸ್ ಹಾಕದಂತೆ ಶ್ರೀಗಳ ಸೂಚನೆ

ಭಕ್ತರು ಎಲ್ಲಿಯೂ ಸಹ ಫ್ಲೆಕ್ಸ್, ಬ್ಯಾನರ್ ಗಳನ್ನು ಹಾಕದಂತೆ ತರಳಬಾಳು ಜಗದ್ಗುರುಗಳು ಸೂಚನೆ ನೀಡಿದ್ದಾರೆ. ಭಕ್ತಾದಿಗಳು, ಅಭಿಮಾನಿಗಳು ತಮ್ಮ ಗ್ರಾಮಗಳ ಸರಹದ್ದಿನ ಮಾರ್ಗವನ್ನು ತಳಿರು, ತೋರಣಗಳಿಂದ ಅಲಂ ಕರಿಸಿ, ಶ್ರೀಗಳನ್ನು ಸ್ವಾಗತಿಸಿ, ದರ್ಶನಾಶೀರ್ವಾದ ಪಡೆದು ಭಕ್ತಿ ಕಾಣಿಕೆ ಸಮರ್ಪಿಸಿ ಬೀಳ್ಕೊಡುವಂತೆ ಸಮಿತಿಯವರು ಕೋರಿದ್ದಾರೆ.

# ಗ್ಯಾರಂಟಿಯಿಂದಾಗಿ ಅನುದಾನ ಸಿಗದೇ ರಾಜೀನಾಮೆ : ಬಿ.ಆರ್. ಪಾಟೀಲ್



ಕಲಬುರಗಿ, ಫೆ. 2 - ಗ್ಯಾರಂಟಿ ಯೋಜನೆಗಳ ಕಾರಣ ದಿಂದಾಗಿ ಕ್ಷೇತ್ರ ದ ಅಭಿವೃದ್ಧಿಗೆ ಅನುದಾನ ಸಿಗದೇ ಇರುವ ಕಾರಣ ಮುಖ್ಯಮಂತ್ರಿ ರಾಜ ಕೀಯ ಸಲಹೆಗಾರ ಸ್ಥಾನಕ್ಕೆ ರಾಜೀ ನಾಮೆ ನೀಡಿರುವುದಾಗಿ ಆಳಂದ ಶಾಸಕ ಬಿ.ಆರ್. ಪಾಟೀಲ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳಿಂದಾಗಿ ಇತರ ಶಾಸಕರಂತೆ ನನಗೂ ಕ್ಷೇತ್ರದ ಅಭಿವೃದ್ಧಿಗೆ ಅನುದಾನ ಸಿಗುತ್ತಿಲ್ಲ. ಇದಲ್ಲದೇ ಕೆಲವು ಸಮಸ್ಯೆಗಳು ಇರುವ ಕಾರಣ ದಿಂದ ನಾನು ರಾಜೀನಾಮೆ ನೀಡಿದ್ದೇನೆ ಎಂದು ತಿಳಿಸಿದ್ದಾರೆ.

ಅವರು ಶನಿವಾರ ತನ್ನ ಸ್ಥಾನಕ್ಕೆ ಅವರು ರಾಜೀನಾಮೆ ಸಲ್ಲಿಸಿದ್ದರು. ಆದರೆ, ತಮ್ಮ ದಿಢೀರ್ ತೀರ್ಮಾನಕ್ಕೆ ಕಾರಣ ಏನು ಎಂಬುದನ್ನು (3ನೇ ಪುಟಕ್ಕೆ)

# ಕೊನೆಯ ನಕ್ಸಲ್ ಲಕ್ಷ್ಮಿ ಶರಣು



ಉಡುಪಿ, ಫೆ. 2 - ಕರ್ನಾಟಕದ ಕೊನೆಯ ನಕ್ಸಲ್ ಎಂದು ಹೇಳಲಾದ ಲಕ್ಷ್ಮಿ ಬೇಷರತ್ತಾಗಿ ಉಡುಪಿ ಜಿಲ್ಲಾಧಿಕಾರಿ ವಿದ್ಯಾ ಕುಮಾರಿ ಹಾಗೂ ಪೊಲೀಸ್ ವರಿಷ್ಠಾಧಿಕಾರಿ ಕೆ. ಅರುಣ್ ಅವರ ಎದುರು ಶರಣಾಗಿದ್ದಾರೆ.

ಲಕ್ಷ್ಮಿ ವಿರುದ್ಧ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಮೂರು ಪ್ರಕರಣಗಳು ದಾಖಲಾಗಿದ್ದವು. ಲಕ್ಷ್ಮಿ ಆಂಧ್ರಪ್ರದೇಶದಲ್ಲಿ ತಲೆಮರೆಸಿಕೊಂಡಿದ್ದಾಗಿ ಪೊಲೀಸರು ಹೇಳಿದ್ದಾರೆ.

ಕುಂದಾಪುರ ತಾಲ್ಲೂಕಿನ ತೊಂಬಟ್ಟು ಹಳ್ಳಿಗೆ ಸೇರಿದ, ಲಕ್ಷ್ಮಿ ತನ್ನ ಕುಟುಂಬದಿಂದ ಹದಿನೈದು ವರ್ಷದ ಹಿಂದೆ ದೂರವಾಗಿದ್ದಾಗಿ ಪೊಲೀಸರು ತಿಳಿಸಿದ್ದಾರೆ.

ಚಿಕ್ಕಮಗಳೂರು ಹಾಗೂ ಉಡುಪಿ ಜಿಲ್ಲೆಗಳಲ್ಲಿ ಭೂಗತವಾಗಿ ನಕ್ಸಲ್ ಚಟುವಟಿಕೆಯಲ್ಲಿ ತೊಡಗಿದ್ದ ಲಕ್ಷ್ಮಿ ಈಗ ಮುಖ್ಯವಾಹಿನಿಗೆ ಬಂದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಜ್ಯ ಸರ್ಕಾರ ಶರಣಾಗತಿಗೆ ಶಿಷ್ಟಾಚಾರ ಹಾಗೂ ಪ್ಯಾಕೇಜ್ ಘೋಷಿಸಿದ ನಂತರ ನಾನು ಜಿಲ್ಲೆಯ ಅಧಿಕಾರಿಗಳ ಸಂಪರ್ಕದಲ್ಲಿದ್ದೆ ಹಾಗೂ ಶರಣಾಗಲು ಬಯಸಿದ್ದೆ. ಆದರೆ ಕೆಲ ಕಾರಣದಿಂದ ಅದು ಸಾಧ್ಯವಾಗಿರಲಿಲ್ಲ. ಈಗ ರಾಜ್ಯ ನಕ್ಸಲ್ ಶರಣಾಗತಿ ಸಮಿತಿ ರಚಿಸಲಾಗಿದೆ. ಆ ಮೂಲಕ ಶರಣಾಗಿರುವುದಾಗಿ ಪತ್ರಕರ್ತರಿಗೆ ಲಕ್ಷ್ಮಿ ಹೇಳಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶರಣಾಗತಿಗೆ ಉದಾರವಾದ ಪ್ಯಾಕೇಜ್ ಘೋಷಿಸಿದ್ದಾರೆ. ಅವರಿಗೆ ಧನ್ಯವಾದ ಸಲ್ಲಿಸುತ್ತೇನೆ. ನನ್ನ ವಿರುದ್ಧ ದಾಖಲಾಗಿರುವ ಪ್ರಕರಣಗಳನ್ನು ರದ್ದುಗೊಳಿಸಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ ಎಂದವರು ಹೇಳಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿರುವ ರಾಜ್ಯ ಶರಣಾಗತಿ ಸಮಿತಿಯ ಶ್ರೀಪಾಲ್, ನಕ್ಸಲರ ವಿರುದ್ಧದ ಪ್ರಕರಣಗಳನ್ನು ರದ್ದುಗೊಳಿಸಿ, ಶರಣಾಗತರಾದ ನಕ್ಸಲರು (3ನೇ ಪುಟಕ್ಕೆ)


|| Sri Venkateshwara Prasanna ||
We Cordially inivite you on the occasion of the
GRAND OPENING
of our
Venkateshwara ENT Clinic
on Monday, 3rd February 2025 at
8th Main, P.J. Extension Davanagere - 577002
Pooja : 9.15 AM
Awaiting your presence :
Mrs. Shobha K.P. & Dr. Prakash N.S M.S. (ENT)
Consulting ENT Head & Neck Surgeon
Professor, Department of ENT, J.J.M. Medical College DAVANAGERE - 577002
E-mail : drprakashns@gmail.com
web : www.jjmmc.org
M : 94803 43344


# ಭದ್ರಾ ನಾಲೆಯಲ್ಲಿ ಈಜಲು ಹೋದ ಇಬ್ಬರು ಬಾಲಕರು ನೀರುಪಾಲು



ದಾವಣಗೆರೆ, ಫೆ.2- ನಾಲೆಯಲ್ಲಿ ಈಜಲು ಹೋದ ಇಬ್ಬರು ಬಾಲಕರು ನೀರು ಪಾಲಾಗಿರುವ ಘಟನೆ ತಾಲ್ಲೂಕಿನ ಕುರ್ಕಿ ಗ್ರಾಮದಲ್ಲಿ ಭಾನುವಾರ ನಡೆದಿದೆ.

(2ನೇ ಪುಟಕ್ಕೆ)

## ಹರಿಹರದ ಪಿಸೆ ನಾಗರಾಜ್ ಐರಣಿ ನಿಧನ



ಹರಿಹರ ನಗರದ ರಾಜರಾಮ್ ಕಾಲೋನಿ ರಾಮಮಂದಿರದ ಹತ್ತಿರದ ನಿವಾಸಿಯಾದ ಕರ್ನಾಟಕ ರಾಜ್ಯ ನಾಮದೇವ ಶಿಂಪಿ ಸಮಾಜದ ಮಾಜಿ ಪ್ರಧಾನ ಕಾರ್ಯದರ್ಶಿಗಳು, ಹರಿಹರ ನಾಮದೇವ ಶಿಂಪಿ ಸಮಾಜದ ಹಾಲಿ ಪ್ರಧಾನ ಕಾರ್ಯದರ್ಶಿಗಳು, ಬಿಜೆಪಿ ನಗರ ಘಟಕದ ಮಾಜಿ ಅಧ್ಯಕ್ಷರು, ಮಾಜಿ ದೂಡಾ ಸದಸ್ಯರಾದ

**ಪಿಸೆ ನಾಗರಾಜ್ ಐರಣಿ (66)**

ಇವರು ದಿನಾಂಕ 2.02.2025ರ ಭಾನುವಾರ ಸಂಜೆ 6.30ಕ್ಕೆ ಸ್ವಗೃಹದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 03.02.2025ರ ಸೋಮವಾರ ಹರಿಹರ ನಗರದ ವಿಶ್ರಾಮಘಾಟ್ ನಲ್ಲಿ ಬೆಳಿಗ್ಗೆ 10 ಗಂಟೆಗೆ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗದವರು**


## ಭಾವಪೂರ್ಣ ಶ್ರದ್ಧಾಂಜಲಿ



ಕರ್ನಾಟಕ ರಾಜ್ಯದ ನಾಮದೇವ ಶಿಂಪಿ ಸಮಾಜದ
ಮಾಜಿ ಪ್ರಧಾನ ಕಾರ್ಯದರ್ಶಿಗಳು,
ಹರಿಹರ ನಾಮದೇವ ಶಿಂಪಿ ಸಮಾಜದ
ಹಾಲಿ ಪ್ರಧಾನ ಕಾರ್ಯದರ್ಶಿಗಳು,
ಬಿಜೆಪಿ ನಗರ ಘಟಕದ ಮಾಜಿ ಅಧ್ಯಕ್ಷರು,
ದೂಡಾ ಮಾಜಿ ಸದಸ್ಯರಾದ
**ಪಿಸೆ ಐರಣಿ ನಾಗರಾಜ್**
ಇವರು ದಿನಾಂಕ 02-02-2025 ರಂದು
ನಿಧನರಾಗಿದ್ದು ಶ್ರೀಯುತರಿಗೆ
ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು
ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು
ಭರಿಸುವಂತ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ
ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ದಾವಣಗೆರೆ ಜಿಲ್ಲೆಯ ಮಾಜಿ ಸಂಸದರಾದ **ಜಿ.ಎಂ. ಸಿದ್ದೇಶ್ವರ್,**
ಹರಿಹರ ಶಾಸಕರಾದ **ಬಿ.ಪಿ. ಹರೀಶ್,**
ಬಿಜೆಪಿ ಪಕ್ಷದ ಮಾಜಿ ಜಿಲ್ಲಾಧ್ಯಕ್ಷರಾದ **ಎಸ್.ಎಂ.ವೀರೇಶ್ ಹನಗವಾಡಿ,**
ಬಿಜೆಪಿ ನಗರ ಘಟಕದ ಅಧ್ಯಕ್ಷರಾದ **ಅಜಿತ್ ಸಾವಂತ್,**
ಬಿಜೆಪಿ ಗ್ರಾಮಾಂತರ ಘಟಕದ ಅಧ್ಯಕ್ಷರಾದ **ಎಂ.ಪಿ.ಲಿಂಗರಾಜ್ ಹಿಂಡಸಗಟ್ಟ,**
ನಗರ ಘಟಕದ ಪ್ರಧಾನ ಕಾರ್ಯದರ್ಶಿಗಳಾದ **ಹೆಚ್. ಮಂಜಾನಾಯ್ಕ್, ತುಳಜಪ್ಪ ಭೂತೆ,**
ಬಿಜೆಪಿ ಗ್ರಾಮಾಂತರ ಘಟಕದ ಪ್ರಧಾನ ಕಾರ್ಯದರ್ಶಿಗಳಾದ **ಮಹಾಂತೇಶ್ ಹುಗ್ಗಿ**
**ಆದಾಪುರ ವೀರೇಶ್** ಹಾಗೂ
**ಹರಿಹರ ತಾಲ್ಲೂಕು ಬಿಜೆಪಿ ಮುಖಂಡರು, ಕಾರ್ಯಕರ್ತರು, ಹರಿಹರ.**



JINDAL PANTHER TMT REBARS
We are Proud
To be Supplier of Steel for
Davangere Urban Co-Operative Bank Ltd




ದಾವಣಗೆರೆ ಜಿಲ್ಲೆಯ ಪ್ರತಿಷ್ಠಿತ ಸಹಕಾರಿ ಬ್ಯಾಂಕ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ
ದಾವಣಗೆರೆ ಅರ್ಬನ್ ಕೋ - ಆಪರೇಟಿವ್ ಬ್ಯಾಂಕ್‌ನ
ನೂತನ ಶಾಖೆಯ ಪ್ರಾರಂಭೋತ್ಸವಕ್ಕೆ ಹೃತ್ಪೂರ್ವಕ ಶುಭಾಶಯಗಳು.
EXCLUSIVE DEALER
ವಿಜಯ ಸ್ಟೀಲ್ ಸಪ್ಲೈಸ್
VIJAYA STEEL SUPPLIES
Opp. Hotel Pooja International, P.B. Road, DAVANGERE.
CEMENT | WIRE | TMT | ANGEL | CHANNEL | FLAT | SQAURE | ROUND | JOIST | PIPE | SHEET | PLATE
99000 56968 / 98443 56968

# ಸದ್ಗುಣಗಳ ಪ್ರಾಪ್ತಿಗೆ ದುರ್ಬುದ್ಧಿಯನ್ನು ತ್ಯಜಿಸಿ

## ಆಂಜನೇಯ ಸ್ವಾಮಿ ದೇಗುಲದ ಕಳಸಾರೋಣ ಕಾರ್ಯಕ್ರಮದಲ್ಲಿ ಡಾ. ಗುರುಬಸವ ಸ್ವಾಮೀಜಿ

ಹರಿಹರ, ಫೆ.2- ಸದ್ಗುಣಗಳ ಪ್ರಾಪ್ತಿಗಾಗಿ ಮಾನವ ದುರ್ಬುದ್ಧಿ ಹಾಗೂ ಕೆಟ್ಟ ಗುಣಗಳನ್ನು ತೊರೆದು ಜೀವನ ನಡೆಸಬೇಕು ಎಂದು ಪಾಂಡೋಮಟ್ಟಿ ವೀರಕ್ತಮಠದ ಡಾ. ಗುರುಬಸವ ಮಹಾಸ್ವಾಮೀಜಿ ತಿಳಿಸಿದರು.

ನಗರದ ಹೊರವಲಯದ ಅಮರಾವತಿ ಗ್ರಾಮದಲ್ಲಿ ಬೆಟ್ಟದ ಮಲ್ಲಿಕಾರ್ಜುನ ಮತ್ತು ಆಂಜನೇಯಸ್ವಾಮಿ ದೇಗುಲದ ಕಳಸಾರೋಹಣ, ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಪಾಲಕರು, ಮಕ್ಕಳಿಗೆ ಶಿಸ್ತು-ಸಂಯಮ ಹಾಗೂ ಸಂಸ್ಕೃತಿ-ಸಂಸ್ಕಾರದ ಅರಿವು ನೀಡುವ ಜತೆಗೆ ಅಧ್ಯಾತ್ಮಿಕ ತಳಹದಿಯ ಮೇಲೆ ಜೀವನ ರೂಪಿಸಿಕೊಳ್ಳುವ ಸನ್ಮಾರ್ಗವನ್ನು ಒದಗಿಸಬೇಕು ಎಂದು ಹೇಳಿದರು.

ದೇವನೊಬ್ಬ ನಾಮ ಹಲವು' ಆದ್ದರಿಂದ ದೇವರ ವಿಚಾರದಲ್ಲಿ ಪಕ್ಷಪಾತ ಮಾಡದೇ ಎಲ್ಲ ದೇವರನ್ನು ಏಕತೆಯಿಂದ ಕಾಣಬೇಕು. ಈ ನಿಟ್ಟಿನಲ್ಲಿ ಭಗವಂತನ ಮೇಲೆ ನಂಬಿಕೆ ಇಟ್ಟು, ಅವನ ಸೇವೆಯನ್ನು ಭಕ್ತಿಯಿಂದ ಮಾಡಿದರೆ, ನೆಮ್ಮದಿಯ ಬದುಕು ನಡೆಸಬಹುದು ಎಂದು ಹೇಳಿದರು.

ಮನಸ್ಸನ್ನು ದೇವಾಲಯದಂತೆ ಶುಚಿಗೊಳಿಸಿ, ಮಡಿವಂತಿಕೆಯಿಂದ ಕಾಣಬೇಕು. ಈ ದೃಷ್ಟಿಯಲ್ಲಿ ಮನಸ್ಸಿನ ಶುದ್ಧತೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮಾತನಾಡಿ, ಯುವಕರು ಧರ್ಮದ ಹಾದಿಯಲ್ಲಿ ನಡೆಯಬೇಕು. ಗುರು-ಹಿರಿಯರು ಹಾಗೂ ತಂದೆ-ತಾಯಿಯರನ್ನು ಗೌರವ ಭಾವದಿಂದ ಕಾಣಬೇಕು ಎಂದು ಕಿವಿಮಾತು ಹೇಳಿದರು.



ಧರ್ಮದ ರಕ್ಷಣೆ, ನಮ್ಮನ್ನು ಕಾಪಾಡಲಿದೆ. ಈ ಧ್ಯೇಯದೊಂದಿಗೆ ಅಮರಾವತಿ ಗ್ರಾಮಸ್ಥರು ಮಾಡಿದ ದೇವಸ್ಥಾನದ ಜೀರ್ಣೋದ್ಧಾರ ಸೇವೆ ಅವರಲ್ಲಿನ ಧಾರ್ಮಿಕ ಭಕ್ತಿಗೆ ಸಾಕ್ಷಿಯಾಗಿದೆ ಎಂದು ಶ್ಲಾಘಿಸಿದರು. ಇದಕ್ಕೂ ಮೊದಲು ಬ್ರಾಹ್ಮೀ ಮುಹೂರ್ತದಲ್ಲಿ ಆಂಜನೇಯ ಸ್ವಾಮಿಯ ಶಿಲಾ ಮೂರ್ತಿಗೆ ವಿಶೇಷ ರುದ್ರಾಭಿಷೇಕ, ಅಲಂಕಾರ, ಮಹಾಮಂಗಳಾರತಿ ನಡೆದ ತರುವಾಯ ಉಭಯ ಪೂಜ್ಯರ ಹಸ್ತದಿಂದ ಪ್ರಾಣ ಪ್ರತಿಷ್ಠಾಪನೆ, ಕಳಸರೋಹಣ ಮಾಡಲಾಯಿತು.

ಆವರಗೊಳ್ಳದ ಓಂಕಾರ ಶಿವಾಚಾರ್ಯ ಶ್ರೀಗಳು, ಸಾಧು ವೀರಶೈವ ಸಮಾಜದ ಅಧ್ಯಕ್ಷ ಮಹಾದೇವಪ್ಪ ಗೌಡ್ರು, ಓಂ ಶಾಂತಿ ಯಶೋಧಮ್ಮ, ಸುಖಮನಿ ಸ್ವಾಮಿಗಳು ಮಾತನಾಡಿದರು.

ಇದೇ ವೇಳೆ ಬಸವರಾಜಪ್ಪ ಪೂಜಾರ್, ರಾಮಪ್ಪ ಪೂಜಾರ್, ಶಿವಯೋಗಿಸ್ವಾಮಿ, ವೀರಾಚಾರ್, ವೈ. ಮಲ್ಲೇಶ್, ಎಂ. ಚಿದಾನಂದ ಕಂಚಿಕೇರಿ ಅವರು ಶ್ರೀಗಳಿಂದ ಗುರು ರಕ್ಷೆ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಕಾಶಿನಾಥಯ್ಯ ಸ್ವಾಮಿಗಳು, ಎ.ಬಿ. ವಿಜಯಕುಮಾರ್, ಭೋಗೇಶಪ್ಪ ಬಣಕಾರ, ಪಾಲಾಕ್ಷಪ್ಪ, ಹೆಚ್.ಬಿ ನಾಗರಾಜ್, ಎ.ಬಿ.ಸಿ ಬಸವರಾಜ್, ಲಿಂಗರಾಜ್, ಹೆಚ್.ಎಂ. ಸುರೇಶ್, ಕರಿಬಸಪ್ಪ, ಎ. ಪರಮೇಶ್ವರಪ್ಪ, ಹೆಚ್.ಸಿ. ನಾಗರಾಜ್, ಯೋಗೀಶ್, ಹೆಚ್. ರಾಜು, ಹನುಮಂತ ಗೌಡ್ರು, ಕಂಚಿಕೇರಿ ಮಹೇಶ್ವರಪ್ಪ, ಎ.ಎಂ.ಸಿ. ಹನುಮಂತಪ್ಪ, ಬೆಟ್ಟಪ್ಪರ ಮಲ್ಲೇಶಪ್ಪ, ಗೌಡ್ರು ಶೇಖರಪ್ಪ, ಕರೂರು ಹಾಲಪ್ಪ, ಹಿರಿಬಿದರಿ ಸಿದ್ದಪ್ಪ, ಜಟ್ಟೆಪ್ಪ, ಬಾಳೆಮರದ ಬಸವರಾಜ್, ಚಳಗೇರಿ ಹನುಮಂತಪ್ಪ, ಚಂದ್ರಪ್ಪ, ಬಲ್ಲೂರು ಹಾಲಪ್ಪ, ಹನುಮಂತಪ್ಪ, ಹೊನ್ನಪ್ಪ, ಹರೀಶ್ ಇದ್ದರು.

# ಯಲವಟ್ಟಿ ಮಠದ ಸತ್ಸಂಗ ಕಾರ್ಯಕ್ರಮಕ್ಕೆ ಕೆನಡಾದಿಂದ ದಾಸೋಹ ವ್ಯವಸ್ಥೆ : ಮೆಚ್ಚುಗೆ



ಮಲೇಬೆನ್ನೂರು, ಫೆ.2- ಯಲವಟ್ಟಿಯ ಶ್ರೀ ಗುರುಸಿದ್ಧಾಶ್ರಮದಲ್ಲಿ ಪ್ರತಿ ತಿಂಗಳು ಅಮಾವಾಸ್ಯೆ ದಿನದಂದು ನಡೆಯುವ ಸತ್ಸಂಗ ಕಾರ್ಯಕ್ರಮ ವನ್ನು ಆನ್‌ಲೈನ್‌ನಲ್ಲಿ ವೀಕ್ಷಣೆ ಮಾಡುತ್ತಿದ್ದ ಕೆನಡಾ ದೇಶದಲ್ಲಿರುವ ಹೈದರಾಬಾದ್ ಮೂಲಕ ಶ್ರೀಮತಿ ಗೀತಾ ಮತ್ತು ಶ್ರೀನಿವಾಸ್ ಯಲಮಂಚಿ ದಂಪತಿ ಶ್ರೀಮಠದಲ್ಲಿ ಜರುಗಿದ ಮೌನಿ ಅಮಾವಾಸ್ಯೆ ಸತ್ಸಂಗ ಕಾರ್ಯಕ್ರಮದ ದಾಸೋಹಿಗಳಾಗಿ ಗಮನ ಸೆಳೆದರು.

ಅಷ್ಟೇ ಅಲ್ಲದೇ, ಸತ್ಸಂಗ ಕಾರ್ಯಕ್ರಮದಲ್ಲಿ ಮೊಬೈಲ್ ಮೂಲಕ ಕೆನಡಾದಿಂದ ಮಾತನಾಡಿದ ಶ್ರೀಮತಿ ಗೀತಾ ಮತ್ತು ಶ್ರೀನಿವಾಸ್ ದಂಪತಿಗಳು ಸತ್ಸಂಗ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಹುಬ್ಬಳ್ಳಿಯ ಸಿದ್ಧಾರೂಢ ಮಠ ಬರುವ ಸಂಕಲ್ಪ ಇದ್ದು ಈ ವೇಳೆ ಯಲವಟ್ಟಿ ಮಠಕ್ಕೂ ಬರುವುದಾಗಿ ಹೇಳಿದರು.

ಸತ್ಸಂಗ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಅಧ್ಯಾತ್ಮ ಚಿಂತಕ ಸಿರಿಗೆರೆಯ ಡಾ. ಸಿದ್ದೇಶ್ ಅವರು, ಹೊಳೆಸಿರಿಗೆರೆಯ ಸಾಫ್ಟ್‌ವೇರ್ ಇಂಜಿನಿಯರ್ ವೆಂಕಟೇಶ್‌ಗೌಡ ಅವರಿಗೆ ಪರಿಚಿತರಾಗಿರುವ ಕೆನಡಾ ದೇಶದಲ್ಲಿ ಉದ್ಯೋಗ ಮಾಡುತ್ತಿರುವ ಶ್ರೀಮತಿ ಗೀತಾ ಮತ್ತು ಶ್ರೀನಿವಾಸ್ ದಂಪತಿಗಳು ಮೊದಲಿನಿಂದಲೂ ಗುರುಪರಂಪರೆ ಯನ್ನು ಮೈಗೂಡಿಸಿಕೊಂಡು ಬಂದಿದ್ದಾರೆ.

ಸಿದ್ಧಾರೂಢರ ಆತ್ಮ ಚರಿತ್ರೆಯನ್ನು 98 ಬಾರಿ ಪಾರಾಯಣ ಮಾಡಿರುವ ಅವರು, 108ನೇ ಪಾರಾಯಣವಾದ ನಂತರ ಹುಬ್ಬಳ್ಳಿ ಮಠಕ್ಕೆ ಬರುವುದಾಗಿ ಹೇಳಿದ್ದಾರೆ ಎಂದು ವೆಂಕಟೇಶ್‌ಗೌಡ ತಮ್ಮ ಭಾಷಣದಲ್ಲಿ ತಿಳಿಸಿದರು.

ಸಾನ್ನಿಧ್ಯ ವಹಿಸಿದ್ದ ಶ್ರೀ ಯೋಗಾನಂದ ಸ್ವಾಮೀಜಿ ಆಶೀರ್ವಚನ ನೀಡಿ, ಕಡಲಾಚೆಯೂ ಸಿದ್ಧಾರೂಢರ ಭಕ್ತರಿದ್ದಾರೆಂಬ ವಿಷಯ ತಿಳಿದು ಸಂತೋಷವಾಯಿತು.

ಸೇವೆ, ದಾನ, ಧರ್ಮದಲ್ಲಿ ಬಹಳ ಪುಣ್ಯ ಇದ್ದು, ಆಗಾಧ ಶಕ್ತಿ ಇರುವ 'ಓ ನಮಃ ಶಿವಾಯ' ಎಂಬ ಪಂಚಾಕ್ಷರಿ ಮಹಾಮಂತ್ರವನ್ನು ನಿತ್ಯ ಪಠಿಸಿ ಎಂದು ಸ್ವಾಮೀಜಿ ಭಕ್ತರಿಗೆ ಹೇಳಿದರು.

ಸಿದ್ಧಾರೂಢ ರಥಯಾತ್ರೆ ಫೆ.8ರ ಸಂಜೆ 7 ಗಂಟೆಗೆ ಹರಿಹರಕ್ಕೆ ಆಗಮಿಸಲಿದೆ ಎಂದು ಸ್ವಾಮೀಜಿ ತಿಳಿಸಿದರು.

ಹೊಳೆಸಿರಿಗೆರೆಯ ಕುಂದೂರು ಮಂಜಪ್ಪ ಕವಿತೆ ಹಾಡಿದರೆ, ಕುಂಬಳೂರು ಕುಬೇರಪ್ಪ, ಹೊಳೆಸಿರಿಗೆರೆಯ ವೆಂಕಟೇಶಗೌಡ ಭಕ್ತಿಗೀತೆ ಹಾಡಿದರು.

ಗ್ರಾಮದ ಹಿರಿಯ ಮುಖಂಡ ಡಿ. ಯೋಮಕೇಶ್ವರಪ್ಪ, ಜಿ.ಆಂಜನೇಯ, ಜಿಗಳಿ ಆನಂದಪ್ಪ, ಬಿ.ಸೋಮೇಶೇಖರಾಚಾರಿ, ರಂಗಪ್ಪ, ಯಲವಟ್ಟಿಯ ಎ.ಸುರೇಶ್, ಹೊಸಮನಿ ಮಲ್ಲಪ್ಪ, ಟಿ.ಮಂಜಪ್ಪ, ಡಿ.ರಾಜಪ್ಪ, ಸುಬೇದಾರ್ ಶಿವಕುಮಾರ್, ಸಿರಿಗೆರೆಯ ಜಿ.ವಿ. ಹನುಮಂತಗೌಡ, ರೇವಣಸಿದ್ದಯ್ಯ, ಮಾಗೋಡ ಸಿದ್ದಣ್ಣ, ಅಶೋಕಪ್ಪ, ಕುಂಬಳೂರಿನ ಸದಾಶಿವ, ಭೂಪಾಲಪ್ಪ, ನಾಗರಾಜ್, ಪತ್ರಕರ್ತರಾದ ಜಿಗಳಿ ಪ್ರಕಾಶ್, ನಾಗೇಂದ್ರಪ್ಪ, ಸದಾನಂದ್ ಭಾಗವಹಿಸಿದ್ದರು.

ಅಮೃತ, ಆರಾಧ್ಯ ಪ್ರಾರ್ಥಿಸಿದರು. ಪಿಎಸಿಎಸ್ ಸಿಇಓ ಶೇಖರಪ್ಪ ಸ್ವಾಗತಿಸಿದರು.

# ಇಂದು ಜಿಎಂ ವಿವಿಯ 'ಜ್ಞಾನ ಸರಣಿ; ಶೀರ್ಷಿಕೆಯಡಿ ಪುಸ್ತಕ ಲೋಕಾರ್ಪಣೆ

ದಾವಣಗೆರೆ, ಫೆ.2- ನಗರದ ಜಿ.ಎಂ. ವಿಶ್ವವಿದ್ಯಾಲಯದ ವತಿಯಿಂದ 'ಜ್ಞಾನ ಸರಣಿ' ಶೀರ್ಷಿಕೆಯಡಿ ಒಟ್ಟು 9 ವಿವಿಧ ವಿಷಯಗಳಿಗೆ ಸಂಬಂಧಿಸಿದ ಪುಸ್ತಕಗಳ ಲೋಕಾರ್ಪಣೆ ಕಾರ್ಯಕ್ರಮ ನ್ನು ನಾಳೆ ದಿನಾಂಕ 3 ರ ಸೋಮವಾರ ಜಿಎಂ ವಿವಿಯ ಎ.ವಿ. ಕೊಠಡಿಯಲ್ಲಿ ನಡೆಯಲಿದೆ ಎಂದು ತರಬೇತಿ ಮತ್ತು ಉದ್ಯೋಗ ವಿಭಾಗದ ನಿರ್ದೇಶಕ ಟಿ.ಆರ್. ತೇಜಸ್ವಿ ಕಟ್ಟಿಮನಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಿ.ಎಂ. ವಿವಿಯ ಕುಲಪತಿ ಡಾ.ಎಸ್.ಆರ್.ಶಂಕಪಾಲ್ ಅವರ ನಾಲ್ಕು, ಫಾರ್ಮಸಿ ವಿಭಾಗದ ವಿವಿಧ ಪ್ರಾಧ್ಯಾಪಕರ ನಾಲ್ಕು ಹಾಗೂ ಬೆಂಗಳೂರಿನ ದಂತ ವೈದ್ಯೆ ಡಾ. ಉಮಾ ಮುರುಳೀಧರ್ ವಿರಚಿತ ಒಂದು ಪುಸ್ತಕವನ್ನು ಬಿಡುಗಡೆ ಮಾಡಲಾಗುವುದು.

ಅಂದು ಬೆಳಿಗ್ಗೆ 10.30ಕ್ಕೆ ನಡೆಯಲಿರುವ ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ವಿವಿ ಕುಲಾಧಿಪತಿ ಜಿ.ಎಂ. ಲಿಂಗರಾಜ್, ಕುಲಪತಿ ಡಾ. ಎಸ್.ಆರ್. ಶಂಕಪಾಲ್, ಉಪ ಕುಲಪತಿ ಡಾ.ಹೆಚ್.ಡಿ. ಮಹೇಶ್ವರಪ್ಪ, ಪ್ರಾಚಾರ್ಯ ಡಾ. ಎಂ.ಬಿ. ಸಂಜಯ್ ಪಾಂಡೆ ಮತ್ತು ಇತರರು ಪಾಲ್ಗೊಳ್ಳಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಜಿಎಂ ವಿವಿಯ ಮಾನವ ಸಂಪನ್ಮೂಲ ನಿರ್ದೇಶಕ ಡಾ.ಟಿ.ಎಂ. ವೀರಗಂಗಾಧರ ಸ್ವಾಮಿ, ಜಿ.ಎಂ ಇನ್‌ಸ್ಟಿ ಟ್ಯೂಟ್ ಆಫ್ ಫಾರ್ಮಾಸ್ಯೂಟಿಕಲ್ ಸೈನ್ಸ್ ಅಂಡ್ ರಿಸರ್ಚ್ ಪ್ರಾಂಶುಪಾಲ ಡಾ. ಗಿರೀಶ್ ಬೋಳಕಟ್ಟೆ ಉಪಸ್ಥಿತರಿದ್ದರು.

# ಇಬ್ಬರು ಬಾಲಕರು ನೀರುಪಾಲು

**(1ನೇ ಪುಟದಿಂದ)** ಕುರ್ಕಿ ಗ್ರಾಮದ ಪಾಂಡು (16) ಹಾಗೂ ತುರ್ಚಘಟ್ಟ ಗ್ರಾಮದ ಯತೀಂದ್ರ (16) ಮೃತ ಬಾಲಕರು. ದಾವಣಗೆರೆಯ ಗುರುಕುಲ ವಸತಿ ಶಾಲೆಯಲ್ಲಿ ಎಸ್ಸೆಸ್ಸೆಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಇವರು, ರವಿವಾರ ಶಾಲೆಗೆ ರಜೆ ಇದ್ದಿದ್ದರಿಂದ ಕುರ್ಕಿ ಗ್ರಾಮದಲ್ಲಿರುವ ಸಲೂನ್ ಗೆ ಕಟಿಂಗ್ ಮಾಡಿಸಿಕೊಳ್ಳಲು ಬಂದಿದ್ದರು.

ಗ್ರಾಮದ ಬಳಿ ಹರಿಯುತ್ತಿರುವ ಭದ್ರಾ ಕಾಲುವೆಯಲ್ಲಿ ಪಾಂಡು ಮತ್ತು ಯತೀಂದ್ರ ಈಜಲು ಹೋಗಿದ್ದಾರೆ. ಈಜು ಬರುತ್ತಿದ್ದ ಪಾಂಡು ಕಾಲುವೆಗೆ ಜಿಗಿದು ಈಜಾಡುತ್ತಿದ್ದ. ನಂತರ ಈಜಲು ಬಾರದ ಯತೀಂದ್ರನೂ ಜಿಗಿದಿದ್ದಾನೆ. ಈ ವೇಳೆ ಯತೀಂದ್ರ ಮುಳುಗಿ ಏಳುತ್ತಿದ್ದಾಗ ಪಾಂಡು ಅವನನ್ನು ರಕ್ಷಿಸಲು ಹೋಗಿ ಇಬ್ಬರೂ ನೀರು ಪಾಲಾಗಿದ್ದಾರೆ ಎನ್ನಲಾಗಿದೆ. ಬಾಲಕರು ಈಜುತ್ತಿದ್ದ ಸಮೀಪವೇ ಗೇಟ್ ಇದ್ದು, ಈ ಗೇಟ್ ಬಳಿ ಪಾಂಡು ಮೃತದೇಹ ಪತ್ತೆಯಾಗಿದೆ. ಯತೀಂದ್ರನ ಮೃತದೇಹ ಸಿಕ್ಕಿಲ್ಲ. ಘಟನಾ ಸ್ಥಳಕ್ಕೆ ಶಾಸಕ ಕೆ.ಎಸ್.ಬಸವಂತಪ್ಪ ಭೇಟಿ ನೀಡಿ ನೀರು ಪಾಲಾದ ಬಾಲಕರ ಮೃತದೇಹ ಹೊರ ತೆಗೆಯಲು ಸಹಕರಿಸಿದ್ದಾರೆ.

ಬಾಲಕರು ನೀರು ಪಾಲಾದ ಸುದ್ದಿ ಹಬ್ಬುತ್ತಿದ್ದಂತೆ ಕುರ್ಕಿ ಗ್ರಾಮ ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ಜನರು ಬೈಕ್, ಕಾರು, ಟ್ರ್ಯಾಕ್ಟರ್ ಗಳಲ್ಲಿ ದೌಡಾಯಿಸಿದ್ದು, ಕಾಲುವೆ ಬಳಿ ಜನಸಾಗರ ಸೇರಿದೆ. ಪೋಷಕರ ಆಕ್ರಂದನ ಮುಗಿಲು ಮುಟ್ಟಿದೆ.



# ಭಾರತೀಯ ಸಂಸ್ಕೃತಿಯಲ್ಲಿ ಮಾನವೀಯ ಮೌಲ್ಯಗಳು ಜೀವಂತ : ಅನಂತ ರೆಡ್ಡಿ

ಜಗಳೂರು, ಫೆ. 2- ಭಾರತೀಯ ಸಂಸ್ಕೃತಿಯಲ್ಲಿ ಮಾನವೀಯ ಮೌಲ್ಯಗಳು ಜೀವಂತವಾಗಿವೆ ಎಂದು ನಿವೃತ್ತ ಪ್ರಾಂಶುಪಾಲ ಕೆ.ಎಸ್. ಅನಂತರೆಡ್ಡಿ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ 2000-2001ನೇ ಸಾಲಿನ ಪಿಯುಸಿ ಕಲಾ ವಿಭಾಗದ ವಿದ್ಯಾರ್ಥಿಗಳಿಂದ ಹಮ್ಮಿಕೊಂಡಿದ್ದ ಗುರುವಂದನ ಹಾಗೂ ಸ್ನೇಹ ಸಮ್ಮಿಲನ, ಬೆಳ್ಳಿ ಹಬ್ಬದ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಹಳೇ ವಿದ್ಯಾರ್ಥಿಗಳು ಕಾಲೇಜು ಹಂತವನ್ನು ಸ್ಮರಿಸಿಕೊಂಡು ಆಯೋಜನೆ ಮಾಡುವ ಗುರುವಂದನಾ ಕಾರ್ಯಕ್ರಮಗಳು ನಮ್ಮ ಭವ್ಯ ಸಂಸ್ಕೃತಿಗೆ ಸಾಕ್ಷಿಯಾಗುತ್ತವೆ. ಪ್ರಸ್ತುತ ದಿನಮಾನಗಳಲ್ಲಿ ಮನುಷ್ಯನ ವರ್ತನೆ, ಮಾನಸಿಕ ಸಾಮರ್ಥ್ಯದ ಆಲೋಚನೆಗಳು ಬದಲಾಗಿವೆ. ಅದರ ಮಧ್ಯೆಯೂ ತಮ್ಮ ಪ್ರೀತಿ, ಪ್ರಶಂಸೆ, ಗುರುಭಕ್ತಿ ಶಿಕ್ಷಕ ವೃತ್ತಿಗೆ ಮತ್ತಷ್ಟು ಸ್ಫೂರ್ತಿದಾಯಕ ಎಂದು ಹೇಳಿದರು.

ನಿವೃತ್ತ ಪ್ರಾಂಶುಪಾಲ ಶಿವಕುಮಾರ್ ಮಾತನಾಡಿ, ಜಗಳೂರಿನಲ್ಲಿ ಸರ್ಕಾರಿ ಕಾಲೇಜು ಇರುವುದೇ ಗೊತ್ತಿಲ್ಲದ ಸಂದರ್ಭದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಏರಿಕೆಯ ಜೊತೆಗೆ ಪಠ್ಯೇತರ ಚಟುವಟಿಕೆ, ಸ್ವಚ್ಛತೆ, ಉತ್ತಮ ಫಲಿತಾಂಶ ಏರಿಕೆಗೆ ಕಾಳಜಿವಹಿಸಿ ಪ್ರಾಂಶುಪಾಲನಾಗಿ ನನ್ನ ಜವಾಬ್ದಾರಿ ನಿಭಾಯಿಸಿದ ನೆಮ್ಮದಿಯಿದೆ ಎಂದರು.

ಇತ್ತೀಚೆಗೆ ಆಡಳಿತ ಸರ್ಕಾರಗಳು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳನ್ನು ಖಾಸಗೀಕರಣಗೊಳಿಸುತ್ತಿರುವುದರಿಂದ ನಿರುದ್ಯೋಗಿ ಪದವೀಧರರ ಸಂಖ್ಯೆ ಹೆಚ್ಚುತ್ತಿದೆ. ಸರ್ಕಾರದ ಅನ್ನ ತಿಂದವರು ಸರ್ಕಾರಿ ಶಾಲೆಗಳನ್ನು ಉಳಿಸಲು ಮುಂದಾಗಿ ಋಣ ತೀರಿಸಬೇಕು. ಶಿಕ್ಷಣ ಪಡೆದವರು ಜಾಗೃತರಾಗದಿದ್ದರೆ ದೇಶದಲ್ಲಿ ಅಪಾಯಕಾರಿ ಬೆಳವಣಿಗೆ ಸಾಧ್ಯ ಎಂದು ಆತಂಕ ವ್ಯಕ್ತಪಡಿಸಿದರು.

ನಿವೃತ್ತ ಪ್ರಾಂಶುಪಾಲ ಕೆ.ಎಸ್. ಅನಂತರೆಡ್ಡಿ, ಬಿ.ಆರ್. ಶಿವಕುಮಾರ್, ನಿವೃತ್ತ ಉಪನ್ಯಾಸಕರಾದ ಶಹನಾಜ್ ಬೇಗಂ, ಸಮಿಉಲ್ಲಾ, ರಾಮಚಂದ್ರಪ್ಪ ಅವರಿಗೆ ಸನ್ಮಾನಿಸಿ, ಗೌರವಿಸಲಾಯಿತು.

ಪ್ರಾಂಶುಪಾಲ ಜಗದೀಶ್, ಬಿಆರ್ ಸಿ ಡಿ.ಡಿ. ಹಾಲಪ್ಪ, ಉಪನ್ಯಾಸಕರಾದ ಮಂಜುನಾಥ್ ರೆಡ್ಡಿ, ಮಹಮ್ಮದ್ ಬಾಷ, ಹಳೇ ವಿದ್ಯಾರ್ಥಿಗಳಾದ ನಿವೃತ್ತ ಸೈನಿಕ ವಿರುಪಾಕ್ಷಿ, ಕಲ್ಲೇದೇವರಪುರ ಬಾಬು, ಅನಿಲ್ ಕುಮಾರ್, ಮರುಳಾರಾಧ್ಯ, ತಾಸೀನ, ಬಸವರಾಜ್, ನೌಸಿಯಾ, ಸಮೀನಾ ಕೌಸರ್, ನೂರ್ ಅಹಮ್ಮದ್, ಶಿಲ್ಪ, ಡಾ.ಬಸವರಾಜ್ ಇದ್ದರು.

# ವಿವಿಧ ಕಂಪನಿಯ 25 ಸ್ಮಾರ್ಟ್ ಫೋನ್ ಖಾಕಿ ವಶಕ್ಕೆ



**ಕೊಟ್ಟೂರು**

ಕೊಟ್ಟೂರು, ಜ.2- ಸಿ.ಇ.ಐ.ಆರ್. ಪೋರ್ಟಲ್ ಮೂಲಕ ದಾಖಲಾದ ಮೊಬೈಲ್ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ತಾಲ್ಲೂಕಿನ ಪೊಲೀಸರು 25 ವಿವಿಧ ಕಂಪನಿಗಳ ಸ್ಮಾರ್ಟ್ ಫೋನ್‌ಗಳನ್ನು ವಶಕ್ಕೆ ಪಡೆದಿದ್ದಾರೆ. ಮೊಬೈಲ್ ಕಳ್ಳತನ ಪ್ರಕರಣದ ಪತ್ತೆ ಕಾರ್ಯಕ್ಕೆ ಇಳಿದಿದ್ದ ಪೊಲೀಸರು, 5 ಲಕ್ಷ ಬೆಲೆ ಬಾಳುವ ವಿವಿಧ ಕಂಪನಿಗಳ 25 ಮೊಬೈಲ್‌ಗಳನ್ನ ಜಪ್ತಿ ಮಾಡಿ, ವಾರಸುದಾರರಿಗೆ ಹಿಂದಿರುಗಿಸಿದ್ದಾರೆ.

# ಮಡಿವಾಳ ಮಾಚಿದೇವರ ಜಯಂತಿ



ಹರಪನಹಳ್ಳಿ, ಜ.2- ತಾಲ್ಲೂಕಿನ ಸಿಂಗ್ರಿಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಶನಿವಾರ ಬೆಳಗ್ಗೆ ಮಡಿವಾಳ ಮಾಚಿದೇವರ ಜಯಂತಿ ಆಚರಿಸಲಾಯಿತು.

ಈ ವೇಳೆ ಎಸ್.ಡಿ.ಎಂ.ಸಿ ಅಧ್ಯಕ್ಷ ಸಿ. ಹಾಲೇಶ್, ಉಪಾಧ್ಯಕ್ಷೆ ರೇವತಿ, ಸದಸ್ಯರಾದ ಟಿ. ಯೋಗೇಶ್, ಸಿದ್ದಲಿಂಗಪ್ಪ, ವೆಂಕಟೇಶ್, ರಾಮಪ್ಪ, ನಾಮನಿರ್ದೇಶಕ ಮುಖ್ಯ ಶಿಕ್ಷಕ ಕೃಷ್ಣಮೂರ್ತಿ, ಗ್ರಾ.ಪಂ ಅಧ್ಯಕ್ಷೆ ಲಚ್ಚಿಬಾಯಿ ಗುಡ್ಡೆ ನಾಯ್ಕ, ಉಪಾಧ್ಯಕ್ಷೆ ಹನುಮಕ್ಕ ಭೂತಪ್ಪ, ಸದಸ್ಯರಾದ ಎಸ್.ಎನ್. ಮಂಜುನಾಥ್ ಕಾರಬಾರಿ, ರಾಜ ನಾಯಕ್, ಕೆ.ಹೆಚ್ ಕುಬೇಂದ್ರಪ್ಪ, ರೂಪ ನಾಗರಾಜ್, ಟಿ. ಶೇಖರಪ್ಪ, ಇ. ಪಕ್ಕೀರಪ್ಪ, ಹೆಚ್. ನಾಗರಾಜ, ಎಂ. ಮಲ್ಲೇಶಪ್ಪ, ಟಿ.ಪಿ ಹನುಮಂತಪ್ಪ, ಎಂ. ಪ್ರವೀಣ್ ಕುಮಾರ್, ಟಿ.ಇ ಫಕ್ಕೀರಾಜ್, ಬಿಸಿ ಊಟ ಹಾಗೂ ಶಾಲಾ ಸಿಬ್ಬಂದಿ ಇದ್ದರು.

# ಪ್ರೊ. ಗಾಯತ್ರಿ ಸೇರಿ 10 ಜನರ ಬಂಧನ

**(1ನೇ ಪುಟದಿಂದ)** ಎಲ್.ಮಂಜುನಾಥ ರಾವ್, ಬೆಂಗಳೂರು ವಿಶ್ವ ವಿದ್ಯಾಲಯದ ಉಪನ್ಯಾಸಕ ಎಂ. ಹನುಮಂತಪ್ಪ ಹಾಗೂ ಶಾಮ ಸುಂದರ್ ಅವರ ಹೆಸರುಗಳಿವೆ. ಆದರೆ, ಇವ ರನ್ನು ಇದುವರೆಗೂ ಬಂಧಿಸಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

ಕೆಎಲ್‌ಇಎಫ್ ಉಪಕುಲಪತಿ ಜಿ.ಪಿ. ಶರದಿವರ್ಮ, ಕೆಎಲ್‌ಇಎಫ್ ಉಪಾಧ್ಯಕ್ಷ ಕೊನೇರು ರಾಜ ಹರೀನ್, ಕೆ.ಎಲ್. ವಿಶ್ವವಿದ್ಯಾಲಯದ ನಿರ್ದೇಶಕ ಎ. ರಾಮಕೃಷ್ಣ ಅವರು ಎ++ ಮಾನ್ಯತೆ ಪಡೆಯಲು ನ್ಯಾಕ್ ಪರಿಶೀಲನ ಸಮಿತಿ ಸದಸ್ಯರ ಜೊತೆ ಭ್ರಷ್ಟಾಚಾರ ನಡೆಸಿದ್ದರು ಎಂದು ಸಿಬಿಐ ಆರೋಪಿಸಿದೆ.

ನ್ಯಾಕ್ ಪರಿಶೀಲನ ಸಮಿತಿ ಅಧ್ಯಕ್ಷ ಸಮರೇಂದ್ರ ನಾಥ ಸಹಾ ಅವರನ್ನು ಬಂಧಿಸಲಾಗಿದೆ. ಅವರು ರಾಮಚಂದ್ರ ಚಂದ್ರವಂಶಿ ವಿಶ್ವವಿದ್ಯಾಲಯದ ಉಪಕುಲಪತಿಯೂ ಆಗಿದ್ದಾರೆ.

ಸಮಿತಿಯ ಸದಸ್ಯರಾದ ಜವಹರಲಾಲ್ ನೆಹರು ವಿಶ್ವವಿದ್ಯಾಲಯದ ಉಪನ್ಯಾಸಕ ರಾಜೀವ್ ಸಿಜರಿಯ, ಭರತ್ ಕಾನೂನು ಸಂಸ್ಥೆಯ ಡೀನ್ ಡಿ. ಗೋಪಾಲ್, ಜಾಗರಣ್ ಲೇಕ್ ಸಿಟಿ ವಿಶ್ವವಿದ್ಯಾಲಯದ ಡೀನ್ ರಾಜೇಶ್ ಸಿಂಗ್ ಪವಾರ್, ಜಿ.ಎಲ್. ಬಜಾಜ್ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಮ್ಯಾನೇಜ್ಮೆಂಟ್ ನಿರ್ದೇಶಕ ಮಾನಸ್ ಕುಮಾರ್ ಮಿಶ್ರಾ, ದಾವಣಗೆರೆ ವಿಶ್ವವಿದ್ಯಾಲಯದ ಪ್ರೊ. ಗಾಯತ್ರಿ ದೇವರಾಜ ಹಾಗೂ ಸಂಬಲ್ಪುರ ವಿಶ್ವವಿದ್ಯಾಲಯದ ಪ್ರೊ. ಡಿ. ಮಹಾರಾಣ ಅವರನ್ನು ಬಂಧಿಸಲಾಗಿದೆ ಎಂದು ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ.

ನ್ಯಾಕ್ ಪರಿಶೀಲನ ತಂಡದ ಸದಸ್ಯರಿಗೆ ಲಂಚ ನೀಡಲಾಗಿತ್ತು. ಹಣ, ಬಂಗಾರ, ಮೊಬೈಲ್ ಫೋನ್ ಹಾಗೂ ಲ್ಯಾಪ್‌ಟಾಪ್‌ಗಳನ್ನು ಶೋಧ ಕಾರ್ಯಾಚರಣೆ ವೇಳೆ ವಶಪಡಿಸಿಕೊಳ್ಳಲಾಗಿದೆ ಎಂದು ಸಿಬಿಐ ವಕ್ತಾರರು ಹೇಳಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಚೆನ್ನೈ, ಬೆಂಗಳೂರು, ವಿಜಯವಾಡ, ನವದೆಹಲಿ ಸೇರಿದಂತೆ 20 ಕಡೆ ದಾಳಿ ನಡೆಸಲಾಗಿತ್ತು.

# ತರಳಬಾಳು ಹುಣ್ಣಿಮೆ : ಬೈಕ್ ರ್‍ಯಾಲಿ



**(1ನೇ ಪುಟದಿಂದ)** ಶ್ರೀನಿವಾಸ್ ರಾಮಘಟ್ಟ, ಸಿದ್ದೇಶ್ ನಂದಿಕಂಬ, ರಾಕೇಶ್ ಸಾತಿ, ಲಿಂಗರಾಜ್ ನಾಗನೂರು, ಅಶೋಕ್ ಹೊನ್ನ ನಾಯಕನಹಳ್ಳಿ, ಮಲ್ಲಿಕಾರ್ಜುನ್ ಮೆಳ್ಳೇಕಟ್ಟೆ, ಸಂತೋಷ್ ಗಂಗನಕಟ್ಟೆ ಮತ್ತಿತರ ಪದಾಧಿಕಾರಿಗಳು ಹಾಗೂ ಗಣ್ಯರು ಹಾಜರಿದ್ದರು

**ಜಗದ್ಗುರುಗಳು ಆಗಮಿಸುವ ಮಾರ್ಗ :** ನಾಳೆ ಮಂಗಳವಾರದಿಂದ ನಡೆಯಲಿರುವ ತರಳಬಾಳು ಹುಣ್ಣಿಮೆ ಮಹೋತ್ಸವ ಕಾರ್ಯಕ್ರಮದಲ್ಲಿ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಯವರು ಭಾಗವಹಿಸುವ ಮುನ್ನ ಸಿರಿಗೆರೆಯಿಂದ ಭರಮಸಾಗರಕ್ಕೆ ಬರುವ ಮಾರ್ಗದ ವಿವರ ಇಂತಿದೆ.

ಸಿರಿಗೆರೆಯ ಐಕ್ಯಮಂಟಪದಿಂದ ಬೆಳಿಗ್ಗೆ 10.30 ಕ್ಕೆ ಹೊರಟು, 10.35 ಓಬವ್ವನಾಗ್ತಿಹಳ್ಳಿ, 10.40 ಸಿರಿಗೆರೆ ಸರ್ಕಲ್, 10.50 ಚಿಕ್ಕಬೆನ್ನೂರು, 11 ಕೊಳಹಾಳು, 11.10 ಬೇಡರ ಶಿವನಕೆರೆ, 11.20 ಬಸವನ ಶಿವನಕೆರೆ, 11.30 ಹಿರೇಅಬ್ಬಿಗೆರೆ, 11.40 ಚಿಕ್ಕಬ್ಬಿಗೆರೆ, 11.50 ಮುದ್ದಾಪುರ, 12 ಮುದ್ದಾಪುರ ಮ್ಯಾಸರಹಟ್ಟಿ, 12.10 ಯಳಗೋಡು, 12.20 ಬಸ್ತಿಹಳ್ಳಿ, 12.30 ಹುಲ್ಲೇಹಾಳು, 12.45 ನೆಲ್ಲಿಕಟ್ಟೆ, 12.50 ಹೊಸಹಟ್ಟಿ (ಇಸಾಮುದ್ರ), 1 ಕ್ಕೆ ಕಾಲಗೆರೆ, 1.10 ಕೋಡಿಹಳ್ಳಿ, 1.20 ಕೋಗುಂಡೆ, 1.30 ಬಹದ್ದೂರ್ ಘಟ್ಟ, 1.40 ಎಮ್ಮನಘಟ್ಟ, 1.50 ಪಂಜನಯ್ಯನಹಟ್ಟಿ, 2 ಗಂಟೆಗೆ ನಂದೀಹಳ್ಳಿ, 2.10 ದ್ಯಾಪನಹಳ್ಳಿ, 2.20 ಚೌಲಿಹಳ್ಳಿ, 3ಕ್ಕೆ ಚೌಲಿಹಳ್ಳಿ ಗೊಲ್ಲರಹಟ್ಟಿ, 3.10 ಕೋಡಿರಂಗವ್ವ ನಹಳ್ಳಿ, 3.20 ಕೋಡಿರಂಗವ್ವನಹಳ್ಳಿ ವಡ್ಡರಹಟ್ಟಿ, 3.30 ಹೆಗಡೆಹಾಳು, 3.40 ಕಸವನಹಳ್ಳಿ, 3.50 ಭರಮಸಾಗರ ಗೊಲ್ಲರಹಟ್ಟಿ, 4 ಭರಮಸಾಗರ, 4.10 ಬಿಚ್ಚುಗತ್ತಿ ಭರಮಣ್ಣನಾಯಕ ತೆಪ್ಪೋತ್ಸವ, ನಂತರ ತರಳಬಾಳು ಹುಣ್ಣಿಮೆ ಮಹೋತ್ಸವದ ಬಿಚ್ಚುಗತ್ತಿ ಭರಮಣ್ಣನಾಯಕ ಮಹಾಮಂಟಪಕ್ಕೆ ಆಗಮನ.

# ಸ್ಪ್ರಿಂಕ್ಲರ್ ಪೈಪ್ ಪಡೆಯಲು ಅರ್ಜಿ ಆಹ್ವಾನ

ದಾವಣಗೆರೆ, ಫೆ.2- ಕೃಷಿ ಇಲಾಖೆ ವತಿಯಿಂದ 2024-25ನೇ ಸಾಲಿನ ತುಂತುರು ನಿರಾವರಿ ಯೋಜನೆಯಡಿ ಸ್ಪ್ರಿಂಕ್ಲರ್ ಪೈಪ್ ಪಡೆಯಲು ಆಸಕ್ತ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಪರಿಶಿಷ್ಟ ಜಾತಿಯ ಫಲಾನುಭವಿಗಳು ಈ ಹಿಂದೆ ಸ್ಪ್ರಿಂಕ್ಲರ್ ಪೈಪ್ ಪಡೆದಿದ್ದರೂ ಸಹ 3 ಎಕರೆ 21 ಗುಂಟೆ ಭೂಮಿ ಇರುವವರು ಹೆಚ್ಚುವರಿಯಾಗಿ ಇನ್ನೊಂದು ಘಟಕಕ್ಕೆ ಅರ್ಜಿ ಸಲ್ಲಿಸಬಹುದು.

ಮಾಹಿತಿಗಾಗಿ ಕಸಬಾ 8277931143, ಆನಗೋಡು 8277931137, ಮಾಯಕೊಂಡ 8277931136 ಹಾಗೂ ಸಮೀಪದ ರೈತ ಸಂಪರ್ಕ ಕೇಂದ್ರಕ್ಕೆ ಸಂಪರ್ಕಿಸಬಹುದು.




**ದ್ರಾಕ್ಷಾಯಣಮ್ಮ ನಿಧನ**

ದಾವಣಗೆರೆ ಸಿಟಿ ನಿಟ್ಟುವಳ್ಳಿ ಹೊಸ ಬಡಾವಣೆಯ ವಾಸಿ 1ನೇ ಮೇನ್, 4ನೇ ಕ್ರಾಸ್, ಕಲ್ಪತರು ಛತ್ರದ ಹಿಂಭಾಗ ಕುರುಡಿ ಮಠದ ದಿ|| ಕೆ.ಎಂ. ಕೊಟ್ರಯ್ಯನವರ ಮಗನಾದ ಕೆ.ಎಂ. ವಿಶ್ವನಾಥ ಇವರ ಧರ್ಮಪತ್ನಿ

**ಶ್ರೀಮತಿ ದ್ರಾಕ್ಷಾಯಣಮ್ಮ**

ಇವರು, ದಿನಾಂಕ : 02.02.2025ರ ರಾತ್ರಿ 7.30ಕ್ಕೆ ನಿಧನರಾಗಿರುತ್ತಾರೆ. ಮೃತರಿಗೆ 65 ವರ್ಷ ವಯಸ್ಸಾಗಿತ್ತು. ಮೃತರು ಇಬ್ಬರು ಪುತ್ರರು, ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯನ್ನು ದಿನಾಂಕ : 03.02.2025ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಶಾಮನೂರಿನ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ಇಂತಿ ದುಃಖತಪ್ತರು : ಕೆ.ಎಂ. ವಿಶ್ವನಾಥ, ಕೆ.ಎಂ. ವಿನಯ್ ಕುಮಾರ್, ಕೆ.ಎಂ. ವಿಜಯ್ ಕುಮಾರ್ ಮತ್ತು ಅಪಾರ ಬಂಧು-ಮಿತ್ರರು, ಕುರುಡಿ ಮಠದ ವಂಶಸ್ಥರು, ಹಾಲಸ್ವಾಮಿ ಮಠದ ವಂಶಸ್ಥರು ಬಸವಾಪಟ್ಟಣ. ಮೊ. : ಮೊ : 99802 91179, 97420 20128**

**ನಾಗರಕಟ್ಟೆ ಚಳಗೇರಿ ಶ್ರೀಮತಿ ಹನುಮಂತಮ್ಮ ನಿಧನ**



ದಾವಣಗೆರೆ ತಾ|| ನಾಗರಕಟ್ಟೆ ಗ್ರಾಮದ ವಾಸಿ ದಿ.ಚಳಗೇರಿ ಬಸಪ್ಪ ಇವರ ಧರ್ಮಪತ್ನಿ

**ಚಳಗೇರಿ ಹನುಮಂತಮ್ಮ**

ಇವರು ದಿನಾಂಕ : 02.02.2025ರ ಭಾನುವಾರ ಸಂಜೆ 7.40ಕ್ಕೆ ನಿಧನರಾದರು. ಮೃತರಿಗೆ 80 ವರ್ಷ ವಯಸ್ಸಾಗಿತ್ತು.

ಮೃತರು 5 ಜನ ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯನ್ನು ದಿನಾಂಕ : 03.02.2025ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ನಾಗರಕಟ್ಟೆ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು : **ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಚಳಗೇರಿ ವಂಶಸ್ಥರು, ನಾಗರಕಟ್ಟೆ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.**

**ಮೊ : 98440 64785, 99022 31899**



**ತೃತೀಯ ವರ್ಷದ ಪುಣ್ಯಸ್ಮರಣೆ**

**ಲಿಂ|| ಶ್ರೀ ಗುರುದೇವ ಮೂರ್ತಿ ಎಸ್.ಎಂ.**

ನಿವೃತ್ತ ಜಂಟಿ ಕೃಷಿ ಇಲಾಖೆ ನಿರ್ದೇಶಕರು, ಕರ್ನಾಟಕ ಸರ್ಕಾರ

ನೀವು ತೋರಿಸಿದ ಉನ್ನತ ಮಾರ್ಗ, ನಿಮ್ಮ ಆದರ್ಶ ಹಾಗೂ ವಿಚಾರಗಳು ನಮ್ಮ ಮನಸ್ಸಿನಲ್ಲಿ ಚಿರಸ್ಥಾಯಿ. ನಿಮ್ಮ ಕರ್ತವ್ಯ ನಿಷ್ಠೆ ಹಾಗೂ ಸರಳತೆ ನಮ್ಮ ಜೀವನಕ್ಕೆ ದಾರಿ ದೀಪ... ನಿಮ್ಮ ಸ್ಮರಣೆ ನಮಗೆ ಪ್ರತಿದಿನವೂ ಚೈತನ್ಯದಾಯಕ...

ಮಗ : **ಡಾ|| ವೀರೇಂದ್ರಸ್ವಾಮಿ, ಎಸ್.ಎಂ.,** MS., FIAS.,
ಪ್ರೊಫೆಸರ್, ಸೀನಿಯರ್ ಜನರಲ್ & ಗ್ಯಾಸ್ಟ್ರೋ, ಲ್ಯಾಪ್ರೋಸ್ಕೋಪಿಕ್ ಸರ್ಜನ್, ದಾವಣಗೆರೆ.

ಸೊಸೆ : **ಶ್ರೀಮತಿ ಅನುಪ ವೀರೇಂದ್ರಸ್ವಾಮಿ**

ಅಳಿಯ : **ಡಾ|| ಮಹಂತೇಶ್ ಶರ್ಮ,**
ಎಂ.ಡಿ., ಪ್ರೊಫೆಸರ್ ಅನಸ್ತೇಷಿಯಾ, ಜೆಜೆಎಂಎಂಸಿ, ದಾವಣಗೆರೆ.

**ಡಾ|| ಜ್ಯೋತಿ ಪ್ರಕಾಶ್,** ಎಂ.ಡಿ., ಸೀನಿಯರ್ ಫಿಜಿಷಿಯನ್ & ಕಾರ್ಡಿಯೋಲಜಿಸ್ಟ್, ಅಪೂರ್ವ ಪಾಲಿ ಕ್ಲಿನಿಕ್, ದಾವಣಗೆರೆ.

ಮಕ್ಕಳು : **ಶ್ರೀಮತಿ ಸೌಭಾಗ್ಯ ದೇವಿ ಎಸ್.ಎಂ., ✦ ಡಾ|| ಸವಿತಾ ದೇವಿ,** ಎಂ.ಡಿ., ಸೀನಿಯರ್ ಪೆಥಾಲಜಿಸ್ಟ್, ಕರ್ನಾಟಕ ಸರ್ಕಾರ

ಮೊಮ್ಮಕ್ಕಳು : **ಶ್ರೀ ಅನುಪ್ ಶರ್ಮಾ ಎನ್.ಎಂ., ✦ ಡಾ|| ಅಭಿಷೇಕ್ ಶರ್ಮಾ ಎನ್.ಎಂ.,** ಎಂ.ಬಿ.ಬಿ.ಎಸ್.,
**✦ ಶುಭಾಂಕರ್ ಸ್ವಾಮಿ ಜಿ.ಎಂ., ಕು|| ಸಿರಿ ಎಸ್.ಎಂ., ಚಿ|| ಸಮೃದ್ಧಿ ಎಸ್.ಎಂ.**

**ಅನುಪ್ ಹಾಸ್ಪಿಟಲ್, ಡಾಕ್ಟರ್ಸ್ ಮತ್ತು ಸಿಬ್ಬಂದಿಗಳು, ದಾವಣಗೆರೆ.**




**ದಿನಾಂಕ : 02.02.2025 ರಿಂದ 08.02.2025ರ ವರೆಗೆ**
**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಈ ವಾರ ಅನೇಕ ಹೊಸ ಸ್ನೇಹಿತರ ಸಂಪರ್ಕವಾಗಲಿದ್ದು, ಅವರಿಂದಾಗಿ ನಿಮ್ಮ ಅನೇಕ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ. ಆದರೆ ಅವರ ಸಲಹೆ ಸೂಚನೆಗಳು ಏನೇ ಇದ್ದರೂ ಅಂತಿಮ ನಿರ್ಧಾರ ನಿಮ್ಮದೇ ಆಗಿರಲಿ. ಆದಾಯದಲ್ಲಿ ಏರಿಕೆ ಕಂಡುಬರಲಿದೆ. ಉದ್ಯಮಿಗಳು ತಮ್ಮ ಕೈಕೆಳಗಿನ ಕಾರ್ಮಿಕರ ಕುಂದು ಕೊರತೆಗಳನ್ನು ಆಲಿಸುವುದು ಮೇಲು. ಸಿವಿಲ್ ಇಂಜಿನಿಯರ್‌ಗಳಿಗೆ ಉತ್ತಮ ಸಂಸ್ಥೆಗಳಲ್ಲಿ ಕೆಲಸ ಮಾಡುವ ಅವಕಾಶ ಸಿಗಲಿದೆ. ಮತ್ತೊಬ್ಬರ ವೈಯಕ್ತಿಕ ವಿಚಾರದಲ್ಲಿ ನಿಮ್ಮ ಪ್ರವೇಶ ಬೇಡ ಇಲ್ಲವಾದಲ್ಲಿ ಧನ ಮಾನ ಅಥವಾ ಎರಡರ ನಷ್ಟವಾಗಬಹುದು. ಭಾನು-ಮಂಗಳ-ಬುಧ-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ವಿದ್ಯಾವಂತರಾದ ಪದವೀಧರರಿಗೆ ಪ್ರಭಾವೀ ವ್ಯಕ್ತಿಗಳ ವಶೀಲಿಯಿಂದಾಗಿ ಸಾಧಾರಣ ವೇತನದ ಕೆಲಸ ಸಿಗಲಿದೆ. ಸದ್ಯಕ್ಕೆ ಅಲ್ಲೇ ತೃಪ್ತಿ ಕಾಣುವುದು ಮೇಲು. ಸರ್ಕಾರೀ ನೌಕರರಿಗೆ ಕಾಣದ ಕೈಗಳ ಪ್ರಭಾವದಿಂದಾಗಿ ಅನಪೇಕ್ಷಿತ ಸ್ಥಳಗಳಿಗೆ ವರ್ಗಾವಣೆ ಯಾಗಲಿದ್ದು, ಅಲ್ಲಿ ಹೊಂದಿಕೊಳ್ಳಲು ತುಸು ಸಮಯಬೇಕಾಗಬಹುದು. ಆಗಬೇಕಾಗಿರುವ ಕೆಲಸ, ಕಾರ್ಯಗಳನ್ನು ವಿನಾಕಾರಣ ಮುಂದೂಡಬೇಡಿ. ರೈತಾಪಿ ಜನರ ಮನೆಗಳಲ್ಲಿ ಮಂಗಳ ಕಾರ್ಯಗಳು ಜರುಗಲಿವೆ. ಆದಾಯದ ಮೂಲದಲ್ಲಿ ಕ್ರಮೇಣ ಹೆಚ್ಚಳ ಕಂಡುಬರಲಿದೆ. ಮನೆಯ ಸದಸ್ಯರೊಂದಿಗೆ ಹೊಂದಿಕೊಂಡು ಹೋಗುವುದು ಉತ್ತಮ. ಸೋಮ-ಗುರು-ಶನಿ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಙ, ಛ.ಕೆ.ಕೋ.ಹ.)**

ಪರಿಣತಿ ಪಡೆದ ಯುವಕರನ್ನು ಪಾರಂಪರಿಕ ಉದ್ಯಮಗಳಲ್ಲಿ ತೊಡಗಿಸಿಕೊಳ್ಳುವುದು ಉತ್ತಮ ನಿರ್ಧಾರವಾಗಲಿದೆ ಮತ್ತು ನಿಮಗೂ ತುಸು ವಿಶ್ರಾಂತಿ ಸಿಗಲಿದೆ. ಈ ಹಿಂದೆ ಆರಂಭಿಸಿದ್ದ ಕೆಲಸ ಕಾರ್ಯಗಳಿಗೆ ಪ್ರಭಾವೀ ವ್ಯಕ್ತಿಗಳಿಂದ ತೊಂದರೆಯಾಗಲಿದೆ. ಆದ್ದರಿಂದ ಸನ್ನಿವೇಶವನ್ನು ಜಾಣತನದಿಂದ ನಿಭಾಯಿಸಿರಿ. ಪ್ರಥಮ ದರ್ಜೆ ಸರ್ಕಾರಿ ಗುತ್ತಿಗೆದಾರರಿಗೆ ಸರ್ಕಾರದಿಂದ ಬರಬೇಕಾಗಿರುವ ಬಾಕಿಹಣದಲ್ಲಿ ಸ್ವಲ್ಪಭಾಗ ಸಂದಾಯವಾಗಲಿದೆ. ಯಂತ್ರೋಪಕರಣ ಬಿಡಿಭಾಗಗಳ ಮಾರಾಟದಿಂದ ಹೆಚ್ಚಿನ ಲಾಭವಾಗಲಿದೆ. ವಿದ್ಯಾರ್ಥಿಗಳಿಗೆ ಉತ್ತಮ ದಿನಗಳು, ಕುಲದೇವತಾ ದರ್ಶನ ಮಾಡಿ. ಸೋಮ-ಬುಧ-ಗುರು-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಪದವೀಧರರಾದ ಯುವಕರಿಗೆ ಸೂಕ್ತ ಉದ್ಯೋಗ ಸಿಗದೇ ಪರಿತಪಿಸುವರು. ಮಹಿಳಾ ಉದ್ಯಮಿಗಳು ತಮ್ಮ ಸಾಧನೆಯ ಗುರಿ ತಲುಪಲು ಹರಸಾಹಸಪಡುವರು, ಕೆಲವೊಮ್ಮೆ ನಿಮ್ಮ ಮುಂಗೋಪವೇ ನಿಮ್ಮ ಯಶಸ್ಸಿನ ಹಾದಿಗೆ ಮುಳ್ಳಾಗಬಹುದು. ಧ್ಯಾನ ಮೊದಲಾದವುಗಳಿಂದ ಮಾತ್ರ ಅದನ್ನು ತಹಬಂದಿಗೆ ತರಲು ಸಾಧ್ಯ ಮನೆಯಲ್ಲಿರುವ ಹಿರಿಯರೊಂದಿಗೆ ಹೊಂದಿಕೊಂಡು ಹೋಗುವುದರ ಹೊರತು, ಅನ್ಯ ಮಾರ್ಗವಿಲ್ಲ. ಹೊಸಮನೆ ಖರೀದಿಸುವ ಮೊದಲು ಅದರ ದಾಖಲೆಗಳನ್ನು ಎರಡೆರಡು ಬಾರಿ ಪರಿಶೀಲಿಸುವುದು ಉತ್ತಮ. ಈ ವಿಷಯದಲ್ಲಿ ಸ್ನೇಹಿತರಿಂದ ಸಲಹೆ ಸಿಗಲಿದೆ. ಭಾನು-ಸೋಮ-ಬುಧ-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಹಣಕಾಸಿನ ವಿಚಾರದಲ್ಲಿ ಸಂಗಾತಿಯೊಂದಿಗೆ ಬಿರುಸಿನ ಮಾತುಕತೆಯಾಗಲಿದೆ. ಸಂಯಮದಿಂದ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸಿ, ಪ್ರಸಂಗ ಬಂದಲ್ಲಿ ಅನುಭವಿಗಳಾದ ಸ್ನೇಹಿತರ ಸಲಹೆ, ಸೂಚನೆ ಪಡೆಯಿರಿ. ಗೃಹ ನಿರ್ಮಾಣ ವಸ್ತುಗಳ ಮಾರಾಟಗಾರರು ತಮ್ಮ ವ್ಯವಹಾರವನ್ನು ಅಭಿವೃದ್ಧಿಪಡಿಸಲು ಬಂಡವಾಳ ಹೂಡುವರು. ಸೋದರಿಯರಿಗೆ ಉತ್ತಮ ಸಂಬಂಧವೊಂದು ಬರಲಿದ್ದು, ಮಾತುಕತೆ ನಡೆಯಲಿದೆ.ಆದಾಯ ತಕ್ಕಮಟ್ಟಿಗಿರುವುದರಿಂದ ಹೊಸಾಲಂಕಾರಿಕ ವಸ್ತುಗಳ ಖರೀದಿಬೇಡ. ದುರ್ಗಾದೇವಿಯನ್ನು ವಿಶೇಷವಾಗಿ ಆರಾಧಿಸಿ. ಭಾನು-ಬುಧ-ಶುಕ್ರ ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಹಿರಿಯರ ಮಾತನ್ನು ತಿರಸ್ಕರಿಸಿದ್ದರ ಫಲವನ್ನು ಮುಂದೆ ಅನುಭವಿಸಬೇಕಾದೀತು, ಎಲ್ಲರ ಮಾತಿಗೂ ತಲೆದೂಗುವುದರಿಂದ ಆಗುವ ಅನರ್ಥಗಳಿಗೆ ಬೆಲೆ ತೆರಬೇಕಾದೀತು.ಸಮಾಜದಲ್ಲಿ ಸ್ವಪ್ರತಿಷ್ಠೆ ತೋರಲು ಹೋಗಿ ನಗೆಪಾಟಲಿಗೀಡಾಗುವಿರಿ. ಅನಿರೀಕ್ಷಿತವಾಗಿ ಬರಲಿರುವ ಖರ್ಚು - ವೆಚ್ಚಗಳಿಗೆ ಪರದಾಡಬೇಕಾದೀತು. ಆದಾಯ ಸಾಧಾರಣವಾಗಿರುವುದರಿಂದ ದೈನಂದಿನ ಬದುಕಿಗೇನೂ ತೊಂದರೆಯಿಲ್ಲ. ಅತಿನಿರೀಕ್ಷಿತ ಶುಭ ಸಮಾಚಾರವೊಂದು ಇಷ್ಟರಲ್ಲೇ ಕೇಳಿಬರಲಿದೆ. ಮಕ್ಕಳ ಆದಾಯದಲ್ಲಿ ಕೊರತೆಯಾಗಲಿದೆ. ನವಗ್ರಹಾರಾಧನೆ ಮಾಡಿ, ದಾನ ಮಾಡುವುದು ಉತ್ತಮ. ಮಂಗಳ-ಬುಧ-ಗುರು-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಈ ಹಿಂದೆ ಮತ್ಯಾರಿಗೋ ಸಹಾಯ ಮಾಡಲು ಹೋಗಿ ಜಾಮೀನಾಗಿದ್ದರ ಫಲವಾಗಿ ಈಗ ತೊಂದರೆಯನ್ನು ಅನುಭವಿಸಬೇಕಾದೀತು ಇದಕ್ಕಾಗಿ ನಿಮ್ಮ ಕೂಡಿಟ್ಟಗಂಟು ಕರಗಿ ಹೋಗಬಹುದು. ಖಾಸಗೀ ಕಂಪನಿಯಲ್ಲಿ ಬಹುಕಾಲದಿಂದ ಕೆಲಸ ಮಾಡುತ್ತಿದ್ದವರಿಗೆ ಕಾಡುತ್ತಿದ್ದ ಅಭದ್ರತೆ ದೂರವಾಗಲಿದೆ, ಅಪರಿಚಿತರೊಂದಿಗೆ ಮಹಿಳೆಯರು ಮಾಡಲಿರುವ ಹಣಕಾಸಿನ ವ್ಯವಹಾರ ಉಳಿದವರಿಗೆ ತಲೆನೋವಾಗಿ ಪರಿಣಮಿಸಲಿದೆ. ಅತಿಯಾದ ಭೋಜನಕೂಟ ಆರೋಗ್ಯಕ್ಕೆ ಮಾರಕವಾಗಬಹುದು, ಸೋದರ ವಿವಾಹಕ್ಕೆ ಇದ್ದ ಅಡಚಣೆಗಳು ದೂರವಾಗಲಿವೆ. ಬುಧ-ಶುಕ್ರ-ಶನಿ-ಶುಭದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಕಷ್ಟಪಟ್ಟು ಮುಂದೆ ಬರುತ್ತಿರುವ ನಿಮ್ಮ ಏಳಿಗೆಯನ್ನು ಕೆಲವರು ಸಹಿಸದೇ ಹೋಗಬಹುದು. ಅದರ ಬಗ್ಗೆ ಹೆಚ್ಚಿನ ಮಹತ್ವ ಕೊಡದೆ ನಿಮ್ಮ ಪಾಡಿಗೆ ನೀವಿರಿ. ಆದಾಯದ ಮೂಲದಲ್ಲಿ ನಿರೀಕ್ಷೆಗೂ ಮೀರಿದ ಹೆಚ್ಚಳ ಕಂಡುಬರುವುದರಿಂದ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಸ್ವಲ್ಪ ಭಾಗವನ್ನು ಉಳಿತಾಯದಲ್ಲಿ ವಿನಿಯೋಗಿಸುವುದು ಮೇಲು, ಅತಿಯಾದ ಕರಿದ ಅಥವಾ ಸಿಹಿ ಪದಾರ್ಥಗಳ ಸೇವನೆಯಿಂದ ಆರೋಗ್ಯದಲ್ಲಿ ವ್ಯತ್ಯಾಸವುಂಟಾಗಬಹುದು. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಬರಲಿದ್ದು, ಉನ್ನತಾಧ್ಯಯನಕ್ಕೆ ಈಗಿನಿಂದಲೇ ಪೂರ್ವ ಸಿದ್ಧತೆ ಮಾಡಿಕೊಳ್ಳುವುದು ಮೇಲು. ಗೋ ಸೇವೆ ಮಾಡಿ. ಸೋಮ-ಮಂಗಳ-ಬುಧ-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಢ, ಉತ್ತರಾಷಾಢ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಅತಿಯಾದ ದೇಹಾಲಸ್ಯದಿಂದಾಗಿ ಆರೋಗ್ಯದಲ್ಲಿ ತುಸು ಏರುಪೇರಾಗಬಹುದು, ಹಾಗೆಂದ ಮಾತ್ರಕ್ಕೆ ಚಿಂತೆಬೇಡ, ಕ್ರಮೇಣ ಸರಿಹೋಗಲಿದೆ. ಅರಿವಿರದ ವಿಚಾರದ ಬಗ್ಗೆ ಮಾತನಾಡಲು ಹೋಗಿ ಅಪಹಾಸ್ಯಕ್ಕೆ ಈಡಾಗುವಿರಿ, ನಿವೃತ್ತಿಯಂಚಿನಲ್ಲಿರುವವರು ತಮ್ಮ ಗಳಿಕೆಯನ್ನು ಸೂಕ್ತ ರೀತಿಯಲ್ಲಿ ಹೂಡಿಕೆ ಮಾಡದೇ ಹೋದಲ್ಲಿ ಎಲ್ಲವನ್ನೂ ಕಳೆದುಕೊಳ್ಳಬೇಕಾದೀತು. ಅತಿಯಾದ ಬಂಡವಾಳ ಅಪೇಕ್ಷಿಸುವ ಉದ್ಯಮದಲ್ಲಿ ತೊಡಗಿಕೊಳ್ಳುವುದು ತಪ್ಪು ನಿರ್ಧಾರವಾದೀತು. ಕೃಷಿಕ ಮಿತ್ರರಿಗೆ ಅವರ ಬೆಳೆಗಳಿಗೆ ಮಾರುಕಟ್ಟೆಯಲ್ಲಿ ಸೂಕ್ತ ಬೆಂಬಲ ಬೆಲೆ ಸಿಗಲಿದೆ. ಮಹಿಳೆಯರಿಗೆ ಉತ್ತಮ ದಿನಗಳು ಗೋ ಸೇವೆ ಮಾಡಿ. ಭಾನು-ಗುರು-ಶನಿ-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಮಾಡಬೇಕಾಗಿರುವ ಕೆಲಸ ಕಾರ್ಯಗಳು ಯಾವುದೇ ಇದ್ದರೂ ಪರಿಸರದಲ್ಲಿ ನಡೆಯುತ್ತಿರುವ ಆಗುಹೋಗುಗಳನ್ನು ಗಮನದಲ್ಲಿಟ್ಟುಕೊಂಡೇ ಮುಂದುವರೆಯುವುದು ಮೇಲು. ಮಕ್ಕಳ ವಿದ್ಯಾಭ್ಯಾಸದ ಚಿಂತೆ ಕೆಲಕಾಲ ನಿಮ್ಮನ್ನು ಕಾಡಲಿದೆ, ಯುವಜನರು ಹಿರಿಯರ ಮಾತುಗಳಿಗೆ ಮಾರುತ್ತರ ಕೊಡುತ್ತಾ ಸಮಸ್ಯೆಯಾಗಿ ತೋರುವರು, ವೈಯಕ್ತಿಕ ಆರೋಗ್ಯವನ್ನು ಯಾವುದೇ ಕಾರಣಕ್ಕೂ ಕಡೆಗಣಿಸಬೇಡಿ, ಪಾಲುದಾರಿಕೆಯಲ್ಲಿರುವ ವ್ಯವಹಾರವು ಲಾಭದಾಯಕವಾಗಲಿದೆ, ಅನ್ನದಾನ ಮಾಡಿ. ಗುರು-ಶುಕ್ರ-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಮತ್ತೊಬ್ಬರ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಮೊದಲು ಅದನ್ನು ನಿಭಾಯಿಸುವ ಬಗ್ಗೆ ಆಲೋಚಿಸುವುದು ಮೇಲು. ಮನೆತನದ ಹಿರಿಯರೊಂದಿಗೆ ಬರಲಿರುವ ಸಮಸ್ಯೆಗಳನ್ನು ಜಾಣತನದಿಂದ ನಿಭಾಯಿಸುವಿರಿ, ಈ ಕಲೆ ನಿಮಗೀಗಾಲೇ ಕರಗತವಾಗಿದೆ.ಸ್ನೇಹಿತರ ಸಮಸ್ಯೆಗಳನ್ನು ಪರಿಹರಿಸಲು ಹೋಗಿ ನೀವೇ ಅದರ ಸುಳಿಯಲ್ಲಿ ಸಿಲುಕುವ ಸಂಭವವಿದೆ. ಲೇವಾದೇವಿ ವ್ಯವಹಾರದಲ್ಲಿ ಹೆಚ್ಚಿನ ಹೂಡಿಕೆ ಮಾಡದೇ ಇದ್ದದ್ದನ್ನೇ ಮುಂದುವರೆಸಿಕೊಂಡು ಹೋಗುವುದು ಮೇಲು. ನಿರೀಕ್ಷಿತ ಶುಭ ವಾರ್ತೆಯೊಂದು ಇಷ್ಟರಲ್ಲೇ ಕೇಳಿಬರಲಿದೆ. ಸೋಮ-ಗುರು-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಸರ್ಕಾರಿ ನೌಕರರಿಗೆ ಈ ಹಿಂದೆ ಯಾವಾಗಲೋ ಆಗಿಹೋಗಿದ್ದ ಮುದ್ದತ್ತೊಂದು ಮತ್ತೆ ಮುನ್ನೆಲೆಗೆ ಬರಲಿದೆ. ಸಾಕಷ್ಟು ಪೂರ್ವಸಿದ್ಧತೆಯೊಂದಿಗೆ ಅದನ್ನು ಎದುರಿಸಲು ಆತ್ಮವಿಶ್ವಾಸದೊಂದಿಗೆ ಸಿದ್ಧರಾಗುವುದು ಉತ್ತಮ, ವಿದ್ಯಾರ್ಥಿಗಳು ತಮ್ಮ ಅತಿಯಾದ ಆತ್ಮವಿಶ್ವಾಸದಿಂದಾಗಿ ಸಾಧಾರಣ ಫಲಿತಾಂಶ ಪಡೆಯುವರು. ಆದಾಯವು ಸಾಧಾರಣವಾಗಿರುವುದರಿಂದ ಯಾವುದೇ ಯೋಜನೆಗಳನ್ನು ಜಾರಿಗೆ ತರಲು ಯತ್ನಿಸಬೇಡಿ. ರಾಜಕಾರಣಿಗಳು ಪಕ್ಷದ ವರಿಷ್ಠರ ಕೃಪಾಕಟಾಕ್ಷಕ್ಕಾಗಿ ಕಾಯಬೇಕಾದೀತು. ಬಡವರಿಗೆ ಅನ್ನದಾನ, ವಸ್ತ್ರ ದಾನ ಮಾಡಿ. ಭಾನು-ಗುರು-ಶುಕ್ರ-ಶುಭ ದಿನಗಳು.

# ಭಾರತದ ಸಮಗ್ರ ಮೂಲಭೂತ ವ್ಯವಸ್ಥೆ ಭದ್ರವಾಗಿದೆ

## ಡಾಲರ್ ಹೊರತುಪಡಿಸಿ ಬೇರೆ ಯಾವ ಕರೆನ್ಸಿ ಎದುರು ರೂಪಾಯಿ ದುರ್ಬಲವಾಗಿಲ್ಲ : ನಿರ್ಮಲ

ನವದೆಹಲಿ, ಫೆ. 2 - ರೂಪಾಯಿ ಅಪಮೌಲ್ಯವಾಗುತ್ತಿದೆ ಎಂಬ ಟೀಕೆಗಳನ್ನು ತಳ್ಳಿ ಹಾಕಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್, ಡಾಲರ್ ಬಲಗೊಳ್ಳುತ್ತಿರುವ ಕಾರಣ ಅದರ ಎದುರು ಮಾತ್ರ ರೂಪಾಯಿ ಬೆಲೆ ಇಳಿಕೆಯಾಗಿದೆ. ಉಳಿದ ಎಲ್ಲಾ ದೇಶಗಳ ಹಣದ ಎದುರು ರೂಪಾಯಿ ಸ್ಥಿರವಾಗಿದೆ ಎಂದು ತಿಳಿಸಿದ್ದಾರೆ. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಕಳೆದ ಕೆಲ ತಿಂಗಳಲ್ಲಿ ಶೇ. 3ರಷ್ಟು ಇಳಿಕೆಯಾಗಿದೆ. ಆದರೆ ರೂಪಾಯಿ ಸರ್ವಾಂಗೀಣ ಅಪಮೌಲ್ಯವಾಗಿದೆ ಎಂಬ ಟೀಕೆ ಸರಿಯಲ್ಲ ಎಂದಿದ್ದಾರೆ.

ನಮ್ಮ ಸಮಗ್ರ ಮೂಲಭೂತ ಆರ್ಥಿಕ ವ್ಯವಸ್ಥೆಗಳು ಬಲವಾಗಿವೆ. ನಮ್ಮ ಆರ್ಥಿಕ ಮೂಲಭೂತ ವ್ಯವಸ್ಥೆಗಳು ದುರ್ಬಲವಾಗಿದ್ದಿದ್ದರೆ ಉಳಿದ ಎಲ್ಲಾ ಕರೆನ್ಸಿಗಳ ಎದುರು ಸ್ಥಿರವಾಗಿರಲು ಸಾಧ್ಯವಾಗುತ್ತಿರಲಿಲ್ಲ ಎಂದು ಸೀತಾರಾಮನ್ ತಿಳಿಸಿದ್ದಾರೆ. ಏಷ್ಯಾ ಹಾಗೂ ಜಾಗತಿಕ ಕರೆನ್ಸಿಗಳಿಗೆ ಹೋಲಿಸಿದರೆ ಡಾಲರ್ ಎದುರು ರೂ. ಹೆಚ್ಚು ಸ್ಥಿರವಾಗಿದೆ. ರೂಪಾಯಿ ಮೌಲ್ಯವನ್ನು ಡಾಲರ್ ಎದುರು ಸ್ಥಿರಗೊಳಿಸಲು ರಿಸರ್ವ್ ಬ್ಯಾಂಕ್ 77 ಶತಕೋಟಿ ಡಾಲರ್ ಮೀಸಲು ಹಣ ಬಳಕೆ ಮಾಡಿದೆ ಎನ್ನಲಾಗುತ್ತಿದೆ.

# ಪರಿಸರ ಸ್ವಚ್ಛತೆಯಿಂದ ಕಾಯಿಲೆಗಳನ್ನು ನಿಯಂತ್ರಿಸಬಹುದು: ಡಾ. ನಾಗೇಂದ್ರಪ್ಪ

ದಾವಣಗೆರೆ, ಫೆ.2- ಪರಿಸರ ಸ್ವಚ್ಛವಾಗಿದ್ದರೆ ಇದರಿಂದ ಹರಡುವ ರೋಗಗಳನ್ನು ತಡೆಗಟ್ಟಲು ಸಾಧ್ಯವಾಗಲಿದೆ ಎಂದು ಚಿಗಟೇರಿ ಜಿಲ್ಲಾ ಆಸ್ಪತ್ರೆ ಸರ್ಜನ್ ಡಾ.ಎಂ.ಬಿ.ನಾಗೇಂದ್ರಪ್ಪ ತಿಳಿಸಿದರು.

ಶನಿವಾರ ಮಹಾನಗರ ಪಾಲಿಕೆ ಮತ್ತು ಚಿಗಟೇರಿ ಜಿಲ್ಲಾ ಆಸ್ಪತ್ರೆ ವತಿಯಿಂದ ಆಸ್ಪತ್ರೆಯ ಆವರಣದಲ್ಲಿ ಸ್ವಚ್ಛತಾ ಆಂದೋಲನ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು. ಸ್ವಚ್ಛತೆಯಿಂದ ಸುತ್ತಮುತ್ತಲಿನ ಪರಿಸರದ ನೈರ್ಮಲ್ಯತೆಯನ್ನು ಕಾಪಾಡಿಕೊಳ್ಳಬಹುದು. ತ್ಯಾಜ್ಯವನ್ನು ಎಲ್ಲೆಂದರಲ್ಲಿ ಎಸೆಯದೇ ಸಂಗ್ರಹಣಾ ಸ್ಥಳಗಳಲ್ಲಿ ಮಾತ್ರ ಹಾಕಬೇಕು. ಆಸ್ಪತ್ರೆ ಆವರಣದಲ್ಲಿ ಆಹಾರದ ತಿನಿಸುಗಳನ್ನು ಹಾಕಿ ಇನ್ನೊಬ್ಬರಿಗೆ ತೊಂದರೆಯಾಗುವ ರೀತಿಯಲ್ಲಿ ಮಾಡುತ್ತಾರೆ. ಇದರಿಂದ ಹಲವಾರು ಸಾಂಕ್ರಾಮಿಕ ರೋಗಗಳಿಗೆ ಕಾರಣವಾಗುತ್ತದೆ, ಆಸ್ಪತ್ರೆಗೆ ಬರುವ ಸಾರ್ವಜನಿಕರು ಜಾಗೃತರಾಗಬೇಕೆಂದರು.

ಈ ಸಂದರ್ಭದಲ್ಲಿ ಪಾಲಿಕೆಯ ಸದಸ್ಯರಾದ ಗಡಿಗುಡಾಳು ಮಂಜುನಾಥ, ಪಾಲಿಕೆಯ ಪೌರಕಾರ್ಮಿಕರು, ಆರೋಗ್ಯ ರಕ್ಷಾ ಸಮಿತಿ ಸದಸ್ಯರು, ಸಿಬ್ಬಂದಿ ಹಾಗೂ ಆಸ್ಪತ್ರೆಯ ಸ್ವಚ್ಛತಾ ಸಿಬ್ಬಂದಿಗಳು ಭಾಗವಹಿಸಿದ್ದರು.

# ಮೊಳಕೆಯಲ್ಲೇ ಕ್ಯಾನ್ಸರ್ ಚಿವುಟಿ ಹಾಕಿ

## ಕ್ಯಾನ್ಸರ್ ಕುರಿತ ಜನಜಾಗೃತಿ ಜಾಥಾದಲ್ಲಿ ಡಾ.ಅಮಿತ್



ದಾವಣಗೆರೆ, ಫೆ.2- ವಿಶ್ವ ಕ್ಯಾನ್ಸರ್ ದಿನಾಚರಣೆ ಹಿನ್ನೆಲೆಯಲ್ಲಿ, ಕ್ಯಾನ್ಸರ್ ಕುರಿತು ಜನಜಾಗೃತಿ ಮೂಡಿಸುವ ನಿಟ್ಟಿನಲ್ಲಿ ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆ ಎಸ್.ಎಸ್.ಕೇರ್ ಟ್ರಸ್ಟ್, ಬಾಪೂಜಿ ಎಜುಕೇಷನಲ್ ಅಸೋಸಿಯಷನ್ ಸಹಯೋಗದೊಂದಿಗೆ ಭಾನುವಾರ ಇಲ್ಲಿನ ಗುಂಡಿ ವೃತ್ತದಿಂದ ಕಾಲ್ನಡಿಗೆ ಜಾಥಾ ಹಮ್ಮಿಕೊಳ್ಳಲಾಗಿತ್ತು.

ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆಯ ಡಾ. ಅಮಿತ್ ಮಾತನಾಡಿ, ಕ್ಯಾನ್ಸರ್ ಲಕ್ಷಣಗಳ ಬಗ್ಗೆ ಆರಂಭದ ಹಂತದಲ್ಲಿಯೇ ಪರೀಕ್ಷೆ ಮಾಡಿಸಿಕೊಳ್ಳುವುದರಿಂದ ಮುಂದಾಗುವ ಅನಾಹುತವನ್ನು ತಡೆಯಲು ಸಾಧ್ಯ ಎಂದರು.

ಮೊದಲು ಭಾರತ ಬಡ ದೇಶ ಎಂದು ಹೇಳುತ್ತಿದ್ದರು. ಈಗ ಅಂಕಿ-ಅಂಶ ಬದಲಾಗುತ್ತಿದೆ. ಈಗ ನಮ್ಮ ದೇಶದಲ್ಲಿ ಬಡ ಜನರಿಗಿಂತ ಕ್ಯಾನ್ಸರ್ ಪೀಡಿತರು ಬಹಳ ಆಗುತ್ತಿದ್ದಾರೆ. ಕ್ಯಾನ್ಸರ್ ಮೊಳಕೆಯಲ್ಲಿದ್ದಾಗಲೇ ಚಿವುಟಿ ಹಾಕಿ ಅದು ಹೆಮ್ಮರವಾಗಿ ಬೆಳೆಯದಂತೆ ತಡೆಗಟ್ಟಬಹುದಾಗಿದೆ ಎಂದರು.

ಕ್ಯಾನ್ಸರ್ ಗುಣಪಡಿಸಬಹುದಾದ, ಉನ್ನತ ಮಟ್ಟದ ಔಷಧೋಪಚಾರ, ಆಧುನಿಕ ಚಿಕಿತ್ಸಾ ವಿಧಾನಗಳು ಬಂದಿವೆ. ಹೀಗಾಗಿ ಕ್ಯಾನ್ಸರ್ ಬಗ್ಗೆ ಹೆದರದೆ, ತಡ ಮಾಡದೇ ವೈದ್ಯರಲ್ಲಿ ತಪಾಸಣೆ ಮಾಡಿಸಿ ಚಿಕಿತ್ಸೆ ಪಡೆಯುವುದು ಮುಖ್ಯ ಎಂದು ಹೇಳಿದರು.

ವಿಶ್ವಾರಾಧ್ಯ ಆಸ್ಪತ್ರೆಯ ನಿರ್ದೇಶಕ ಡಾ. ಜಗದೀಶ್ ತುಬಚಿ ಮಾತನಾಡಿ, ಜನರು ಚಿಕಿತ್ಸೆಗಾಗಿ ದೊಡ್ಡ ನಗರಗಳನ್ನು ಅವಲಂಬಿಸಬೇಕಿಲ್ಲ. ದಾವಣಗೆರೆಯಲ್ಲೂ ಉತ್ತಮ ಚಿಕಿತ್ಸೆಗಳು ಲಭ್ಯವಿವೆ ಎಂದರು.

ಜಿಲ್ಲೆಯ ಕ್ಯಾನ್ಸರ್ ರಾಯಭಾರಿ ಆರ್. ಟಿ.ಅರುಣಕುಮಾರ್ ಮಾತನಾಡಿ, ನಾನು ಕ್ಯಾನ್ಸರ್ ಗೆದ್ದು 15 ವರ್ಷಗಳಾಗಿದೆ. ಇದಕ್ಕೆಲ್ಲಾ ವೈದ್ಯರೇ ಕಾರಣ. ಈ ಬಾರಿಯ ಥೀಮ್ ಕೂಡಾ "ಅನನ್ಯತೆಯಿಂದ ಒಂದುಗೂಡಿಕೆ". ನಾವು ನಿಮ್ಮೊಂದಿಗೆ ಇದ್ದೇವೆ. ಕ್ಯಾನ್ಸರ್ ಭಯ ಬೇಡ ಎಂಬ ವೈದ್ಯರ ಸಲಹೆಯಂತೆ ಇಂತಹ ಒಂದು ಅಧ್ಯಾಯವನ್ನು ದಾಟಿಕೊಂಡು ನಾನು ಬಂದಿದ್ದೇನೆ. ನಮ್ಮ ಗುರಿ ಕ್ಯಾನ್ಸರ್ ಮುಕ್ತ ಭಾರತವಾಗಬೇಕು. ತಂಬಾಕು ಮುಕ್ತ ಜೀವನ ಉತ್ತಮ ಆರೋಗ್ಯ ನೀಡಲಿದೆ ಎಂದರು.

ಎಲ್ಲರಲ್ಲೂ ಜಾಗೃತಿ ಎಂಬುದು ಮುಖ್ಯ. ಕ್ಯಾನ್ಸರ್ ಎಂದಾಕ್ಷಣ ಭಯಕ್ಕೆ ಜಾರುವುದು ಬೇಡ. ಇದನ್ನು ಧೈರ್ಯವಾಗಿ ಎದುರಿಸಿ, ಇತರ ಜನರಲ್ಲೂ ಧೈರ್ಯ ಮೂಡಿಸಬೇಕಿದೆ ಎಂದು ಹೇಳಿದರು.

ಡಿಎಚ್‌ಒ ಡಾ.ಷಣ್ಮುಖಪ್ಪ, ಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಪ್ರಸಾದ್, ಡಾ.ಜಗದೀಶ್, ಡಾ.ಮೂಗನಗೌಡ, ಡಾ.ಲತಾ, ಡಾ.ಬಿ.ಎಸ್. ನಾಗಪ್ರಕಾಶ್, ಡಾ. ಧನ್ಯಕುಮಾರ್, ಡಾ.ಅಜಯ್, ಡಾ. ಮಹಾಂತೇಶ್, ಜಿ.ಆರ್. ಸಂತೋಷ್ ಕುಮಾರ್, ಡಾ.ಸುನಿಲ್ ಬ್ಯಾಡಗಿ ಇತರರು ಇದ್ದರು. ಜಯದೇವ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಲಾಯಿತು.

# ವೈದ್ಯಕೀಯ ಸೀಟುಗಳ ಹೆಚ್ಚಳಕ್ಕೆ ಸ್ವಾಗತ

## ವಿದ್ಯಾರ್ಥಿಗಳು ವಿದೇಶಕ್ಕೆ ತೆರಳುವುದು ತಪ್ಪಲಿದೆ ಎಂದ ಪರಿಣಿತರು

ನವದೆಹಲಿ, ಫೆ. 2 - ಮುಂದಿನ ವರ್ಷ ವೈದ್ಯಕೀಯ ಕಾಲೇಜುಗಳ ಸೀಟುಗಳ ಸಂಖ್ಯೆಯನ್ನು 10 ಸಾವಿರದಷ್ಟು ಹೆಚ್ಚಿಸಲಾಗುವುದು ಎಂದು ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿರುವುದನ್ನು ವೈದ್ಯಕೀಯ ವಲಯದ ಪರಿಣಿತರು ಸ್ವಾಗತಿಸಿದ್ದಾರೆ.

ಇದರಿಂದ ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣಕ್ಕಾಗಿ ವಿದೇಶಕ್ಕೆ ತೆರಳುವುದು ತಪ್ಪಲಿದೆ ಎಂದವರು ಹೇಳಿದ್ದಾರೆ.

ಮುಂದಿನ ಐದು ವರ್ಷಗಳಲ್ಲಿ 75,000 ವೈದ್ಯಕೀಯ ಸೀಟುಗಳನ್ನು ಸೇರ್ಪಡೆ ಮಾಡಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಬಜೆಟ್‌ನಲ್ಲಿ ತಿಳಿಸಿದ್ದಾರೆ

ಈ ಬಗ್ಗೆ ಹೇಳಿಕೆ ನೀಡಿರುವ ಇಂಡಿಯ ಎಡ್‌ಟೆಕ್ ಕನ್ಸೋರ್ಟಿಯಂ, ದೇಶದಲ್ಲಿ ಆರೋಗ್ಯ ಸೇವಾ ವಲಯದ ಬೇಡಿಕೆ ಈಡೇರಿಸಲು ಹಾಗೂ ವಿದ್ಯಾರ್ಥಿಗಳು ವಿದೇಶಗಳಿಗೆ ತೆರಳುವುದನ್ನು ತಪ್ಪಿಸಲು ಈ ಕ್ರಮ ಸಹಕಾರಿಯಾಗಿದೆ ಎಂದು ಹೇಳಿದೆ.

ಪ್ರತಿ ವರ್ಷ ವೈದ್ಯಕೀಯ ಪ್ರವೇಶಕ್ಕೆ ನಡೆಸಲಾಗುವ ನೀಟ್ ಪರೀಕ್ಷೆಗೆ 23 ಲಕ್ಷ ವಿದ್ಯಾರ್ಥಿಗಳು ಹಾಜರಾಗುತ್ತಾರೆ.ಆದರೆ ಕೇವಲ 1.1 ಲಕ್ಷ ಸೀಟುಗಳು ಮಾತ್ರ ಲಭ್ಯವಿವೆ. 75,000 ಹೆಚ್ಚುವರಿ ವೈದ್ಯಕೀಯ ಸೀಟುಗಳನ್ನು ಸೇರ್ಪಡೆ ಮಾಡುವುದರಿಂದ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳು ದೇಶದ ಹೊರಕ್ಕೆ ಹೋಗುವುದು ತಪ್ಪಲಿದೆ ಎಂದು ಇಂಡಿಯಾ ಎಡ್‌ಟೆಕ್ ಕನ್ಸೋರ್ಟಿಯಂ ಅಧ್ಯಕ್ಷ ಹಾಗೂ ಫಿಸಿಕ್ಸ್‌ವಾಲಾ ಸಹಸ್ಥಾಪಕ ಪ್ರತೀಕ್ ಮಹೇಶ್ವರಿ ಹೇಳಿದ್ದಾರೆ.

2024 - 25ರ ಆರ್ಥಿಕ ಸಮೀಕ್ಷೆಯಲ್ಲಿ ವೈದ್ಯಕೀಯ ಕಾಲೇಜುಗಳ ಲಭ್ಯತೆ ಬಗ್ಗೆ ವಿವರ ನೀಡಲಾಗಿತ್ತು. ಅದರ ಪ್ರಕಾರ ಅರ್ಧದಷ್ಟು ಪಿಜಿ ಹಾಗೂ ಯುಜಿ ಸೀಟುಗಳು ದಕ್ಷಿಣ ಭಾರತದ ರಾಜ್ಯಗಳಲ್ಲಿ ಲಭ್ಯವಿವೆ. ಅಲ್ಲದೆ ಗ್ರಾಮೀಣ ಭಾಗಕ್ಕೆ ಹೋಲಿಸಿದರೆ ನಗರ ಪ್ರದೇಶಗಳಲ್ಲಿ ವೈದ್ಯರು ನಾಲ್ಕು ಪಟ್ಟು ಹೆಚ್ಚಾಗಿದ್ದಾರೆ.

ವಿದೇಶಗಳಲ್ಲಿ ವೈದ್ಯಕೀಯ ಪದವಿ ಪಡೆದವರು ಭಾರತದಲ್ಲಿ ಅಭ್ಯಾಸ ಮಾಡುವ ಅರ್ಹತೆಗಾಗಿ ಪರೀಕ್ಷೆ ಪಡೆದಾಗ ಉತ್ತೀರ್ಣರಾಗುವ ಪ್ರಮಾಣ ಬಹಳ ಕಡಿಮೆ ಇದೆ. ಇದು ವಿದೇಶಗಳಲ್ಲಿ ಗುಣಮಟ್ಟದ ಶಿಕ್ಷಣ ಲಭ್ಯವಿಲ್ಲ ಎಂಬುದು ತೋರಿಸುತ್ತದೆ ಎಂದು ಸಮೀಕ್ಷೆಯಲ್ಲಿ ಹೇಳಲಾಗಿತ್ತು.

ವೈದ್ಯಕೀಯ ಶಿಕ್ಷಣಕ್ಕಾಗಿ ವಿದೇಶಕ್ಕೆ ತೆರಳುವುದನ್ನು ತಪ್ಪಿಸಬೇಕು. ಭಾರತದಲ್ಲಿ ವೈದ್ಯಕೀಯ ಶಿಕ್ಷಣದ ವೆಚ್ಚ

ವೆಚ್ಚ ಕಡಿಮೆ ಮಾಡಬೇಕು ಎಂದು ಸಮೀಕ್ಷೆಯಲ್ಲಿ ಹೇಳಲಾಗಿತ್ತು.

ಉನ್ನತ ಶಿಕ್ಷಣಕ್ಕಾಗಿ ಭೌತಿಕ ಸೌಲಭ್ಯಗಳನ್ನು ಹೆಚ್ಚಿಸುವ ಜೊತೆಗೆ ಗುಣಮಟ್ಟದ ಬೋಧಕರ ಅಗತ್ಯವೂ ಇದೆ ಎಂದು ಅಮರೋಪ್ ಇಂಡಿಯಾ ವ್ಯವಸ್ಥಾಪಕ ಸಹಭಾಗಿ ಪ್ರೀತಿ ಕುಮಾರ್ ಹೇಳಿದ್ದಾರೆ.

ಸರ್ಕಾರ ಉನ್ನತ ಶಿಕ್ಷಣಕ್ಕೆ ಒತ್ತು ನೀಡುತ್ತಿರುವುದು ಸ್ವಾಗತಾರ್ಹವಾಗಿದೆ. ಆದರೆ ಸರ್ಕಾರಿ ಸಂಸ್ಥೆಗಳಿಗೆ ಹೋಲಿಸಿದರೆ ಖಾಸಗಿ ಸಂಸ್ಥೆಗಳಿಗೆ ಸೇರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ. ಹೀಗಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೂ ಉತ್ತೇಜನ ನೀಡಬೇಕಿತ್ತು ಎಂದು ರಾಂಚಿಯಲ್ಲಿರುವ ಬಿಐಟಿ ಮಿಶ್ರಾದ ಉಪಕುಲಪತಿ, ಇಂದ್ರಾನಿಲ್ ಮನ್ನಾ ಹೇಳಿದ್ದಾರೆ.



# ಮುಂದಿನ ಜೀವನಕ್ಕೆ ಕಲೆ ಮತ್ತು ವಾಣಿಜ್ಯ ವಿಷಯಗಳು ಅತ್ಯವಶ್ಯಕ

**ಶಿವಾನಂದ್ ಸುತಗಟ್ಟಿ**

ದಾವಣಗೆರೆ, ಫೆ. 2- ಮುಂದಿನ ಜೀವನಕ್ಕೆ ಕಲೆ ಮತ್ತು ವಾಣಿಜ್ಯ ವಿಷಯಗಳು ಅತ್ಯವಶ್ಯಕವಾಗಿದೆ. ಮುಂದೆ ಯಾವುದಾದರೂ ಸ್ಪರ್ಧಾತ್ಮಕ ಪರೀಕ್ಷೆಗಳಾದ ಐಎಎಸ್, ಕೆಎಎಸ್ ಪರೀಕ್ಷೆಗಳನ್ನು ತೆಗೆದುಕೊಂಡು ಯಶಸ್ವಿಯಾಗಿರಿ ಎಂದು ಎನ್‌ಸಿಸಿ ಕಮಾಂಡಿಂಗ್ ಶಿವಾನಂದ್ ಸುತಗಟ್ಟಿ ತಿಳಿಸಿದರು.

ಅವರು ನಗರದ ಅಥಣಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದು, ಮಾತನಾಡಿದರು.

ಮತ್ತೋರ್ವ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವಿನಾಯಕ ಎಜುಕೇಷನ್ ಟ್ರಸ್ಟ್‌ನ ಕಾರ್ಯದರ್ಶಿ ಎನ್.ಎ. ಮುರುಗೇಶ್ ಮಾತನಾಡಿ, ನಿಮ್ಮ ಜೀವನದಲ್ಲಿ ಪ್ರಾತಃಸ್ಮರಣೀಯರು ಎಂದರೆ ರೈತ, ಯೋಧ ಮತ್ತು ಗುರು. ಇವರು ನಮ್ಮ ಸಂಸ್ಕೃತಿ, ಸಂಸ್ಕಾರ, ನಂಬಿಕೆ.

ಇವುಗಳಿಂದಲೇ ನಮ್ಮ ದೇಶ ಹೃದಯ ಶ್ರೀಮಂತಿಕೆಯನ್ನು ಹೊಂದಿದೆ. ಇದಕ್ಕೆ ಮಹಾಕುಂಭಮೇಳವೇ ಸಾಕ್ಷಿಯಾಗಿದೆ. ಕನ್ನಡ ಭಾಷಾಭಿಮಾನವನ್ನು ಉಳಿಸಿ, ಬೆಳೆಸಿ ಸಂಸ್ಕಾರವಂತವಾಗಿ ಬೆಳೆಯಿರಿ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿನಾಯಕ ಎಜುಕೇಷನ್ ಟ್ರಸ್ಟ್ ಉಪಾಧ್ಯಕ್ಷ ಬಿ.ಸಿ. ಉಮಾಪತಿ ಮಾತನಾಡಿ, ಪಿಯುಸಿ ನಂತರ ಸಾಕಷ್ಟು ಅವಕಾಶಗಳಿವೆ. ಅವುಗಳನ್ನು ಬಳಸಿ, ನಿಮ್ಮ ಕಾಲೇಜು ಹಾಗೂ ತಂದೆ-ತಾಯಿಗಳಿಗೆ, ಉಪನ್ಯಾಸಕರಿಗೆ ಕೀರ್ತಿ ತನ್ನಿ. ಅದೇ ಸಂಸ್ಕೃತಿಯನ್ನು ಉಳಿಸಿಕೊಂಡು ಜೀವನದ ಸಾರ್ಥಕತೆ ಪಡೆಯಿರಿ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಅಧ್ಯಕ್ಷ ಅಥಣಿ ಪ್ರಶಾಂತ್, ಟ್ರಸ್ಟ್‌ನ ಪದಾಧಿಕಾರಿಗಳಾದ ಸುಗಂಧರಾಜ್ ಶೆಟ್ಟಿ, ಮೋಹನ್ ಉಪಸ್ಥಿತರಿದ್ದರು.

ದೀಕ್ಷಾ, ಸುಪ್ರಿಯಾ ಕಾರ್ಯಕ್ರಮ ನಿರೂಪಿಸಿದರು.

ದಡಯಾನ ದಿವ್ಯ ವಾರ್ಷಿಕ ವರದಿ ವಾಚಿಸಿದರು. ಮಾನಸ ಸ್ವಾಗತಿಸಿದರು. ಶಂಕ್ರಮ್ಮ ವಂದಿಸಿದರು.

# ರಾಜನಹಳ್ಳಿ ಗ್ರಾ.ಪಂ. ಅಧ್ಯಕ್ಷರಾಗಿ ಹೇಮಾವತಿ, ಉಪಾಧ್ಯಕ್ಷರಾಗಿ ನಾಗೇಂದ್ರಪ್ಪ



ಮಲೇಬೆನ್ನೂರು, ಫೆ. 2 - ಹರಿಹರ ತಾಲ್ಲೂಕು ರಾಜನಹಳ್ಳಿ ಗ್ರಾಮ ಪಂಚಾಯತಿಯ ನೂತನ ಅಧ್ಯಕ್ಷರಾಗಿ ಶ್ರೀಮತಿ ಹೇಮಾವತಿ ಪರಶುರಾಮ ಮತ್ತು ಉಪಾಧ್ಯಕ್ಷರಾಗಿ ಎ.ಕೆ ನಾಗೇಂದ್ರಪ್ಪ ಅವರು ಶನಿವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚುನಾವಣೆ ನಂತರ ನೂತನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಮಾಜಿ ಶಾಸಕ ಎಸ್. ರಾಮಪ್ಪ ಅವರು ಅಭಿನಂದಿಸಿದ್ದಾರೆ.

## ಸಿಗದೇ ರಾಜೀನಾಮೆ

**(1ನೇ ಪುಟದಿಂದ)** ಬಹಿರಂಗ ಪಡಿಸಿರಲಿಲ್ಲ. ಭಾನುವಾರ ಸುದ್ದಿಗಾರ ರೊಂದಿಗೆ ಮಾತನಾಡಿದ ಪಾಟೀಲ್, ಮುಖ್ಯಮಂತ್ರಿಗಳ ರಾಜಕೀಯ ಸಲಹೆಗಾರ ಸ್ಥಾನಕ್ಕೆ ನಾನು ರಾಜೀನಾಮೆ ಕೊಟ್ಟಿರುವುದು ವಿಶೇಷವೇನಲ್ಲ. ಅನೇಕ ಸಮಸ್ಯೆಗಳಿವೆ. ನಾನು ಮೊದಲೇ ರಾಜೀನಾಮೆ ಕೊಡಬೇಕಿತ್ತು. ಆದರೆ ಈಗ ರಾಜೀನಾಮೆ ನೀಡುವ ಸಂದರ್ಭ ಬಂದಿತು. ಒಂದು ವೇಳೆ ಮುಖ್ಯಮಂತ್ರಿ ನನ್ನ ಕರೆದರೆ, ಅವರನ್ನು ಭೇಟಿಯಾಗಿ ಎಲ್ಲವನ್ನೂ ವಿವರಿಸುವುದಾಗಿ ಹೇಳಿದರು.

## ನಕ್ಸಲ್ ಲಕ್ಷ್ಮಿ ಶರಣು

**(1ನೇ ಪುಟದಿಂದ)** ಮುಖ್ಯವಾಹಿನಿಗೆ ಮರಳಿ ಸಾಮಾನ್ಯ ಜೀವನ ನಡೆಸಲು ಸಾಧ್ಯವಾಗಬೇಕು ಎಂದು ಸರ್ಕಾರಕ್ಕೆ ಶಿಫಾರಸ್ಸು ಸಲ್ಲಿಸಿರುವುದಾಗಿ ಹೇಳಿದ್ದಾರೆ. ಸಮಿತಿಯ ಪ್ರಯತ್ನದ ಕಾರaಣದಿಂದಾಗಿ 2025 ರಲ್ಲಿ ಇದುವರೆಗೂ 22 ನಕ್ಷಲರು ಶರಣಾಗಿದ್ದಾರೆ. ಲಕ್ಷ್ಮಿ ಶರಣಾಗತಿಯೊಂದಿಗೆ ರಾಜ್ಯ ನಕ್ಸಲ್ ಮುಕ್ತವಾಗಿದೆ ಎಂದವರು ಹೇಳಿದ್ದಾರೆ.

# ಸುಸೂತ್ರವಾಗಿ ವಸಂತ ಪಂಚಮಿ ಅಮೃತ ಸ್ನಾನಕ್ಕೆ ಸಿದ್ಧತೆ

ಮಹಾಕುಂಭ ನಗರ, ಫೆ 2 - ಮಹಾ ಕುಂಭಮೇಳದಲ್ಲಿ ಸೋಮವಾರದ ವಸಂತ ಪಂಚಮಿ ಅಮೃತ ಸ್ನಾನ ಕಾರ್ಯಕ್ರಮ ಯಾವುದೇ ಲೋಪವಿಲ್ಲದೆ ಸುಸೂತ್ರವಾಗಿ ನೆರವೇರಿಸಬೇಕು ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ನೀಡಿರುವ ಸೂಚನೆಯಂತೆ ಅಧಿಕಾರಿಗಳು ಅಗತ್ಯ ಸಿದ್ಧತೆಗಳನ್ನು ಕೈಗೊಂಡಿದ್ದಾರೆ.

ಕಳೆದ ಜನವರಿ 29ರಂದು ಮೌನಿ ಅಮಾವಾಸ್ಯೆ ದಿನದಂದು ಸಂಭವಿಸಿದ ಕಾಲ್ತುಳಿತದಲ್ಲಿ ಕನಿಷ್ಠ 30 ಜನ ಸಾವನ್ನಪ್ಪಿದ್ದರು. ಈ ಹಿನ್ನೆಲೆಯಲ್ಲಿ ಕುಂಭಮೇಳದಲ್ಲಿ ಸಾಕಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಈ ಹಿಂದೆ 2019 ರಲ್ಲಿ ನಡೆದ ಅರ್ಧ ಕುಂಭಮೇಳದಲ್ಲಿ ಉಸ್ತುವಾರಿ ವಹಿಸಿದ್ದ ಇಬ್ಬರು ಹಿರಿಯ ಐಎಎಸ್ ಅಧಿಕಾರಿಗಳನ್ನು ಈ ಬಾರಿ ಗುಂಪು ನಿಯಂತ್ರಣಕ್ಕೆ ನಿಯೋಜಿಸಲಾಗಿದೆ. ಆಶಿಶ್ ಗೋಯಲ್ ಹಾಗೂ ಭಾನು ಚಂದ್ರ ಗೋಸ್ವಾಮಿ ಅವರು ಅರ್ಧ ಕುಂಭಮೇಳದಲ್ಲಿ ಗುಂಪು ನಿಯಂತ್ರಣ ಕ್ರಮಗಳನ್ನು ತೆಗೆದುಕೊಂಡ ಅನುಭವ ಹೊಂದಿದ್ದಾರೆ. ಮೌನಿ ಅಮಾವಾಸ್ಯೆ ದಿನದಂದು ಕಾಲ್ತುಳಿತ ಸಂಭವಿಸಿದ ನಂತರ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಪ್ರಯಾಗ್‌ರಾಜ್‌ಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ನಂತರ ವಸಂತ ಪಂಚಮಿ ಅಮೃತ ಸ್ನಾನದ ಸಿದ್ಧತೆಗಳ ಕುರಿತು ವಿವರ ಪಡೆದಿದ್ದರು.



'ಮಹಾ ಕುಂಭಮೇಳ' ಉತ್ಸವದ ಸಂದರ್ಭದಲ್ಲಿ 'ವಸಂತ ಪಂಚಮಿ' ಮುನ್ನಾದಿನ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಲು ಭಕ್ತರು ಸೇತುವೆ ದಾಟುತ್ತಿರುವುದು.

ಭಕ್ತರು ಘಾಟ್‌ಗಳಲ್ಲಿ ಸ್ನಾನ ಪೂರೈಸಿದ ನಂತರ ಅಲ್ಲಿಂದ ತೆರಳಬೇಕು. ಅನಗತ್ಯವಾಗಿ ಅಲೆದಾಡಬಾರದು, ಈ ಬಗ್ಗೆ ಪೊಲೀಸರು ಗಮನಹರಿಸಬೇಕು ಎಂದು ಸೂಚನೆ ನೀಡಲಾಗಿದೆ.

ಬಸಂತ ಪಂಚಮಿ ಅಮೃತ ಸ್ನಾನಕ್ಕಾಗಿ ಆಗಮಿಸುವವರ ಸಂಖ್ಯೆ ಭಾನುವಾರದಂದೇ ಸಾಕಷ್ಟು ಹೆಚ್ಚಾಗಿತ್ತು. ಇದುವರೆಗೂ 33.61 ಕೋಟಿ ಜನರು ಮಹಾ ಕುಂಭದಲ್ಲಿ ಪವಿತ್ರ ಸ್ನಾನ ಮಾಡಿದ್ದಾರೆ.

ಈ ನಡುವೆ ಹೇಳಿಕೆ ನೀಡಿರುವ ಅಖಿಲ ಭಾರತ ಅಖಾಡ ಪರಿಷತ್ ಅಧ್ಯಕ್ಷ ಮಹಂತ ರವೀಂದ್ರಪುರಿ, ಪ್ರಯಾಗ್ ರಾಜ್ ಸುತ್ತಲಿನ ಐದು ಕೋಸ್ ಪ್ರದೇಶ ಸಂಗಮದ ಭಾಗವೆಂದು ಪರಿಗಣಿಸಲಾಗಿದೆ. ಈ ಪ್ರದೇಶದಲ್ಲಿ ಎಲ್ಲೇ ಸ್ನಾನ ಮಾಡಿದರೂ ಪವಿತ್ರವಾಗಿದೆ ಎಂದು ತಿಳಿಸಿದ್ದಾರೆ.

ಸಂಗಮದಲ್ಲಿರುವ ಜಾಗ ಕಡಿಮೆ ಇದೆ. ಹೀಗಾಗಿ ಈ ಪ್ರದೇಶದಲ್ಲಿ ಸ್ನಾನ ಮಾಡಬೇಕು ಎಂದು ಅನಗತ್ಯ ಗುಂಪು ಸೇರಬಾರದು ಎಂದವರು ಕರೆ ನೀಡಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಇದೇ ದಿನಾಂಕ 5ರಂದು ಮಹಾಕುಂಭ ನಗರಕ್ಕೆ ಭೇಟಿ ನೀಡುವ ಪ್ರಸ್ತಾಪ ಇದೆ. ಈ ಹಿನ್ನೆಲೆಯಲ್ಲಿ ಮುಂದಿನ ಕೆಲ ದಿನಗಳು ಕುಂಭಮೇಳ ಅಧಿಕಾರಿಗಳು ಹಾಗೂ ಪೊಲೀಸರಿಗೆ ಸವಾಲಿನದ್ದಾಗಿದೆ.

ಅಮೃತ ಸ್ನಾನದ ದಿನದಂದು ಸಂಗಮದಲ್ಲಿ ಪವಿತ್ರ ಸ್ನಾನ ಮಾಡುವುದು ಶ್ರೇಷ್ಠ, ಇದರಿಂದ ಮೋಕ್ಷ ದೊರೆಯುತ್ತದೆ ಎಂದು ಭಕ್ತರು ಭಾವಿಸಿದ್ದಾರೆ. ಅಲ್ಲದೆ ಅಮೃತ ಸ್ನಾನದ ವೇಳೆ ಸಂತರು ಹಾಗೂ ಸನ್ಯಾಸಿಗಳ ಭವ್ಯ ಮೆರವಣಿಗೆ ನಡೆಯುತ್ತದೆ. ಹೀಗಾಗಿ ಸಾಕಷ್ಟು ಜನರು ಸಂಗಮದಲ್ಲಿ ಪವಿತ್ರ ಸ್ನಾನ ಮಾಡಲು ಬಯಸುತ್ತಾರೆ.

ಜನವರಿ 14ರ ಮಕರ ಸಂಕ್ರಾಂತಿ, ಜನವರಿ 29ರ ಮೌನಿ ಅಮಾವಾಸ್ಯೆ ಹಾಗೂ ಫೆಬ್ರವರಿ 3ರ ವಸಂತ ಪಂಚಮಿಗಳಂದು ಅಮೃತ ಸ್ನಾನ ನೆರವೇರಿಸಲಾಗುತ್ತದೆ.

ಇವುಗಳಲ್ಲದೆ ಜನವರಿ 13ರ ಪೌಷ್ ಪೂರ್ಣಿಮೆ ಹಾಗೂ ಫೆಬ್ರವರಿ 12ರ ಮಾಘಿ ಪೂರ್ಣಿಮೆ ಮತ್ತು ಫೆಬ್ರವರಿ 26ರ ಮಹಾ ಶಿವರಾತ್ರಿಗಳು ಶ್ರೇಷ್ಠ ಎಂದು ಭಾವಿಸಲಾಗಿದೆ.

# ತರಳರ ಬಾಳಿನ ಬೆಳಕು : ತರಳಬಾಳು ಹುಣ್ಣಿಮೆ

12 ನೇ ಶತಮಾನದಲ್ಲಿ ಬೆಳಗಿದ ಕ್ರಾಂತಿ ಯೋಗಿ ಮರುಳಸಿದ್ಧರದು ಜನಮುಖಿ ನಡೆ. ಅವರು ಸರ್ವೋದಯದ ವಹೊಂಗಿರಣ, ವೈಚಾರಿಕತೆಯ ಮುಂಗೋಳಿ. ಚಿನ್ಮೂಲಾದ್ರಿಯ ಗಿರಿ ಶ್ರೇಣಿಯಲಿ ತಪಗೈದ ಗುರು ರೇವಣಸಿದ್ಧರಿಂದ ದೀಕ್ಷಿತರಾದ ಅವರದು ಪ್ರಖರ ಸೂರ್ಯನ ಕಳೆ.

ಕತ್ತಲೆ ಇರುವೆಡೆ ಬೆಳಕಿನ ಬೀಜ ಬಿತ್ತಬೇಕೆಂಬ ಸಂಕಲ್ಪ. ಮೌಢ್ಯ ತುಂಬಿರುವಲ್ಲಿ ಅರಿವಿನ ಜ್ಯೋತಿ ಬೆಳಗಿಸುವ ದೃಢತೆ. ಅದಕ್ಕೆ ಬತ್ತಿಯಾಗಿ ಉರಿದು ಬೆಳಗುವ ಹಣತೆಯೇ ಸದ್ಧರ್ಮ ಪೀಠ. ಈ ಪೀಠದಲ್ಲಿ ಆಸೀನರಾದ ಗುರು ಪರಂಪರೆಯ ದೃಷ್ಟಿ ಲೋಕ ಕಲ್ಯಾಣ. 'ಇವನಾರವ ಇವನಾರವ ಎಂದೆನ್ನದೆ, ಇವ ನಮ್ಮವ ಇವ ನಮ್ಮವ' ಎನ್ನುವ ಸಮತಾಭಾವ. ಸಕಲ ಜೀವಾತ್ಮಗಳಿಗೂ ಲೇಸ ಬಯಸುವ ವಿಶ್ವ ವಿಶಾಲ ಮನೋಭೂಮಿಕೆ. ಇಂತಹ ಉದಾತ್ತ ಚಿಂತನೆಗಳ ಪ್ರಕೋಷ್ಟವೇ 'ತರಳಬಾಳು ಹುಣ್ಣಿಮೆ ಮಹೋತ್ಸವ' .

ಮಾಘ ಮಾಸದ ಶುಕ್ಲ ಪಕ್ಷದ ಹುಣ್ಣಿಮೆಯ ಆ ಬೆಳದಿಂಗಳು ಇತರೆ ಹುಣ್ಣಿಮೆಗಳಂತಲ್ಲ. ಶತಶತಮಾನಗಳಿಂದ ಹತಭಾಗ್ಯರಾದ ಸಮುದಾಯಕ್ಕೆ ಸ್ವಂತಿಕೆ, ಸ್ವಾಭಿಮಾನದ ಓಕುಳಿ ಎರಚಿದ ಹುಣ್ಣಿಮೆ. ದಯೆ, ಸಮತೆ, ನಿಜ ಧರ್ಮ, ಕಾಯಕ ಪ್ರಜ್ಞೆ ಮೂಡಿಸಿದ ಪೂರ್ಣಿಮೆ.

'ಲೋಕದ ತರಳರೆಲ್ಲರ ಬಾಳು ಬೆಳಗಲಿ' ಎಂಬ ಶುದ್ಧಾಂತಃ ಕರಣದ ಹಾರೈಕೆಯೇ 'ತರಳಬಾಳು' ಪಂಚಾಕ್ಷರಿ. ಇದು ರೂಢಮೂಲ ಸಮಾಜಕ್ಕೆ ನವೋದಯದ ಕಿರಣ ಲೀಲೆಗಳನ್ನು ಮೂಡಿಸಿದ ಮಂತ್ರ. ಈ ಮಂತ್ರ ದ್ರಷ್ಟಾರ 'ವಿಶ್ವಬಂಧು ಮರುಳಸಿದ್ಧ'ರ ಬಳುವಿಡಿದ ತರಳಬಾಳು ಗುರು ಪರಂಪರೆಯ ಸತ್ಸಂಕಲ್ಪವೇ 'ಹಸಿದವನಿಗೆ ಮೀನ ನೀಡುವ ಬದಲು, ಮೀನು ಹಿಡಿ ಯುವ ಕೌಶಲ್ಯಕ್ಕೆ ಆದ್ಯತೆ'. ಹಾಗಾಗಿ ಗ್ರಾಮ ಭಾರತದ ಉದ್ಧಾರದ ಮನೋಭಿತ್ತಿ. ಅದಕ್ಕಾಗಿ ಶಿಕ್ಷಣ, ಉದ್ಯೋಗ, ಕೃಷಿ ಮುಂತಾದ ಕ್ಷೇತ್ರಗಳಲ್ಲಿ ಸ್ಮರ ಣೀಯ ಹೆಜ್ಜೆ ಗುರುತುಗಳು. ಯೋಧ ಮತ್ತು ರೈತ ದೇಶದ ಎರಡು ಕಣ್ಣುಗಳು. ಅವರನ್ನು ಸಬಲಗೊಳಿಸುವಲ್ಲಿ ದಿಟ್ಟ ಹೆಜ್ಜೆ. ನೆರೆ ಬರಗಳಂತಹ ನೈಸರ್ಗಿಕ ವಿಕೋಪಕ್ಕೆ ಮಾನವೀಯ ಮಿಡಿತ. ಕಲೆ-ವಿಜ್ಞಾನಗಳ ಒಡಗೂಡಿದ ಸಮಾಗಮ. ಪರಂಪರೆಯೊಂದಿಗೆ ಆಧುನಿಕತೆಯ ಸ್ಪರ್ಶ. ಇದುವೇ ಬಿಸಿಲಿನಲ್ಲೂ ಬೆಳದಿಂಗಳ ತಂಪೆರಚುವ ಈ 'ತರಳಬಾಳು ಹುಣ್ಣಿಮೆ ಮಹೋತ್ಸವದ ಪರಿ'




**ಭರಮಸಾಗರದಲ್ಲಿ ಹುಣ್ಣಿಮೆ**

ಕೆರೆ ಅಂಗಳದಾಗ ನೀರು ಇದ್ರೆ ಮನಿ ಗಂಗಳದಾಗ ಮುದ್ದಿ ಇದ್ದಂಗ, ಕೆರೆಯಲ್ಲಿ ನೀರಿದ್ದರೆ ಊರಿಗೆಲ್ಲ ಕನಸು, ಕೆರೆ ಬೇರು-ಊರು ಫಲ - ಮುಂತಾದ ಗಾದೆ ಮಾತುಗಳು ಕೆರೆಯ ಮಹತ್ವವನ್ನು ಸೂಚಿಸುತ್ತವೆ. ಕೆರೆಗಳು ತುಂಬಿದ್ದರೆ ಊರು ಉಸಿರಾಡುತ್ತವೆ, ಊರು ಕಟ್ಟುವ ಮೊದಲು ಕೆರೆಕಟ್ಟು ಎಂಬ ಮಾತುಗಳು ಕೆರೆಗಳು ಗ್ರಾಮೀಣರ ಬದುಕಿನಲ್ಲಿ ಅವಿಭಾಜ್ಯ ಅಂಗವಾಗಿದ್ದವು ಎಂಬುದನ್ನು ತಿಳಿಸುತ್ತವೆ. ಹಿಂದೆ ರಾಜಮಹಾರಾಜರು, ಪಾಳೆಯಗಾರರು, ನಾಡಗೌಡ, ಊರಗೌಡ ಮುಂತಾದವರು ಕೆರೆಗಳನ್ನು ಕಟ್ಟಿಸುವುದರ ಮೂಲಕ ಜನೋಪಕಾರಿಗಳಾಗಿದ್ದರು.

ಕೆರೆಗಳ ಸುತ್ತ ಕಥೆ, ಕವಿತೆ, ಚರಿತೆ, ಹಾಡುಗಳಿವೆ. ತ್ಯಾಗ, ಬಲಿದಾನಗಳನ್ನು ಕುರಿತ ಐತಿಹ್ಯಗಳು, ನಂಬಿಕೆಗಳು, ಜಾನಪದ ಆಚರಣೆಗಳಿವೆ. ರೈತರ ಬದುಕು, ಪಶುಪಕ್ಷಿಗಳ ಜೀವನ, ಗಿಡಮರಗಳ ನಂಟು, ವಾಣಿಜ್ಯ ವ್ಯವಹಾರಗಳ ಸಂಬಂಧಗಳು ಈ ಕೆರೆಗಳನ್ನು ಅವಲಂಬಿಸಿವೆ.

ಆಧುನಿಕತೆ, ಸ್ವಾರ್ಥ, ದುರಾಸೆಗಳು ಎಲ್ಲಾ ರಂಗಗಳಲ್ಲೂ ಆವರಿಸಿದಂತೆ, ನಮ್ಮ ಕೆರೆ ಸಂಸ್ಕೃತಿಯ ಮೇಲೂ ಆವರಿಸಿ, ಕೆರೆಗಳ ಕಣ್ಮರೆಗೆ ಕಾರಣವಾಗಿದೆ. ಕೆರೆಗಳ ನಾಶ ಗ್ರಾಮೀಣ ಬದುಕು, ಸಂಸ್ಕೃತಿ, ಪರಂಪರೆ, ನಂಬಿಕೆ, ಆಚರಣೆಗಳ ನಾಶಕ್ಕೂ ನಾಂದಿಯಾಗುತ್ತಿದೆ. ಇದನ್ನು ಮನಗಂಡ ಪರಮಪೂಜ್ಯ ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ಕೆರೆಗಳ ಪುನರುಜ್ಜೀವನಕ್ಕೆ ಮುಂದಾದರು.

ಪ್ರತಿವರ್ಷ ಮಳೆಗಾಲದಲ್ಲಿ ನದಿಗಳ ಲಕ್ಷಾಂತರ ಕ್ಯೂಸೆಕ್ಸ್ ನೀರು ವ್ಯರ್ಥವಾಗಿ ಹರಿದು ಸಮುದ್ರ ಸೇರುತ್ತದೆ. ಆ ನೀರನ್ನು ಸರ್ಕಾರದ ನೆರವಿನಿಂದ ಏತ ನೀರಾವರಿ ಯೋಜನೆಯ ಮೂಲಕ ಬಯಲು ಸೀಮೆಯ ಕೆರೆಗಳಿಗೆ ತುಂಬಿಸುವ ಸಾಹಸದ ಕೆಲಸ ಪೂಜ್ಯರದು. ಈ ಸಾಹಸದ ಕಾರ್ಯದಲ್ಲಿ ಉಬ್ರಾಣಿ, ಅಮೃತಾಪುರ, ರಾಜನಹಳ್ಳಿ, ರಣಗಟ್ಟ, ಜಗಳೂರು, ಭರಮಸಾಗರ, ಸಾಸ್ವೆಹಳ್ಳಿ, ಆಣೂರು ಮುಂತಾದ ಏತ ನೀರಾವರಿ ಯೋಜನೆಗಳು ಈಗಾಗಲೇ ಜಾರಿಯಲ್ಲಿವೆ. ಈ ಎಲ್ಲಾ ಕಡೆ ಸಮೀಪದ ನದಿಗಳಿಂದ ಹಲವು ಮೈಲುಗಳ ದೂರದಲ್ಲಿರುವ ನೂರಾರು ಕೆರೆಗಳಿಗೆ ನೀರು ತುಂಬಿಸುವುದರ ಮೂಲಕ ಪೂಜ್ಯರು 'ಬಯಲು ಸೀಮೆಯ ಭಗೀರಥ' ಎಂಬ ಅಭಿದಾನಕ್ಕೆ ಪಾತ್ರರಾಗಿದ್ದಾರೆ.

ಚಿತ್ರದುರ್ಗದ ಪಾಳೆಯಗಾರ ಭರಮಣ್ಣ ನಾಯಕ 1820ರಲ್ಲಿ ಕಟ್ಟಿಸಿದ ಭರಮ ಸಾಗರದ ಕೆರೆ ಸಾವಿರಾರು ಎಕರೆಗಳಷ್ಟು ವಿಸ್ತೀರ್ಣವುಳ್ಳ ಬೃಹತ್ ಕೆರೆ. ಆದರೆ ಕಾಲಕಾಲಕ್ಕೆ ಸಮರ್ಪಕ ಮಳೆಯಾಗದೆ ಕೆರೆಗೆ ನೀರು ಬರದೆ ದಶಕಗಳಿಗೊಮ್ಮೆ ತುಂಬಿದ್ದೇ ಹೆಚ್ಚು. ಹಾಗಾಗಿ ಈ ಒಣಭೂಮಿ ಪ್ರದೇಶ ವೆಲ್ಲಾ ಬರಡಾಗಿತ್ತು. ಪೂಜ್ಯರ ಸಂಕಲ್ಪಶಕ್ತಿಯಿಂದ 560 ಕೋಟಿ ರೂಪಾಯಿಗಳ ವೆಚ್ಚದಲ್ಲಿ 55 ಕಿ. ಮೀ. ದೂರದ ತುಂಗಭದ್ರಾ ನದಿಯಿಂದ ಈ ಕೆರೆಗೆ ನೀರನ್ನು ಹರಿಸಲಾಗುತ್ತಿದೆ. ಮತ್ತೆ ಈ ಕೆರೆಯಿಂದ ಸುತ್ತಮುತ್ತಲಿನ 43 ಕೆರೆಗಳಿಗೆ ಜಾಕ್‌ವೆಲ್ ಮೂಲಕ ನೀರು ಹರಿಯುತ್ತಿದೆ. ಇದರಿಂದ ನೂರಾರು ಹಳ್ಳಿಗಳ ಲಕ್ಷಾಂತರ ಎಕರೆ ಭೂಮಿ ಹಸಿರಿನಿಂದ ಕಂಗೊಳಿಸಲು ಸಾಧ್ಯವಾಗಿದೆ.

ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ನೇತೃತ್ವದಲ್ಲಿ ಭರಮಸಾಗರದಲ್ಲಿ ಏರ್ಪಾಡಾಗಿರುವ 'ತರಳಬಾಳು ಹುಣ್ಣಿಮೆ ಮಹೋತ್ಸವ- 2024' ರೈತರ ಬಾಳಿನಲ್ಲಿ ಭರವಸೆಯ ಬೆಳಕನ್ನು ಮೂಡಿಸುತ್ತಿರುವ ಬೆಳದಿಂಗಳೋತ್ಸವ.

- ನಾಗರಾಜ ಸಿರಿಗೆರೆ
ಕನ್ನಡ ಅಧ್ಯಾಪಕ
ಶ್ರೀ ಮರುಳಸಿದ್ದೇಶ್ವರ ಪ್ರೌಢಶಾಲೆ,
ಆನಗೋಡು, ದಾವಣಗೆರೆ

## ಸಂಸತ್ತಿನಲ್ಲಿ ರಾಮಾಯಣ ಚಲನಚಿತ್ರ ಪ್ರದರ್ಶನ

ನವದೆಹಲಿ, ಫೆ. 2 - 1993 ರಲ್ಲಿ ಭಾರತ - ಜಪಾನ್ ಸಹಭಾಗಿತ್ವದಲ್ಲಿ ನಿರ್ಮಿಸಲಾಗಿದ್ದ ಆನಿಮೆ ಚಿತ್ರ 'ರಾಮಾಯಣ : ದ ಲೆಜೆಂಡ್ ಆಫ್ ಪ್ರಿನ್ಸ್ ರಾಮ' ಅನ್ನು ಸಂಸತ್ತಿನಲ್ಲಿ ಫೆಬ್ರವರಿ 15 ರಂದು ಪ್ರದರ್ಶಿಸಲಾಗುವುದು ಎಂದು ಚಿತ್ರ ವಿತರಣಾ ಕಂಪನಿಯಾದ ಗೀಕ್ ಪಿಕ್ಚರ್ಸ್ ತಿಳಿಸಿದೆ.

ಲೋಕಸಭಾಧ್ಯಕ್ಷ ಓಂ ಬಿರ್ಲಾ ಹಾಗೂ ಸಂಸದರು ಮತ್ತು ವಿಶೇಷ ಆಹ್ವಾನಿತರು ಈ ಚಿತ್ರ ಪ್ರದರ್ಶನದಲ್ಲಿ ಭಾಗವಹಿಸಲಿದ್ದಾರೆ. ಇದು ಚಲನಚಿತ್ರ ಪ್ರದರ್ಶನವಷ್ಟೇ ಅಲ್ಲದೇ ನಮ್ಮ ಭವ್ಯ ಪರಂಪರೆ ಹಾಗೂ ಕಾಲಾತೀತ ವಾದ ರಾಮಾಯಣ ಕಥೆಯನ್ನು ಸಂಭ್ರಮಿಸುವುದಾಗಿದೆ ಎಂದು ಗೀಕ್ ಪಿಕ್ಚರ್ಸ್ ಸಹ ಸ್ಥಾಪಕ ಅರ್ಜುನ್ ಅಗರ್ವಾಲ್ ಹೇಳಿದ್ದಾರೆ.

'ರಾಮಾಯಣ : ದಿ ಲೆಜೆಂಡ್ ಆಫ್ ಪ್ರಿನ್ಸ್ ರಾಮ' ಚಲನಚಿತ್ರ ವನ್ನು ಹೊಸ ಆವೃತ್ತಿಯೊಂದಿಗೆ ಜನವರಿ 24ರಂದು ಬಿಡುಗಡೆ ಮಾಡಲಾಗಿತ್ತು.

ಈ ಅನಿಮೆ ಚಲನಚಿತ್ರವನ್ನು 1993ರಲ್ಲಿ ಭಾರತದಲ್ಲಿ ನಡೆದ 24ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶಿಸಲಾಗಿತ್ತು.

ಆದರೆ ಈ ಚಿತ್ರ ಸಿನಿಮಾ ಮಂದಿರಗಳಲ್ಲಿ ಬಿಡುಗಡೆಯಾಗಿರಲಿಲ್ಲ. ನಂತರ ಈ ಚಿತ್ರ ಟಿವಿ ವಾಹಿನಿಗಳ ಮೂಲಕ ಜನಪ್ರಿಯವಾಗಿತ್ತು.

## ಹೊಯ್ಸಳ ಸಿಬ್ಬಂದಿಗೆ 'ಉತ್ತಮ ತುರ್ತು ಸ್ಪಂದನಾ ಅಧಿಕಾರಿ' ಪ್ರಶಸ್ತಿ



ದಾವಣಗೆರೆ, ಫೆ. 2- ತುರ್ತು ಸ್ಪಂದನಾ ವ್ಯವಸ್ಥೆಯ ತಿಂಗಳ 'ಉತ್ತಮ ತುರ್ತು ಸ್ಪಂದನಾ ಅಧಿಕಾರಿ' (Best Responder Of the Month ) ಪ್ರಶಸ್ತಿಗೆ ಜಿಲ್ಲೆಯ ಮೂವರು ಹೊಯ್ಸಳ ಸಿಬ್ಬಂದಿ ಆಯ್ಕೆಯಾಗಿದ್ದಾರೆ.

ಗ್ರಾಮಾಂತರ ಪೊಲೀಸ್ ಠಾಣೆಯ ಪೊಲೀಸ್ ಹೆಡ್ ಕಾನ್‌ಸ್ಟೇಬಲ್ ಮಾಲತೇಶ್, ಜಿಲ್ಲಾ ಸಶಸ್ತ್ರ ಮೀಸಲು ಪಡೆ ದಾವಣಗೆರೆ ಘಟಕದ ಪೊಲೀಸ್ ಕಾನ್‌ಸ್ಟೇಬಲ್ ವಿನೋದ್ ಕುಮಾರ್, ಜಿಲ್ಲಾ ನಿಸ್ತಂತು ವಿಭಾಗದ ಹೆಡ್ ಕಾನ್‌ಸ್ಟೇಬಲ್ ಸಂತೋಷ್ ಪ್ರಶಸ್ತಿ ಸ್ವೀಕರಿಸಿದ್ದಾರೆ. ಡಿಜಿ ಮತ್ತು ಐಜಿಪಿ ಅಲೋಕ್ ಮೋಹನ್ ಅವರು, ಪ್ರಶಸ್ತಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನವೆಂಬರ್-2024ರ ಪ್ರಶಂಸನಾ ಪತ್ರ ಹಾಗೂ 5 ಸಾವಿರ ನಗದು ಬಹುಮಾನ ನೀಡಿದ್ದಾರೆ. ಪ್ರಶಸ್ತಿ ಪುರಸ್ಕೃತರಿಗೆ ಜಿಲ್ಲಾ ಪೊಲೀಸ್ ಇಲಾಖೆಯಿಂದ ಅಭಿನಂದಿಸಲಾಯಿತು.

## ತುಂತುರು ನೀರಾವರಿ ಪರಿಕರಗಳಿಗೆ ಅರ್ಜಿ ಆಹ್ವಾನ

ದಾವಣಗೆರೆ, ಫೆ. 2- ಕೃಷಿ ಇಲಾಖೆ ಮೂಲಕ ಎಲ್ಲಾ ವರ್ಗದ ರೈತರಿಗೆ ತುಂತುರು ನೀರಾವರಿ ಯೋಜನೆಯಡಿ ಸ್ಪ್ರಿಂಕ್ಲರ್ ಪಂಪ್‌ಸೆಟ್ ಸರ್ಕಾರದ ಸಹಾಯಧನದಲ್ಲಿ ವಿತರಿಸಲು ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ರೈತರು ರೈತ ಸಂಪರ್ಕ ಕೇಂದ್ರಗಳನ್ನು ಸಂಪರ್ಕಿಸಿ ಅರ್ಜಿ ಸಲ್ಲಿಸಬಹುದು.

ಮಾಹಿತಿಗೆ ಕಸಬಾ ದೂ.ಸಂ: 8277931143, 97430 56797, ಆನಗೋಡು ದೂ.ಸಂ: 8277931137,9148382913, ಮಾಯಕೊಂಡ ದೂ.ಸಂ: 8277931136,9620282104 ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಲು ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

## ನಿಟುವಳ್ಳಿಯಲ್ಲಿ ಮಾರ್ಕಂಡೇಶ್ವರ ಧ್ಯಾನ ಮಂದಿರ ನಿರ್ಮಾಣದ ಭೂಮಿ ಪೂಜೆ



ದಾವಣಗೆರೆ, ಫೆ. 2- ನಿಟುವಳ್ಳಿಯ ಶ್ರೀ ಗುರು ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜ ಸಮಿತಿ ವತಿಯಿಂದ ಶ್ರೀ ಮಾರ್ಕಂಡೇಶ್ವರ ಜಯಂತ್ಯೋತ್ಸವದ ಅಂಗವಾಗಿ ಮಾರ್ಕಂಡೇಶ್ವರ ಧ್ಯಾನ ಮಂದಿರ ನಿರ್ಮಾಣದ ಭೂಮಿ ಪೂಜೆಯ ಕಾರ್ಯಕ್ರಮ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀ ಗುರು ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜ ಸಮಿತಿಯ ಅಧ್ಯಕ್ಷ ಕೋತಮ್ ಚಿದಾನಂದ್, ಉಪಾಧ್ಯಕ್ಷ ಶೇಪುರ್ ಸತ್ಯನಾರಾಯಣ, ಪೊತುಲ್ ಶ್ರೀನಿವಾಸ್, ಪೇರಿಮಿನವರ್ ಮಾರ್ಕಂಡೇಯ, ಖಜಾಂಚಿ ಎಂ. ಬಸವರಾಜ್ ಗುಗ್ರಿ, ಕಾರ್ಯದರ್ಶಿ ಚುಂಚುಲರ್ ಕುಮಾರ್, ಸಹಕಾರ್ಯದರ್ಶಿ ವಿಶ್ವನಾಥ್ ಗಣೇಶ್, ವಸೇನವರು ಸತೀಶ್ ಹೆಚ್.ಆರ್. ಸಂಘಟನಾ ಕಾರ್ಯದರ್ಶಿ ಮೇಡಪಳ್ಳಿ ವೆಂಕಟೇಶ್ ಹಾಗೂ ಪದ್ಮಶಾಲಿ ಸಮಿತಿಯ ಸದಸ್ಯರುಗಳು, ಪದ್ಮಶಾಲಿ ಸಮಾಜ ಬಾಂಧವರು ಉಪಸ್ಥಿತರಿದ್ದರು.

## ಹೊನ್ನಾಳಿ : ಹಾಲಿನ ಸೊಸೈಟಿ ಅಧ್ಯಕ್ಷರಾಗಿ ಷಣ್ಮುಖ ನಾಯ್ಕ್



ಹೊನ್ನಾಳಿ, ಫೆ. 2 - ತಾಲ್ಲೂಕಿನ ಘಂಟ್ಯಾಪುರ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಬಿ. ಷಣ್ಮುಖ ನಾಯ್ಕ್ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಸಹಕಾರ ಅಭಿವೃದ್ಧಿ ಅಧಿಕಾರಿ ಎ.ಜಿ. ನವೀನ್ ಕುಮಾರ್ ಘೋಷಿಸಿದರು.

ಹಿಂದಿನ ಅಧ್ಯಕ್ಷರಾಗಿದ್ದ ಆರ್.ಸಿ. ಉಮೇಶ್ ನಾಯ್ಕ್ ಅವರಿಂದ ತೆರವಾದ ಸ್ಥಾನಕ್ಕೆ ಇತರೆ ಸದಸ್ಯರಾರೂ ಉಮೇದುವಾರಿಕೆ ಸಲ್ಲಿಸದ ಕಾರಣ ಬಿ. ಷಣ್ಮುಖ ನಾಯ್ಕ್ ಅವರು ಅವಿರೋಧವಾಗಿ ಅಧ್ಯಕ್ಷರಾಗಿ ಆಯ್ಕೆಯಾದರು.

ಈ ಸಂದರ್ಭದಲ್ಲಿ ಮಾಜಿ ಅಧ್ಯಕ್ಷ ಆರ್.ಸಿ. ಉಮೇಶ್ ನಾಯ್ಕ್, ಉಪಾಧ್ಯಕ್ಷೆ ಅಮ್ಮಿಬಾಯಿ, ನಿರ್ದೇಶಕ ಕೆ.ಎಲ್. ನಾಗ್ಯನಾಯ್ಕ, ನಾಮ್ಯಾನಾಯ್ಕ, ವಿ. ಅಶೋಕ್, ಸುರೇಶ್ ನಾಯ್ಕ್, ಅನುಸೂಯ ಬಾಯಿ, ಸಂಘದ ಕಾರ್ಯದರ್ಶಿ ಪ್ರಿಯಾಂಕ ಉಪಸ್ಥಿತರಿದ್ದರು.

## ಪಾಲಿಕೆಯಲ್ಲಿ ನಿವೃತ್ತಿ - ಬೀಳ್ಕೊಡುಗೆ



ದಾವಣಗೆರೆ, ಫೆ. 2- ಮಹಾನಗರ ಪಾಲಿಕೆಯಲ್ಲಿ ಕಚೇರಿ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀಮತಿ ಸುಜಾತ ಅಣ್ಣಿಗೇರಿ ಹಾಗೂ ಪೌರ ಕಾರ್ಮಿಕರಾದ ಶ್ರೀಮತಿ ರೇಣುಕಮ್ಮ, ಶ್ರೀಮತಿ ದಂಡ್ಯಮ್ಮ ಅವರುಗಳು ನಿನ್ನೆ ವಯೋನಿವೃತ್ತಿ ಹೊಂದಿದ್ದು, ಮಹಾನಗರ ಪಾಲಿಕೆ ನೌಕರರ ಸಂಘದ ವತಿಯಿಂದ ಸನ್ಮಾನಿಸಿ, ಬೀಳ್ಕೊಡಲಾಯಿತು.

ಸಂಘದ ಅಧ್ಯಕ್ಷ ಕೆ.ಎಸ್. ಗೋವಿಂದರಾಜು, ವಲಯ ಆಯುಕ್ತರಾದ ಶ್ರೀಮತಿ ನಾಗರತ್ನಮ್ಮ, ವ್ಯವಸ್ಥಾಪಕರಾದ ಟಿ.ಸಿ. ಬಸವರಾಜಯ್ಯ, ಸುರೇಶ್ ಪಾಟೀಲ್, ಶ್ರೀಮತಿ ಅಂಜಿನಮ್ಮ, ಬಿ. ನಾಗರಾಜ್, ಶ್ರೀಮತಿ ಮಂಜುಳಾದೇವಿ ಉಪಸ್ಥಿತರಿದ್ದರು.

## ಹೊನ್ನಾಳಿಯಲ್ಲಿ ಇಂದು ದಿಕ್ಸೂಚಿ ಕಾರ್ಯಾಗಾರ

ಸ್ವಾಭಿಮಾನಿ ಬಳಗ ಹಾಗೂ ಶ್ರೀ ಚನ್ನಪ್ಪಸ್ವಾಮಿ ಜನಕಲ್ಯಾಣ ಟ್ರಸ್ಟ್ ವತಿಯಿಂದ ಇಂದು ಬೆಳಿಗ್ಗೆ 10 ಗಂಟೆಗೆ ಹಿರೇಕಲ್ಮಠದ ಸಭಾಂಗಣದಲ್ಲಿ ಪಿಯುಸಿ, ಪದವಿ, ಐಟಿಐ ಹಾಗೂ ಪಾಲಿಟೆಕ್ನಿಕ್ ವಿದ್ಯಾರ್ಥಿಗಳಿಗೆ 'ದಿಕ್ಸೂಚಿ ಕಾರ್ಯಾಗಾರ' ಏರ್ಪಡಿಸಲಾಗಿದೆ. ಶ್ರೀ ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಇನ್‌ಸೈಟ್ಸ್ ಐಎಎಸ್ ಸಂಸ್ಥೆಯ ಸಂಸ್ಥಾಪಕರೂ, ನಿರ್ದೇಶಕರಾದ ಜಿ.ಬಿ.ವಿನಯ್ ಕುಮಾರ್ ವಿದ್ಯಾರ್ಥಿಗಳ ಕುರಿತು ಮಾತನಾಡಲಿದ್ದಾರೆ.

## ಕುಂಭಮೇಳ

ಕೋಟ್ಯಾನುಕೋಟಿ ಜನ ಸಾಗರವು
ಕುಂಭಮೇಳದಲ್ಲಿ ತುಂಬಿದಾಗರವು
ಜಾತಿ ಮತ ಪಂಥ ಭೇದ ವರ್ಣ ಅಲ್ಲಿಲ್ಲ
ತೀರ್ಥ ಸ್ನಾನವೇ ಪರಮ ಪವಿತ್ರ ಅವರಿಗೆಲ್ಲಾ

ವಿಶ್ವದೆಲ್ಲೆಡೆಯಿಂದ ಭಕ್ತರಾಗಮನವು
ಭಾವುಕ ಭಕ್ತರ ಮಹಾ ಸಮಾಗಮವು
ಪಾಪ ಪುಣ್ಯ ಮನದಲ್ಲಡಗಿದ ಭಾವನೆಯಲ್ಲಿ
ಕರ್ಮ ಧರ್ಮದ ಅನಾವರಣವು ಮೇಳದಲ್ಲಿ

ಪ್ರಯಾಸದ ಪ್ರಯಾಗ ಯಾತ್ರೆ ಬದುಕಲ್ಲಿ
ತರುವುದು ಹರ್ಷದ ಹೊಳೆಯು ಮನದಲ್ಲಿ
ಧರ್ಮೋದ್ಧಾರಕ್ಕೆ ಕರಕರವು ತಟ್ಟಿತು ತಾಳ
ಬಾಳನ್ನು ಕಟ್ಟಿ ಕೊಟ್ಟು ಹಸನು ಮಾಡಿತು ಮೇಳ

ಸಾಧು ಸಂತರು ಅವಧೂತರ ದೈವಿಕತೆಯ ಶಕ್ತಿ
ಧರ್ಮ ರಕ್ಷಣೆಯ ಪುನರುತ್ಥಾನದಲಿ ತಂದ ಭಕ್ತಿ
ಜಾಗೃತಿಯ ಅಲೆಯನೆಬ್ಬಿಸಿದ ಕುಂಭಮೇಳವು
ಜನಮಾನಸದಲ್ಲೆಂದು ಮರೆಯಲಾಗದ ಕ್ಷಣವು

ಹೂ ಮನದಲ್ಲದು ಭಾವನೆಯಲ್ಲರಳಿ ಬೆಳಗಿತು
ಉದರದುರಿಯವರ ತನುವಿಗೆ ಕಿಡಿ ಹೊತ್ತಿತು
ಆಚಾರವಿಲ್ಲದ ನಾಲಿಗೆ ಸದಾ ಅಶುದ್ಧಿಯಲ್ಲಿ
ಬೊಗಳಿ ಬಾಯಾರಿದ ನಾಲಿಗೆ ಬಾಯಿಯಲ್ಲಿ!

ಕುಂಭಮೇಳದ ವೈಭವ ಭಾರತ ದೇಶದಲ್ಲಿ
ಧರ್ಮೋ ರಕ್ಷಿತ ರಕ್ಷಿತಃ ಎಲ್ಲರ ತನು ಮನದಲ್ಲಿ.

- ವೀಣಾ ಕೃಷ್ಣಮೂರ್ತಿ, ದಾವಣಗೆರೆ

## ಕಲಾಕುಂಚ ಮಹಿಳಾ ವಿಭಾಗದ ಅಧ್ಯಕ್ಷರಾಗಿ ಹೇಮಾ ಪೂಜಾರಿ ಪುನರಾಯ್ಕೆ



ದಾವಣಗೆರೆ, ಫೆ. 2- ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಅಂಗ ಸಂಸ್ಥೆ ಕಲಾಕುಂಚ ಮಹಿಳಾ ವಿಭಾಗದ ಸರ್ವ ಸದಸ್ಯರ ಮಹಾಸಭೆಯಲ್ಲಿ ಹೇಮಾ ಶಾಂತಪ್ಪ ಪೂಜಾರಿ ಸರ್ವಾನುಮತದಿಂದ ಪುನರಾಯ್ಕೆಯಾಗಿದ್ದಾರೆ ಎಂದು ಕಲಾಕುಂಚ ಮಹಿಳಾ ವಿಭಾಗದ ಸಂಸ್ಥಾಪಕರಾದ ಜ್ಯೋತಿ ಗಣೇಶ್‌ಶೆಣೈ ತಿಳಿಸಿದ್ದಾರೆ.

ಕಲಾಕುಂಚ ಕಚೇರಿ ಸಭಾಂಗಣದಲ್ಲಿ ನಡೆದ ಈ ಸಭೆಯಲ್ಲಿ ಈ ಆಯ್ಕೆ ನಡೆಯಿತು.

ಕಲಾಕುಂಚ ಮಹಿಳಾ ವಿಭಾಗದ ಗೌರವ ಅಧ್ಯಕ್ಷರಾಗಿ ವಸಂತಿ ಮಂಜುನಾಥ್, ಪ್ರಧಾನ ಕಾರ್ಯದರ್ಶಿಯಾಗಿ ಲಲಿತಾ ಕಲ್ಲೇಶ್, ಖಜಾಂಚಿಯಾಗಿ ಟಿ. ಮಾಲಾ ಶಿವಣ್ಣ, ಉಪಾಧ್ಯಕ್ಷರಾಗಿ ಗಿರಿಜಮ್ಮ ನಾಗರಾಜಪ್ಪ, ಸಂಘಟನಾ ಕಾರ್ಯದರ್ಶಿಯಾಗಿ ಕುಸುಮಾ ಲೋಕೇಶ್, ಸಂಚಾಲಕರಾಗಿ ಸುಮಾ ಏಕಾಂತಪ್ಪ, ಸಮಿತಿ ಸದಸ್ಯರಾಗಿ ಶೈಲಾ ವಿಜಯ್‌ಕುಮಾರ್, ಪ್ರೇಮಾ ಮಹೇಶ್ವರಯ್ಯ, ಶಿಲ್ಪಾ ಉಮೇಶ್ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.

ಕಲಾಕುಂಚ ಸಂಸ್ಥಾಪಕರಾದ ಸಾಲಿಗ್ರಾಮ ಗಣೇಶ್ ಶೆಣೈ, ಜಿ.ಬಿ.ಲೋಕೇಶ್, ಎಸ್.ಮಹೇಶ್ವರಯ್ಯ, ವಿಜಯ್‌ಕುಮಾರ್ ಶೆಟ್ಟಿ ಮುಂತಾದವರು ಉಪಸ್ಥಿತರಿದ್ದರು. ಕಲಾಕುಂಚದ ಪ್ರಧಾನ ಕಾರ್ಯದರ್ಶಿ ಕೆ.ಸಿ. ಉಮೇಶ್ ಸ್ವಾಗತಿಸಿದರು.

## ಹೊನ್ನಾಳಿ ಈಶ್ವರೀಯ ವಿದ್ಯಾಲಯದಿಂದ ಇಂದು ಸಾಮೂಹಿಕ ಧ್ಯಾನ-ಉಪನ್ಯಾಸ

ಈಶ್ವರೀಯ ವಿಶ್ವವಿದ್ಯಾಲಯದಿಂದ ಸಾಮೂಹಿಕ ಧ್ಯಾನ ಉಪನ್ಯಾಸ ಕಾರ್ಯಕ್ರಮವು ಹಿರೇಕಲ್ಮಠದ ಮುಂಭಾಗದಲ್ಲಿ ಇಂದಿನಿಂದ ಮೂರು ದಿನಗಳ ಕಾಲ ಪ್ರತಿದಿನ ಸಂಜೆ 5 ಗಂಟೆಗೆ ನಡೆಯಲಿದೆ ಎಂದು ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ಬ್ರಹ್ಮಾಕುಮಾರಿ ಜ್ಯೋತಿ ತಿಳಿಸಿದ್ದಾರೆ.

ಇಂದು ಸಂಜೆ 5 ಗಂಟೆಗೆ ಹಿರೇಕಲ್ಮಠದ ಚನ್ನಮಲ್ಲಿಕಾರ್ಜುನ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಅಧ್ಯಕ್ಷತೆಯನ್ನು ದಾವಣಗೆರೆ ಈಶ್ವರೀಯ ವಿದ್ಯಾಲಯದ ಸಂಚಾಲಕರಾದ ಲೀಲಾ ಅಕ್ಕನವರು ವಹಿಸಲಿದ್ದಾರೆ. ಶಾಸಕ ಶಾಂತನಗೌಡ ಉದ್ಘಾಟಿಸಲಿದ್ದಾರೆ. ಕೂಡ್ಲಿಗಿ ಚಂದ್ರಕಲಾ ಅವರಿಂದ ಉಪನ್ಯಾಸ ನಡೆಯಲಿದೆ ಹಾಗೂ ಮುಖ್ಯ ಅಥಿತಿಗಳು ಭಾಗವಹಿಸಲಿರುವರು.

ನಾಳೆ ಮಂಗಳವಾರ ಕಾರ್ಯಕ್ರಮವನ್ನು ಪುರಸಭೆ ಮುಖ್ಯಾಧಿಕಾರಿ ಲೀಲಾವತಿ ಉದ್ಘಾಟಿಸಲಿದ್ದು, ಆರ್‌ಸಿಬಿ ಡ್ಯಾನ್ಸ್ ಗ್ರೂಪ್‌ನವರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಹಳಿಯಾಳ ಹೊಂಗಿರಣ ಕಲಾ ತಂಡದಿಂದ ಗೊಂಬೆ ಆಟ ನಡೆಯಲಿದೆ.

ನಾಡಿದ್ದು ಬುಧವಾರ ಮಹಾಶಿವರಾತ್ರಿ ಸಮಾರೋಪ ಸಮಾರಂಭದಲ್ಲಿ ಹೊನ್ನಾಳಿ ಶ್ರೀಗಳ ಅಧ್ಯಕ್ಷತೆಯಲ್ಲಿ ಮಾಜಿ ಸಚಿವ ರೇಣುಕಾಚಾರ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಅಭಿನೇತ್ರಿ ಡ್ಯಾನ್ಸ್ ಮ್ಯೂಸಿಕ್ ಅಕಾಡೆಮಿಯಿಂದ ನೃತ್ಯ ರೂಪಕ ನಡೆಯಲಿದೆ. ಶಿಬಿರವು ಫೆ.6ರಿಂದ 12ರ ವರೆಗೆ ಪ್ರತಿ ದಿನ 1 ಗಂಟೆ ನಡೆಯಲಿದೆ. ವಿಶೇಷ ಆಕರ್ಷಣೆಯಾಗಿ 11 ಅಡಿ ಶಿವಲಿಂಗ, ಅಭಿಷೇಕ ಲಿಂಗ, 20 ಜನ ಶ್ವೇತ ವಸ್ತ್ರದಾರಿ ಬ್ರಹ್ಮಾಕುಮಾರಿಯವರಿಂದ ಸಾಮೂಹಿಕ ರಾಜಯೋಗ ಅಭ್ಯಾಸ ನಡೆಯಲಿದೆ ಎಂದು ತಿಳಿಸಿದೆ.

## ಫೆ. 7 ರಿಂದ 17 ರವರೆಗೆ ಕೊಟ್ಟೂರೇಶ್ವರ ಸ್ವಾಮಿ ಪುರಾಣ ಪ್ರವಚನ



ದಾವಣಗೆರೆ, ಫೆ. 2- ನಗರದ ಕೊಟ್ಟೂರು ಶ್ರೀ ಗುರು ಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ವತಿಯಿಂದ ಭಕ್ತರು ಪಾದಯಾತ್ರೆ ಕೈಗೊಳ್ಳುವ ಮುನ್ನ ವಿರಕ್ತಮಠದ ಆವರಣದಲ್ಲಿ ಇದೇ ದಿನಾಂಕ 7 ರಿಂದ 17 ರವರೆಗೆ ಪ್ರತಿ ದಿನ ಸಂಜೆ 6 ರಿಂದ 8.30 ರವರೆಗೆ ಶ್ರೀ ಕೊಟ್ಟೂರು ಗುರು ಬಸವೇಶ್ವರರ ಪುರಾಣ-ಪ್ರವಚನ ಹಮ್ಮಿಕೊಳ್ಳಲಾಗಿದೆ.

ಮರೋಳ ಹಿರೇಮಠದ ಮುದುಕಯ್ಯ ಶಾಸ್ತ್ರಿಗಳು ಪ್ರವಚನ ನಡೆಸಿಕೊಡಲಿದ್ದು, ಭಕ್ತರು ಪ್ರವಚನ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಟ್ರಸ್ಟ್ ಪದಾಧಿಕಾರಿಗಳು ಕೋರಿದ್ದಾರೆ.

**ಮನೆ, ಸೈಟ್ ಕೊಳ್ಳುವುದಕ್ಕೆ, ಮಾರಾಟಕ್ಕೆ**
ನನ್ನದು ಕೇವಲ ಅರ್ಧ ಪರ್ಸೆಂಟ್ ಕಮಿಷನ್ 60 ವರ್ಷ ಒಳಗಿನವರಿಗೆ. 60-75 ವರ್ಷದವರಿಗೆ ಅರ್ಧಕ್ಕಿಂತ ಸ್ವಲ್ಪ ಕಡಿಮೆ. 75 ರ ಮೇಲೆ ಸೈಟ್ ಮಾಲೀಕರಿಗೆ ಫ್ರೀ. ಕಮೀಷನ್ ಇಲ್ಲ. ಕಂಡೀಶನ್ ಅಪ್ಲೈ *
ಕಿರಣ್ ಬೂಸ್ನೂರ್ (ಏಜೆಂಟ್)
94824-63409

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 East, 40x60 East, 40 ಅಡಿ ರೋಡಿಗಿದೆ, Rate - 2800/- 30x40 South, 30x40 West, 30x40 East.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 30x40 ಪಶ್ಚಿಮ, ಹೊಸ ಬನಶಂಕರಿ ಬಡಾವಣೆಯಲ್ಲಿ 30x40 ಪಶ್ಚಿಮ, 40 ಅಡಿ ರಸ್ತೆಗೆ ಹೊಂದಿಕೊಂಡು ಆಂಜನೇಯ ಬಡಾವಣೆಯಲ್ಲಿ 30x50 ಉತ್ತರ, ವಿನಾಯಕ ಬಡಾವಣೆಯಲ್ಲಿ 30x50 ದಕ್ಷಿಣ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆ ಮಾರಾಟಕ್ಕಿದೆ**
ಸರಸ್ವತಿ ಬಡಾವಣೆಯಲ್ಲಿ ನಾಲ್ಕು ಬೆಡ್ ರೂಮ್, ಡುಪ್ಲೆಕ್ಸ್ ಮನೆ, ಮೂರು ಅಟ್ಯಾಚ್ ಬಾತ್ ರೂಮ್, ಒಂದು ಕಾಮನ್ ಬಾತ್ ರೂಮ್, ಫುಲ್ ಇಂಟಿರಿಯರ್, ಪಾರ್ಕಿಂಗ್ ವ್ಯವಸ್ಥೆ ಇರುವ 40x50 ಅಳತೆ ಮನೆ.
ಮಾಲೀಕರು : 94480 62675

**ಮನೆ ಬಾಡಿಗೆಗೆ ಇದೆ**
ಹೊಸ ಕೋರ್ಟ್ ಹಿಂಭಾಗ ಎ ಬ್ಲಾಕ್ 5ನೇ ಕ್ರಾಸ್ ಪಾರ್ಕ್ ಬಳಿ #21, 2ನೇ ಮಹಡಿ ಅಲ್ಲಿ 2 ಮನೆಗಳು ಬಾಡಿಗೆಗೆ ಇವೆ. ವಿಚಾರಿಸಿ
9901247050, 7204022829

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**ಸೈಟ್ ಮಾರಾಟಕ್ಕಿದೆ**
ಶಾಮನೂರು ಶಿವ - ಪಾರ್ವತಿ ಬಡಾವಣೆ, 5ನೇ ಮುಖ್ಯ ರಸ್ತೆಯಲ್ಲಿ ಉತ್ತರಾಭಿಮುಖವಾಗಿರುವ 30x50 ಅಳತೆಯುಳ್ಳ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ :
99868 02097

**ಬೇಕಾಗಿದ್ದಾರೆ**
* ಸೆಕ್ಯೂರಿಟಿ ಆಫೀಸ್‌ಗೆ ಮಹಿಳೆಯರು ಬೇಕಾಗಿದ್ದಾರೆ.
* ಸೆಕ್ಯೂರಿಟಿ ಫೀಲ್ಡ್ ವರ್ಕ್ ಪುರುಷರು ಮತ್ತು ಮಹಿಳೆಯರು,
* ಸೆಕ್ಯೂರಿಟಿ ಕೆಲಸಕ್ಕೆ ಮಹಿಳೆ ಮತ್ತು ಪುರುಷರು ಬೇಕಾಗಿದ್ದಾರೆ.
ಹರಿಹರ - ದಾವಣಗೆರೆ.
63669 31287

**ಸೈಟುಗಳು ಮಾರಾಟಕ್ಕಿವೆ**
ಹೊಸ ಭನಶಂಕರಿ ಲೇಔಟ್‌ನಲ್ಲಿ 40x45 East, 30x57 East, 30x60 East, 40x84 East, 60x60 East.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಪುರುಷ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯವಿದೆ. ಸಂಪರ್ಕಿಸಿ :
98442 94446

**ಬೇಕಾಗಿದ್ದಾರೆ**
ಹರಿಹರದಲ್ಲಿ ಪ್ಲೈವುಡ್ ಮತ್ತು ಹಾರ್ಡ್ ವೇರ್ ಅಂಗಡಿಗೆ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ.
93427 65877

**2 ಬಿಹೆಚ್‌ಕೆ ಮನೆ ಬಾಡಿಗೆಗೆ ಇದೆ**
2ನೇ ಮೇನ್, 4ನೇ ಕ್ರಾಸ್, ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.
94818 40268
82964 69527

**ಬೇಕಾಗಿದ್ದಾರೆ**
ಶಾಮನೂರು ರಸ್ತೆಯಲ್ಲಿ MRP ಪಕ್ಕದಲ್ಲಿ ನಾನ್‌ವೆಜ್ ಹೋಟೆಲ್ ನಡೆಸಿಕೊಂಡು ಹೋಗಲು ಬೇಕಾಗಿದ್ದಾರೆ. ಎಲ್ಲಾ ಸೌಲಭ್ಯವುಳ್ಳದ್ದಾಗಿರುತ್ತದೆ. 40 ಸಾವಿರ ಅಡ್ವಾನ್ಸ್, ತಿಂಗಳಿಗೆ 12 ಸಾವಿರ ಬಾಡಿಗೆ.
ಆಸಕ್ತರು ಸಂಪರ್ಕಿಸಿ.
98441 27137

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
98443 10168

**ಬೇಕಾಗಿದ್ದಾರೆ**
ಯಾವುದೇ ಡಿಗ್ರಿ ಅಥವಾ ಡಿಪ್ಲೋಮಾ ವಿದ್ಯಾರ್ಹತೆಯುಳ್ಳ ಹುಡುಗಿಯರು ಬ್ಯಾಂಕಿಂಗ್ ಪ್ರೋಸೆಸ್ - ಟೆಲಿ ಮಾರ್ಕೆಟಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ.
ಸಂಪರ್ಕಿಸಿ :
98451 82891, 99804 32319

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ರಕ್ತ ದಾನ ಶ್ರೇಷ್ಠ ದಾನ**

**ಗೋಡೌನ್ ಬಾಡಿಗೆಗೆ**
ವಿಆರ್‌ಎಲ್ ಟ್ರಾನ್ಸ್‌ಪೋರ್ಟ್, ಬಂಬೂಬಜಾರ್ ರಸ್ತೆಗೆ ಹತ್ತಿರ ಇರುವ ಚಿಕ್ಕದಾಗಿ ಫ್ಯಾಕ್ಟರಿ ಮಾಡಲು / ಗೋಡೌನ್‌ಗೆ ಯೋಗ್ಯವಾದ 2800 ಚದುರ ಅಡಿಯ ಗೋಡೌನ್ ಬಾಡಿಗೆಗೆ ಇದೆ. ವಿದ್ಯುತ್ ಮತ್ತು ನೀರಿನ ಸೌಕರ್ಯವಿದೆ.
98809 78152

**ಲಿಂಗಾಯತ ವಧು-ವರ**
ವೀರಶೈವ ಲಿಂಗಾಯತ ಡಾಕ್ಟರ್ಸ್, ಇಂಜಿನಿಯರ್ಸ್ (ಸ್ವದೇಶ & ವಿದೇಶ) ಸರ್ಕಾರಿ ನೌಕರಿಯಲ್ಲಿರುವ IPS, IAS ಸ್ವಂತ ಬಿಜಿನೆಸ್ ಹೊಂದಿರುವ ಒಳ್ಳೆಯ ಮನೆತನದ ಸುಂದರ ವಧು-ವರರಿಗಾಗಿ ಸಂಪರ್ಕಿಸಿ :
98807 29108

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
81478 03755
70266 43088

**ಮನೆ ಬಾಡಿಗೆಗೆ ಇದೆ**
ಮಹಾಲಕ್ಷ್ಮೀ ಲೇಔಟ್ ಕುಂದುವಾಡ ಕೆರೆ ಹತ್ತಿರ, ಕಾವೇರಿ ಅಪಾರ್ಟ್ ಮೆಂಟ್ ಹಿಂಭಾಗ, # 3127/96, 2 ಬೆಡ್ ರೂಂ ಅಟ್ಯಾಚ್ ಬಾತ್ ರೂಂ ಮತ್ತು ಇಟಾಲಿಯನ್ ಕಿಚನ್ ಇರುವ ನೆಲ ಮಹಡಿ ಬಾಡಿಗೆ/ ಲೀಜ್‌ಗೆ ಇದೆ.
63603 20105

**ಅಡಿಕೆ ತೋಟ ಮಾರಾಟಕ್ಕಿದೆ**
2 ಎಕರೆ 7 ಗುಂಟೆ ಇರುವ ಅಡಿಕೆ ತೋಟ ಮಾರಾಟಕ್ಕಿದೆ. ಜಗಳೂರು ರೋಡ್, ದಾವಣಗೆರೆಯಿಂದ 10 ಕಿ.ಮೀ ಹತ್ತಿರದಲ್ಲಿದೆ.
74838 15482

**ಸೈಟುಗಳು ಮಾರಾಟಕ್ಕಿವೆ**
ಎರಗುಂಟೆಯ ಹೊಸ ಲೇಔಟ್‌ನಲ್ಲಿ 30x40 ಮತ್ತು 30x45 ಸೈಜ್ ಸೈಟುಗಳು ಮಾರಾಟಕ್ಕಿವೆ.
92414 62457

**AdBlue / DEF**
available with Best Quality & Price for All BS6 Diesel Commercial & Passanger Vehicles
Visit: **Best Lubricants**
Opp. to New Pvt Bus Stand PB Road, Davangere.
73380 33337

**ಬೇಕಾಗಿದ್ದಾರೆ**
ಜವಾನರು (ಮಹಿಳೆ) ಬೇಕಾಗಿದ್ದಾರೆ
ಪಿ.ಎಫ್. ಮತ್ತು ESI ಸೌಲಭ್ಯವಿದೆ. ಆಯ್ಕೆಯಾದ ಅಭ್ಯರ್ಥಿಯ ಒಂದು ಮಗುವಿಗೆ ವಿದ್ಯಾಭ್ಯಾಸ ಸೌಲಭ್ಯವಿರುತ್ತದೆ.
ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆ, ದೇವರಾಜ ಅರಸು ಬಡಾವಣೆ, 'ಸಿ' ಬ್ಲಾಕ್, 6ನೇ ಕ್ರಾಸ್, ಕೊಂಡಜ್ಜಿ ರಸ್ತೆ, ದಾವಣಗೆರೆ.
99640 17729

**ಬಿಲ್ಡಿಂಗ್ ಮಾರಾಟಕ್ಕಿದೆ**
ಚಂದ್ರು ಗಾರ್ಡನ್ ಬಾರ್ & ರೆಸ್ಟೋರೆಂಟ್ ಬಿಲ್ಡಿಂಗ್ ಮಾರಾಟಕ್ಕಿದೆ.
ಬೈಪಾಸ್ ರೋಡ್, ದಾವಣಗೆರೆ.
94483 38709, 94492 02189

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**TO LET**
2 BHK House for Lease
Doggalli Compound, Near LIC Office, K.R. Road, Davangere.
90359 66066

**ನಿತ್ಯಶ್ರೀ ಹರಿ ಜ್ಯುವೆಲ್ಲರಿ**
ಕೇವಲ 4 ರಿಂದ 6% ಮಾತ್ರ ನಿತ್ಯಶ್ರೀ ಹರಿ ಜ್ಯುವೆಲ್ಲರಿಯಲ್ಲಿ ಯಾವುದೇ ಬಂಗಾರದ ಮಾಂಗಲ್ಯ ಚೈನ್‌ಗಳು, ಉಂಗುರ, ಬಳೆ ಕೇವಲ 6% ದೊರೆಯುತ್ತದೆ.
69068 64777

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್ ಫ್ಯಾನ್ಸಿ ಸ್ಟೋರ್, ಬೇಕರಿ ಟೀಸ್ಟಾಲ್ ಫಾಸ್ಟ್ ಫುಡ್ ಹೋಟೆಲ್, ಗ್ಯಾರೇಜ್ ಮೊಬೈಲ್ ಶಾಪ್, ಎಲೆಕ್ಟ್ರಿಕಲ್ ಶಾಪ್ ಚಿಪ್ಸ್ ಶಾಪ್ ಇತ್ಯಾದಿ ಶಾಪ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
96860 22969

**REQUIRED**
Experienced, Accountant having Tally and GST knowledge are required to work in Office.
REDDY ASSOCIATIES
# 82/19,P B Road, Beside Wellness Stores, Opp: Renuka Manidar, Davangere.
99000 22030

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

# ಸ್ಥಳೀಯ ಲೇಖಕರಲ್ಲಿ ನೆಲದ ಗುಣ ದಕ್ಕಿಸಿಕೊಂಡು ಕೃತಿ ಬರೆಯುವ ಶಕ್ತಿಯಿದೆ

## 11ನೇ ತಾಲ್ಲೂಕು ಸಾಹಿತ್ಯ ಸಮ್ಮೇಳನದಲ್ಲಿ ನಡೆದ ಗೋಷ್ಠಿಯಲ್ಲಿ ಡಾ.ಎ.ಬಿ. ರಾಮಚಂದ್ರಪ್ಪ ಅಭಿಮತ

ದಾವಣಗೆರೆ, ಫೆ.1- ಈ ನೆಲದ ಬಹುತ್ವತೆ, ಸೌಹಾರ್ದತೆ ಮತ್ತು ಸಾಮರಸ್ಯವನ್ನು ಅತ್ಯಂತ ಗುಣಾತ್ಮಕವಾಗಿ ದಕ್ಕಿಸಿಕೊಂಡು ಬರೆಯುವ ಶಕ್ತಿಯನ್ನು ಸ್ಥಳೀಯ ಬರಹಗಾರರಲ್ಲಿ ಕಾಣ ಬಹುದು ಎಂದು ಮಾನವ ಬಂಧುತ್ವ ವೇದಿಕೆಯ ಡಾ.ಎ.ಬಿ. ರಾಮಚಂದ್ರಪ್ಪ ತಿಳಿಸಿದರು.



ನಗರದ ಕುವೆಂಪು ಕನ್ನಡ ಭವನದಲ್ಲಿ ಶನಿವಾರ ನಡೆದ 11ನೇ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಧ್ಯಾಹ್ನ ಜರುಗಿದ ಸಾಹಿತ್ಯ-ಚಿಂತನ-ಮಂಥನ ಗೋಷ್ಠಿಯಲ್ಲಿ 'ತಾಲ್ಲೂಕಿನ ಸಾಹಿತ್ಯ ಕ್ಷೇತ್ರದ ಸಾಧಕರು' ಎಂಬ ವಿಷಯದಡಿ ಮಾತನಾಡಿದರು.

ಸಮೃದ್ಧವಾಗಿ ಸಾಹಿತ್ಯದ ಕೃಷಿ ಆಗುವ ನೆಲದಲ್ಲಿ ಸಾಹಿತ್ಯದ ನೆನಪುಗಳನ್ನು ಉಳಿಸಿಕೊಳ್ಳಬೇಕು. ಈ ದೃಷ್ಟಿಕೋನದಲ್ಲಿ 'ಜಿಲ್ಲೆಯ ಸಾಹಿತ್ಯ ಚರಿತ್ರೆ' ರಚಿಸಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಹಲವು ಧರ್ಮ, ಸಂಸ್ಕೃತಿ, ಭಾಷೆ ಹಾಗೂ ಅನೇಕ ಜನಾಂಗ ಇರುವ ದೇಶದಲ್ಲಿ ಬಹುತ್ವವೇ ಸಾಂಸ್ಕೃತಿಕ ಬೇರು ಆಗಿದೆ. ಇವುಗಳಿಗೆ ಜೀವಂತಿಕೆ ನೀಡುವವರೇ ಸ್ಥಳೀಯ ಬರಹಗಾರರು. ಹಾಗಾಗಿ ಸಾಹಿತ್ಯದ ಅಧ್ಯಯನ ಕೆಳಮಟ್ಟದಿಂದ ಮೇಲ್ಮಟ್ಟದ ಕಡೆಗೆ ಅಪ್ರದಕ್ಷಿಣಾಕಾರವಾಗಿ ಇರಬೇಕು ಎಂದು ಸಲಹೆ ನೀಡಿದರು.

ಭೌತಿಕ ಲಾಭ ನೀಡುವ ಪ್ರಭುತ್ವದ ಪರ ನಿಂತು ಬರೆಯುವ ಸಾಹಿತ್ಯ ಒಂದೆಡೆಯಾದರೆ ಅದಕ್ಕೆ ವಿರುದ್ಧವಾಗಿ ಬರೆಯುವ ಸಾಹಿತ್ಯದ ಬಗೆ ಬೇರೆ ಇದ್ದು, ಇಂತಹ 2ನೇ ಹಂತದ ಬರಹಗಾರರ ಸಂಖ್ಯೆ ದಾವಣಗೆರೆ ತಾಲ್ಲೂಕಿನಲ್ಲಿ ಹೆಚ್ಚಾಗಿ ಕಾಣುಸುತ್ತಿಲ್ಲ ಎಂದರು.

ಸಾಹಿತ್ಯದ ಕೃತಿ ಸಾಮಾಜಿಕವಾಗಿ, ಜನ-ಮುಖಿಯಾಗಿ, ಕೃತಿ ಕಟ್ಟಿ ಕೊಡುವ ಮೀಮಾಂಸೆ ಹಾಗೂ ಸಾಮಾಜಿಕ ನ್ಯಾಯದ ಪರವಾಗಿ ಇದೆಯೇ ಎಂಬುದರ ಮೇಲೆ ಕೃತಿಯ ಮೌಲ್ಯ ಅಡಗಿರುತ್ತದೆ. ಈ ಆಲೋಚನೆಯಲ್ಲಿ ಜಿಲ್ಲೆಯ ಸಾಹಿತ್ಯ ವಲಯದಲ್ಲಿನ ಕವಿ, ಸಾಹಿತಿ, ಚಿಂತಕರನ್ನು ಅವಲೋಕಿಸಿದರೆ ಸಾಹಿತ್ಯ ವಿದ್ಯಾರ್ಥಿಗಳ ಗಮನ ಸೆಳೆಯುವ ಬರಹಗಾರರ ಸಂಖ್ಯೆ ಕಡಿಮೆ ಇದೆ ಎಂದರು.

ಸಾಹಿತಿ ಡಾ.ಪಿ.ಎಂ. ಅನುರಾಧ ಅವರು 'ಮಕ್ಕಳು ಮತ್ತು ಯುವಕರು ಹಾಗೂ ಮಹಿಳೆಯರ ಮುಂದಿರುವ ಸವಾಲುಗಳು' ಎಂಬ ವಿಷಯದಡಿ ಮಾತನಾಡಿ, ಪಾಲಕರು ತಮ್ಮ ಕನಸುಗಳ ಗುರಿಯನ್ನು ಮಕ್ಕಳಿಂದ ಈಡೇರಿಸಿಕೊಳ್ಳಲು ಅವರ ಮೇಲೆ ಹೆಚ್ಚಿನ ಒತ್ತಡ ಹೇರುವುದನ್ನು ಬಿಡಬೇಕು ಎಂದು ಹೇಳಿದರು.

ಮಕ್ಕಳ ಆಸಕ್ತಿಯನ್ನು ಅರಿತು ಅವರನ್ನು ಪ್ರೋತ್ಸಾಹಿಸಬೇಕು. ಪಾಲಕರು ಹಾಗೂ ಶಿಕ್ಷಕರು ಮಗುವಿನ ಸರ್ವಾಂಗೀಣ ಅಭಿವೃದ್ಧಿಗೆ ಪಠ್ಯ ಹಾಗೂ ಪಠ್ಯೇತರ ಶಿಕ್ಷಣ ನೀಡಬೇಕು ಎಂದು ಕಿವಿಮಾತು ಹೇಳಿದರು.

ಯುವ ಸಮೂಹವು ದುಶ್ಚಟಗಳಿಗೆ ದಾಸರಾಗುವ ಜತೆಗೆ ಸಂಸ್ಕಾರ ಹೀನರಾಗುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದ ಅವರು, ಮಾನವೀಯ ಮೌಲ್ಯಗಳನ್ನು ರೂಢಿಸಿಕೊಂಡು ಸಮಾಜದಲ್ಲಿ ಉತ್ತಮರಾಗಿ ಬದುಕುವಂತೆ ಸಲಹೆ ನೀಡಿದರು.

ಸಹಾಯಕ ಪ್ರಾಧ್ಯಾಪಕ ವೆಂಕಪ್ಪನವರ ಬಸವರಾಜ್ 'ಕನ್ನಡ ಕಟ್ಟುವಲ್ಲಿ ತಂತ್ರಜ್ಞಾನದ ಪಾತ್ರ' ಎಂಬ ವಿಷಯದಡಿ ಮಾತನಾಡಿ, ಕನ್ನಡ ಭಾಷೆಯಲ್ಲಿ ವಿಜ್ಞಾನ ಓದಿದರೇ ತಂತ್ರಜ್ಞಾನ ಕ್ಷೇತ್ರದಲ್ಲಿ ಹೆಚ್ಚಿನ ಪರಿಣಿತಿ ಸಾಧಿಸಬಹುದು. ಆದರೆ ತಂತ್ರಜ್ಞಾನಕ್ಕೆ ಸಂಬಂಧಿಸಿದ ಪಠ್ಯಗಳು ಕನ್ನಡ ಭಾಷೆಯಲ್ಲಿ ವಿರಳ ಎಂದು ತಿಳಿಸಿದರು.

ಕನ್ನಡದಲ್ಲಿ ತಂತ್ರಜ್ಞಾನದ ಪಾರಿಭಾಷಿಕ ಪದಗಳ ಕೊರತೆ ಇದೆ. ಸರ್ಕಾರ ಹಾಗೂ ಸಾಹಿತಿಗಳು ಕನ್ನಡಕ್ಕೆ ತಂತ್ರಜ್ಞಾನದ ಪದಕೋಶ ನೀಡಬೇಕು ಎಂದು ಮನವಿ ಮಾಡಿದರು.

ಗೋಷ್ಠಿಯಲ್ಲಿ ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ, ತಾಲ್ಲೂಕು ಅಧ್ಯಕ್ಷೆ ಸುಮತಿ ಜಯ್ಯಪ್ಪ, ಹಿರಿಯ ಸಾಹಿತಿ ಡಾ. ಶಶಿಕಲಾ ಕೃಷ್ಣಮೂರ್ತಿ, ಎಲ್.ಜಿ. ಮಧುಕುಮಾರ್, ಪಾಲಾಕ್ಷಪ್ಪ ಹೆಚ್.ಕೆ. ಗೋಪನಾಳ್ ಹಾಗೂ ಇತರರು ಇದ್ದರು.



# ಕಾಯಕ ಯೋಗಿ, ಪರಿಶುದ್ಧ ನಡೆಯ ವಚನಕಾರ ಮಡಿವಾಳ ಮಾಚಿದೇವ

**ಶರಣ ಮಡಿವಾಳ ಮಾಚಿದೇವ ಜಯಂತಿಯಲ್ಲಿ ಶಾಸಕ ಬಸವಂತಪ್ಪ**

ದಾವಣಗೆರೆ, ಫೆ.1-ಬಟ್ಟೆ ಸ್ವಚ್ಛಗೊಳಿಸುವ ಕಾಯಕವಲ್ಲದೇ ಸಮಾಜದ ಸ್ವಚ್ಛತೆಯನ್ನು ಕೈಗೊಂಡ ಪ್ರಮುಖ ವಚನಕಾರರಲ್ಲಿ ಮಡಿವಾಳ ಮಾಚಿದೇವರ ಕಾಯಕ ಸ್ಮರಣೀಯವಾಗಿದೆ ಎಂದು ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಶನಿವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಶರಣ ಮಡಿವಾಳ ಮಾಚಿದೇವ ಜಯಂತಿಯಲ್ಲಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಅನುಭವ ಮಂಟಪದಲ್ಲಿ ಮಾಚಿದೇವರ ಘರ್ಜನೆಯು ತುಂಬಾ ಶಕ್ತಿಯುತವಾಗಿತ್ತು. ಮೇರು ವಚನಕಾರರಲ್ಲಿ ಮಾಚಿದೇವರು ಸಹ ತಮ್ಮದೇ ಛಾಪು ಮೂಡಿಸಿದ್ದಾರೆ. 12 ನೇ ಶತಮಾನದಲ್ಲಿ ಮಹಿಳೆ ಹಾಗೂ ಮಕ್ಕಳ ಸ್ಥಿತಿ ಶೋಚನೀಯವಾಗಿದ್ದು, ಮಹಿಳೆಯರು, ಅಸಹಾಯಕರು ಮತ್ತು ಅಶಕ್ತರಾಗಿದ್ದರು. ಇಂತಹ ಕಾಲದಲ್ಲಿ ಸಮಾನತೆ ಸಾರುವ ವಚನಗಳು ತುಂಬಾ ಪ್ರಭಾವ ಬೀರಿದ್ದವು ಎಂದರು.

ಮಡಿವಾಳ ಮಾಚಿದೇವರು ಕಲ್ಯಾಣ ಕ್ರಾಂತಿಯ ಮುಂಚೂಣಿಯ ಶರಣರಾಗಿ, ಅನೇಕ ವಚನಗಳ ಮೂಲಕ ಸಮಾಜದಲ್ಲಿ ಬೇರೂರಿದ್ದ ಜಾತಿ ವ್ಯವಸ್ಥೆಯನ್ನು ಹೋಗಲಾಡಿಸಲು ಶ್ರಮಿಸಿದವರು. ಮಡಿವಾಳ ಮಾಚಿದೇವ ಸಮಾಜ ಇಂದಿಗೂ ಸಾಕಷ್ಟು ಹಿಂದುಳಿದಿದ್ದು ಇವರನ್ನು ಪರಿಶಿಷ್ಟ ಜಾತಿಗೆ ಸೇರ್ಪಡೆಗೊಳಿಸುವಂತೆ ಸರ್ಕಾರಕ್ಕೆ ಒತ್ತಾಯ ಮಾಡಲಾಗುತ್ತದೆ ಎಂದರು.

ಜಿಲ್ಲಾಧಿಕಾರಿ ಗಂಗಾಧರಸ್ವಾಮಿ.ಜಿ.ಎಂ ಮಾತನಾಡಿ, ನಮ್ಮ ಸಂವಿಧಾನದ ಬುನಾದಿ ವಚನಕಾರರು, ನೌಕರಿ ಮತ್ತು ಕಾಯಕಗಳೆರಡು ಪರಸ್ಪರ ಭಿನ್ನವಾಗಿದ್ದು, ನಾವು ಮಾಡುವ ಕೆಲಸದಲ್ಲೇ ದೇವರನ್ನು ಕಂಡಾಗ ಆ ಕೆಲಸ ಕಾಯಕವಾಗುತ್ತದೆ. ಮಹಾತ್ಮರ ಕಾಯಕ ಮತ್ತು ತತ್ವ, ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ನಡೆದಾಗ ನಾವು ಆಚರಿಸುವ ಜಯಂತಿಗಳು ಅರ್ಥಪೂರ್ಣವಾಗುತ್ತವೆ ಎಂದರು.

ಶರಣರ ಬದುಕನ್ನು ಅರಿತು, ನಮ್ಮನ್ನು ನಾವು ಒಂದು ಜಾತಿಗೆ ಸೀಮಿತಗೊಳಿಸಿಕೊಳ್ಳದೆ ನಾವೆಲ್ಲರೂ ಒಂದೇ ಎಂಬ ಮನೋಭಾವ ಮೂಡಿಸಿಕೊಳ್ಳಬೇಕು ಎಂದರು.

ಪಾಲಿಕೆ ಮೇಯರ್ ಕೆ. ಚಮನ್ ಸಾಬ್, ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಪಾಲಿಕೆ ಸದಸ್ಯ ಮಂಜುನಾಥ, ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕಿ ರೇಷ್ಮಾ ಕೌಸರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಮಡಿವಾಳ ಸಮಾಜದ ಅಧ್ಯಕ್ಷ ಆವರಗೆರೆ ಉಮೇಶ್, ನಾಗೇಂದ್ರಪ್ಪ, ಮುಖಂಡರಾದ ಓಂಕಾರಪ್ಪ ಹಾಗೂ ಇತರರು ಉಪಸ್ಥಿತರಿದ್ದರು.

# ಮೈಕ್ರೋ ಫೈನಾನ್ಸ್ ಕಿರುಕುಳ ನಿಯಂತ್ರಿಸಲು ಸರ್ಕಾರ ಕಠಿಣ ಕಾನೂನು ರೂಪಿಸುವಂತೆ ಆಗ್ರಹ

ಜಗಳೂರು, ಫೆ.2- ತಾಲ್ಲೂಕಿನಾದ್ಯಂತ ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಗ್ರಾಹಕರಿಗೆ ನೀಡುತ್ತಿರುವ ಕಿರುಕುಳ ತಪ್ಪಿಸಬೇಕೆಂದು ಆಗ್ರಹಿಸಿ ರಾಷ್ಟ್ರೀಯ ಮಾನವ ಹಕ್ಕುಗಳು ಮತ್ತು ಭ್ರಷ್ಟಾಚಾರ ನಿಯಂತ್ರಣ ಮಂಡಳಿ ಸಂಸ್ಥೆ ವತಿಯಿಂದ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಲಾಯಿತು.



ಈಗಾಗಲೇ ತಾಲ್ಲೂಕಿನಲ್ಲಿ ಬಹಳಷ್ಟು ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಸಾಲ ನೀಡಿದ್ದು, ಸಾಲ ವಸೂಲಾತಿಗಾಗಿ ಆರ್.ಬಿ.ಐ ನಿಯಮಾವಳಿಗಳನ್ನು ಗಾಳಿಗೆ ತೂರಿ ಜನರಿಗೆ ಕಿರುಕುಳ ನೀಡುವ ಜತೆಗೆ ದೌರ್ಜನ್ಯ ನಡೆಸುತ್ತಿರುವ ಬಗ್ಗೆ ಹಲವೆಡೆ ವರದಿಯಾಗಿದೆ.

ಮೈಕ್ರೋ ಸಂಸ್ಥೆಗಳ ಕಿರುಕುಳದಿಂದ ಕೆಲವರು ಮನೆ ಬಿಟ್ಟು ತಲೆಮರೆಸಿಕೊಂಡು ಹೋಗಿರುತ್ತಾರೆ. ಇನ್ನೂ ಕೆಲವರು ಜಮೀನು ಮತ್ತು ಮನೆಗಳನ್ನು ಮಾರಾಟ ಮಾಡಿ ಸಾಲ ಕಟ್ಟಿರುತ್ತಾರೆ. ಸರ್ಕಾರ ಕೂಡಲೇ ಸುಗ್ರೀವಾಜ್ಞೆ ತಂದು ಕಾನೂನನ್ನು ಸೂಕ್ತವಾಗಿ ಜಾರಿಗೊಳಿಸಿ ನೊಂದ ಮಹಿಳೆಯರು ಮತ್ತು ಸಾಲ ಪಡೆದ ಗ್ರಾಹಕರಿಗೆ ಆತ್ಮಸ್ಥೈರ್ಯ ತುಂಬಬೇಕು ಮತ್ತು ಮೈಕ್ರೋ ಫೈನಾನ್ಸ್ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಸಂಸ್ಥೆಯ ಅಧ್ಯಕ್ಷ ಜಿ.ಟಿ ತಿಪ್ಪೇಸ್ವಾಮಿ, ಮಹಿಳಾ ಅಧ್ಯಕ್ಷೆ ಲೋಕಮ್ಮ, ವಿಶಾಲಾಕ್ಷಿ, ಲಕ್ಷ್ಮೀಬಾಯಿ, ಸಿದ್ದೇಶ್, ಎಂ.ಡಿ ಅಬ್ದುಲ್ ರಕೀಬ್ ಇತರರಿದ್ದರು.

# ಜನರಿಂದ ಜನರಿಗಾಗಿ ಬಜೆಟ್

(1ನೇ ಪುಟದಿಂದ) ಹಾಗೂ ಪಾಲಿಸಲು ಸುಲಭವಾಗಿದೆ ಮತ್ತು ಬಳಕೆದಾರ ಸ್ನೇಹಿಯಾಗಿ ರಲಿದೆ ಎಂದು ಸೀತಾರಾಮನ್ ಹೇಳಿದರು.

ಕಳೆದ ಹಲವಾರು ವರ್ಷಗಳಿಂದ ಆದಾಯ ತೆರಿಗೆ ದರಗಳಲ್ಲಿ ಬದಲಾವಣೆ ಮಾಡಲಾಗುತ್ತಿದೆ. ಈಗ ತೆರಿಗೆದಾರರ ಸ್ನೇಹಿ ಆದ ಹೊಸ ಪದ್ದತಿ ರೂಪಿಸಲಾಗುವುದು ಎಂದವರು ತಿಳಿಸಿದ್ದಾರೆ.

ತಮ್ಮ ಸರ್ಕಾರ ಬಡವರು ಹಾಗೂ ದಮನಿತರ ಒಳಗೊಳ್ಳುವಿಕೆಗಾಗಿ ಕೆಲಸ ಮಾಡುತ್ತಿದೆ. ಆದರೆ ಪ್ರಾಮಾಣಿಕ ಹಾಗೂ ಹೆಮ್ಮೆಯ ತೆರಿಗೆದಾರರಾದ ನಮಗೆ ಏನು ಮಾಡಲಾಗುತ್ತಿದೆ? ಎಂದು ಮಧ್ಯಮ ವರ್ಗದವರು ಪ್ರಶ್ನಿಸುತ್ತಿದ್ದರು. ಈ ಬಗ್ಗೆ ನಾನು ಪ್ರಧಾನಮಂತ್ರಿಯವರ ಜೊತೆ ಚರ್ಚಿಸಿದ್ದೆ. ಅದರಂತೆ ಈ ಬಾರಿ ತೆರಿಗೆ ಕಡಿತ ಮಾಡಲಾಗಿದೆ ಎಂದು ಸೀತಾರಾಮನ್ ವಿವರಿಸಿದ್ದಾರೆ.

ಬಂಡವಾಳ ವೆಚ್ಚವನ್ನು 11.21 ಲಕ್ಷ ಕೋಟಿ ರೂ.ಗಳಿಗೆ ಸೀಮಿತಗೊಳಿಸಿರುವುದನ್ನು ಸಮರ್ಥಿಸಿಕೊಂಡಿರುವ ಸೀತಾರಾಮನ್, ಎಷ್ಟು ಪ್ರಮಾಣದ ಹಣ ವೆಚ್ಚ ಮಾಡುತ್ತಿದ್ದೇವೆ ಎಂಬುದಷ್ಟೇ ಅಲ್ಲದೆ ಗುಣಮಟ್ಟದಲ್ಲಿ ವೆಚ್ಚ ಮಾಡುವುದು ಸಹ ಮುಖ್ಯವಾಗಿದೆ ಎಂದಿದ್ದಾರೆ.

## ವ್ಯಾಸಂಗ ವೇತನಕ್ಕೆ ಅರ್ಜಿ : ಅವಧಿ ವಿಸ್ತರಣೆ

ದಾವಣಗೆರೆ, ಫೆ. 2 - ಪ್ರಥಮ ವರ್ಷದಲ್ಲಿ ಪೂರ್ಣಾವಧಿ ಪಿಹೆಚ್‌ಡಿ ಅಧ್ಯಯನ ದಲ್ಲಿ ತೊಡಗಿರುವ ಹಿಂದುಳಿದ ವರ್ಗಗಳ ಹೊಸ ವಿದ್ಯಾರ್ಥಿಗಳಿಗೆ ಮಾಸಿಕ ವ್ಯಾಸಂಗ ವೇತನ, ಫೆಲೋಶಿಪ್ ನೀಡಲು ಅರ್ಹ ವಿದ್ಯಾರ್ಥಿಗಳಿಂದ ಆಫ್ ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ಫೆ.10 ರವರೆಗೆ ವಿಸ್ತರಿಸಲಾಗಿದೆ ಎಂದು ಬಿಸಿಎಂ ಇಲಾಖೆ ಅಧಿಕಾರಿ ಗಾಯತ್ರಿ ತಿಳಿಸಿದ್ದಾರೆ.

# ನಿರೀಕ್ಷೆ ಮೀರಿದ ಅಭೂತ ಪೂರ್ವ ಬಜೆಟ್



ದಾವಣಗೆರೆ, ಫೆ.2- ಕೇಂದ್ರ ವಿತ್ತ ಸಚಿವೆ ನಿರ್ಮಲ ಸೀತಾರಾಮನ್ ಅವರು ರೈತರು, ಮಧ್ಯಮ ವರ್ಗ, ಸಣ್ಣ ಉದ್ಯಮ, ಮೆಡಿಕಲ್ ಹೀಗೆ ಪ್ರತಿ ಕ್ಷೇತ್ರಕ್ಕೂ ಅನನ್ಯ ಕೊಡುಗೆ ನೀಡುವ ಮೂಲಕ ಅಭೂತಪೂರ್ವ ಬಜೆಟ್ ಮಂಡಿಸಿದ್ದಾರೆ ಎಂದು ನೈರುತ್ಯ ರೈಲ್ವೆ ವಲಯ ಪ್ರಯಾಣಿಕರ ಸಂಘದ ಕಾರ್ಯದರ್ಶಿ ರೋಹಿತ್ ಎಸ್. ಜೈನ್ ಶ್ಲಾಘಿಸಿದ್ದಾರೆ. ರೈಲ್ವೆ ಕಾರಿಡಾರ್ ನಿರ್ಮಾಣ, ಗೂಡ್ಸ್ ರೈಲ್ವೆಗಳಿಗೆ ಪ್ರತ್ಯೇಕ ಕಾರಿಡಾರ್, ರೈಲ್ವೆ ಬೋಗಿಗಳ ಉನ್ನತೀಕರಣ, ಹೊಸ ಮಾರ್ಗಕ್ಕೆ ಅನುದಾನ, ಮೊದಲು ಘೋಷಣೆ ಮಾಡಿದ ಹಳೆ ಮಾರ್ಗಕ್ಕೆ ಹೆಚ್ಚಿನ ಅನುದಾನ ನೀಡಿದ್ದು, ರೈಲು ಮಾರ್ಗ ವಿದ್ಯುದೀಕರಣಕ್ಕೆ ಒತ್ತು ನೀಡಿರುವುದು ಒಳ್ಳೆಯ ಬೆಳವಣಿಗೆ. ಆದ್ದರಿಂದ ಇದೊಂದು ಉತ್ತಮ ಬಜೆಟ್ ಆಗಿದೆ ಎಂದು ತಿಳಿಸಿದ್ದಾರೆ.

# ನಗರದಲ್ಲಿ ಸ್ವಚ್ಛತಾ ಆಂದೋಲನ



ದಾವಣಗೆರೆ, ಫೆ. 2 - ಮಹಾನಗರ ಪಾಲಿಕೆ ಹಾಗೂ ಚಿಗಟೇರಿ ಜಿಲ್ಲಾ ಆಸ್ಪತ್ರೆ ವತಿಯಿಂದ ಆಸ್ಪತ್ರೆಯ ಆವರಣದಲ್ಲಿ ಸ್ವಚ್ಛತಾ ಆಂದೋಲನವನ್ನು ಕೈಗೊಂಡು ಆಸ್ಪತ್ರೆ ಆವರಣವನ್ನು ಸ್ವಚ್ಛಗೊಳಿಸಲಾಯಿತು. ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಸದಸ್ಯ ಗಡಿಗುಡಾಳು ಮಂಜುನಾಥ್, ಆರೋಗ್ಯಸ್ಥಾಯಿ ಸಮಿತಿ ಸದಸ್ಯರು, ಮಹಾನಗರ ಪಾಲಿಕೆ, ದಾವಣಗೆರೆ ಇವರು ನೇತೃತ್ವ ವಹಿಸಿದ್ದು. ಈ ಸಂದರ್ಭದಲ್ಲಿ ಆಸ್ಪತ್ರೆಯ ಅಧೀಕ್ಷಕ ಎಂ.ಬಿ. ನಾಗೇಂದ್ರಪ್ಪ ಮತ್ತು ಇತರರು ಭಾಗವಹಿಸಿದ್ದರು.

# ತನಗಾಗುವ ತನ್ನ ಯತಾರ್ಥದ ಅರಿವೇ ಅಧ್ಯಾತ್ಮ

**ಅನ್ನಪೂರ್ಣೇಶ್ವರಿ ದೇವಸ್ಥಾನದ ವಾರ್ಷಿಕೋತ್ಸವದಲ್ಲಿ ಎಚ್.ಬಿ. ಮಂಜುನಾಥ್**

ದಾವಣಗೆರೆ, ಫೆ. 2 - ತನ್ನನ್ನು ತಾನು ಯತಾರ್ಥವಾಗಿ ಅರ್ಥಮಾಡಿಕೊಳ್ಳುವ ಅರಿವೇ ಅಧ್ಯಾತ್ಮವಾಗಿದ್ದು, ಇದು ಎಷ್ಟು ಕಷ್ಟವೆಂದು ಭಾವಿಸುತ್ತಾರೋ ಅಷ್ಟೇ ಸುಲಭವೂ ಆಗಿದೆ ಎಂದು ಹಿರಿಯ ಪತ್ರಕರ್ತ ಡಾ. ಎಚ್. ಬಿ. ಮಂಜುನಾಥ ಅಭಿಪ್ರಾಯ ಪಟ್ಟರು.



ಅವರು ಇಂದು ಸಂಜೆ ನಗರದ ದೇವರಾಜ ಅರಸು ಬಡಾವಣೆಯಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದ 27ನೇ ವಾರ್ಷಿಕೋತ್ಸವದ ಅಂಗವಾಗಿ ಏರ್ಪಾಡಾಗಿದ್ದ ಧಾರ್ಮಿಕ ಮತ್ತು ಅಧ್ಯಾತ್ಮಿಕ ವಿಷಯವಾಗಿ ಉಪನ್ಯಾಸ ನೀಡುತ್ತಾ, ತನ್ನ ಆತ್ಮದ ಅರಿವಾದಾಗ ನಾಮ ರೂಪಾತ್ಮಕವಾಗಿ ಬೇರೆ ಬೇರೆಯಾದರೂ ಎಲ್ಲರಲ್ಲಿರುವುದು ತನ್ನಂತಹುದೇ ಆತ್ಮ ಎಂಬುದು ವೇದ್ಯವಾಗುತ್ತದೆ. ಇದು ಪರಮಾತ್ಮವನ್ನು ಅರಿವಿಗೆ ತಂದುಕೊಳ್ಳಲು ಸಾಧನಾ ಸೋಪಾನವಾಗುತ್ತದೆ. ಇಂತಹ ಪ್ರಕ್ರಿಯೆಗಳು ಪ್ರಪಂಚದಲ್ಲಿ ಭಾರತ ದೇಶದಲ್ಲಿ ಮಾತ್ರವೇ ಸಾಧ್ಯ. ಕಾರಣ ನಮ್ಮ ಸನಾತನ ಚಿಂತನೆಗಳು ಇದಕ್ಕೆಲ್ಲಾ ಮಾರ್ಗಸೂಚಿಗಳಾಗಿವೆ. ಆದರೆ, ಕುಹಕಿಗಳು ನಮ್ಮ ಸನಾತನ ಚಿಂತನೆಗಳನ್ನೇ ತಪ್ಪಾಗಿ ಅರ್ಥೈಸುತ್ತಾರೆ. ಇದಕ್ಕೆ ಅವರ ಅಜ್ಞಾನ ಅಥವಾ ಪೂರ್ವಗ್ರಹಗಳೇ ಕಾರಣವಾಗಿವೆ ಎಂದು ಮಂಜುನಾಥ್ ತಿಳಿಸಿದರು.

ಆಧ್ಯಾತ್ಮಿಕ ಚಿಂತನೆಯ ಹಾದಿಯಲ್ಲಿರುವವರ ದಾರಿ ತಪ್ಪಿಸಲು ಹೊರಟವರು ತಾವೇ ದಾರಿ ತಪ್ಪಿ ಕಂಗಾಲಾಗಿ ಕೊನೆಗೆ ದಾರಿ ಕಾಣಲು ತಾವು ಧಿಕ್ಕರಿಸಿದ ಅಧ್ಯಾತ್ಮಕ್ಕೆ ಮೊರೆ ಹೋಗುತ್ತಾರೆ ಎಂಬುದನ್ನು ಸ್ವಾರಸ್ಯಕರ ಉದಾಹರಣೆಗಳ ಮೂಲಕ ಮಂಜುನಾಥ್ ಅವರು ವಿವರಿಸಿದರು.

ಲಯನ್ಸ್ ಭವನದ ಹೊರಾವರಣದಲ್ಲಿ ನೆರವೇರಿದ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ದೀಪಾ ಮಾಡಿದರೆ, ಪ್ರಾರ್ಥನೆಯನ್ನು ವಿದುಷಿ ಶೀಲಾ ನಟರಾಜ ಹಾಡಿದರು. ಸ್ವಾಗತವನ್ನು ಕಾರ್ಯಕಾರಿ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ಕೋರಿದರು. ಗೌರವಾಧ್ಯಕ್ಷ ಆರ್. ಜಿ.ನಾಗೇಂದ್ರ ಪ್ರಕಾಶ್ ಪ್ರಾಸ್ತಾವಿಕ ನುಡಿಗಳ ನಾಡಿದರು. ಕಾರ್ಯದರ್ಶಿ ವಿ.ವೀರಭದ್ರರಾವ್, ಖಜಾಂಚಿಗಳಾದ ನಾಗಭೂಷಣ್ ಕಡೇಕೊಪ್ಪ, ತಾತಾ ಕೆ.ಜಯಂತ್ ಹಾಗೂ ಶ್ರೀಮತಿ ಪ್ರಭಾ ಉಪಸ್ಥಿತರಿದ್ದರು.

# ಬಜೆಟ್‌ನಲ್ಲಿ ಬಿಸಿಯೂಟ ತಯಾರಕರನ್ನು ಕೈಬಿಟ್ಟ ಕೇಂದ್ರ



ದಾವಣಗೆರೆ, ಫೆ. 2 - ಕೇಂದ್ರ ಸರ್ಕಾರ ಈಚೆಗೆ ಮಂಡಿಸಿದ ಬಜೆಟ್‌ನಲ್ಲಿ ಬಿಸಿಯೂಟ ತಯಾರಕರನ್ನು ಸಂಪೂರ್ಣ ಕಡೆಗಣಿಸಿದೆ ಎಂದು ಎಐಟಿಯುಸಿ ಸಂಯೋಜಿತ ಬಿಸಿಯೂಟ ತಯಾರಕರ ಫೆಡರೇಶನ್‌ನ ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಕಾಮ್ರೆಡ್ ಆವರಗೆರೆ ಚಂದ್ರು ದೂರಿದ್ದಾರೆ.

ರಾಜ್ಯಾದ್ಯಂತ ಶಾಲೆಗಳಲ್ಲಿ ಅಡುಗೆ ಕೆಲಸ ನಿರ್ವಹಿಸುತ್ತಿರುವ ಬಿಸಿಯೂಟ ತಯಾರಕರಿಗೆ ಮಾಸಿಕ 3600 ರೂಪಾಯಿ ಗೌರವ ಸಂಭಾವನೆ ಬರುತ್ತಿದ್ದು, ಇದರಲ್ಲಿ ಕೇಂದ್ರ ಸರ್ಕಾರ ಕೇವಲ 600 ರೂಗಳನ್ನು ಮಾತ್ರ ತನ್ನ ಪಾಲಿನ ಹಣ ನೀಡುತ್ತಿದೆ ಉಳಿದ ಗೌರವ ಸಂಭಾವನೆಯಾಗಿ ರಾಜ್ಯ ಸರ್ಕಾರ ನೀಡುತ್ತಿದೆ. ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಬಿಸಿಯೂಟ ತಯಾರಕರಿಗೆ ವೇತನದಲ್ಲಿ ಹೆಚ್ಚಳವಾಗುತ್ತದೆ ಎಂಬ ನಿರೀಕ್ಷೆಯಲ್ಲಿದ್ದ ಬಿಸಿಯೂಟ ತಯಾರಕರಿಗೆ ನಿರಾಸೆಯಾಗಿದೆ, ಕೇಂದ್ರ ಸರ್ಕಾರ ದೇಶಾದ್ಯಂತ ಇರುವ ದುಡಿಯುವ ಮಹಿಳೆಯರ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ ಎಂದು ದೂರಿದರು.

# ಮೂಗಿಗೆ ತುಪ್ಪ ಸವರುವ ನಿರಾಶದಾಯಕ ಬಜೆಟ್



ದಾವಣಗೆರೆ, ಫೆ. 2 - ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಕೇಂದ್ರ ಸರ್ಕಾರದ 2025ನೇ ಸಾಲಿನ ಬಜೆಟ್ ಮೂಗಿಗೆ ತುಪ್ಪ ಸವರುವ ಬಜೆಟ್ ಆಗಿದೆ. ಕರ್ನಾಟಕದ ಪಾಲಿಗೆ ನಿರಾಶದಾಯಕ ಆಯವ್ಯಯ ಎಂದು ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ನಿಟ್ಟುವಳ್ಳಿ ಪ್ರವೀಣ್ ಕುಮಾರ್ ತಿಳಿಸಿದ್ದಾರೆ. ಆಯವ್ಯಯದ ಬಗ್ಗೆ ಪ್ರತಿಕ್ರಿಯೆ ನೀಡಿರುವ ಅವರು, ಕರ್ನಾಟಕಕ್ಕೆ ಕೇವಲ ಒಂದೇ ಒಂದು ಯೋಜನೆ ಘೋಷಿಸಿದ್ದು ಬಿಟ್ಟರೆ, ಯಾವ ಸೌಲಭ್ಯವನ್ನೂ ನೀಡಿಲ್ಲ. ದೆಹಲಿಯಲ್ಲಿ ನಡೆಯಲಿರುವ ದೆಹಲಿ ವಿಧಾನಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಟ್ಯಾಕ್ಸ್ ವಿನಾಯಿತಿ ನೀಡಲಾಗಿದೆ. 12 ಲಕ್ಷ ರೂಪಾಯಿವರೆಗಿನ ಆದಾಯಕ್ಕೆ ತೆರಿಗೆ ವಿನಾಯಿತಿ ನೀಡಲಾಗಿದೆ. ರೈತರ ಸಾಲ ಮನ್ನಾ ಮಾಡಬೇಕು. ವೈಜ್ಞಾನಿಕ ದರ ನಿಗದಿಪಡಿಸಬೇಕು. ಇಂಥ ವಿಚಾರಗಳ ಬಗ್ಗೆ ಗಮನವನ್ನೇ ಹರಿಸಿಲ್ಲ ಎಂದು ತಿಳಿಸಿದ್ದಾರೆ.

# ಜಿಲ್ಲಾ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಹಕಾರ ಸಂಘ ಸ್ಥಾಪನೆ

ದಾವಣಗೆರೆ, ಫೆ.2- ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹಾಗೂ ವಿವಿಧ ನಿಗಮ, ಮಂಡಳಿ ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆಯಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರು, ಕಾರ್ಮಿಕರಿಗೆ ವೇತನ ಪಾವತಿ ಮತ್ತು ಕಾನೂನಾತ್ಮಕವಾಗಿ ನೀಡಬೇಕಾದ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ದಾವಣಗೆರೆ ಜಿಲ್ಲಾ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಹಕಾರ ಸಂಘ ನಿಗಮವನ್ನು ನೂತನವಾಗಿ ಸ್ಥಾಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ. ತಿಳಿಸಿದ್ದಾರೆ.

ಈಗಾಗಲೇ ವಿವಿಧ ಸಂಸ್ಥೆಗಳ ಮೂಲಕ ಹೊರಗುತ್ತಿಗೆಯಡಿ ಟೆಂಡರ್ ಮೂಲಕ ಸೇವೆಯನ್ನು ಸಲ್ಲಿಸಲಾಗುತ್ತಿದ್ದು, ಈ ಎಲ್ಲಾ ಹೊರಗುತ್ತಿಗೆ ನೌಕರರು ಇನ್ನು ಮುಂದೆ ದಾವಣಗೆರೆ ಜಿಲ್ಲಾ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಹಕಾರ ಸಂಘದಡಿಯಲ್ಲಿ ಕೆಲಸ ನಿರ್ವಹಿಸುವರು. ಈ ನೌಕರರಿಗೆ ಜಿಲ್ಲಾ ಸಂಘದಿಂದಲೇ ನೇರವಾಗಿ ವೇತನ ಹಾಗೂ ಇತರೆ ಸೌಲಭ್ಯಗಳನ್ನು ನೀಡಲಾಗುತ್ತದೆ. ಹೊರಗುತ್ತಿಗೆ ನೌಕರರೇ ಈ ಸಹಕಾರ ಸಂಘದ ಸದಸ್ಯರಾಗಿರುವರು. ಆದ್ದರಿಂದ ಹೊರಗುತ್ತಿಗೆ ನೌಕರ ಸಿಬ್ಬಂದಿಯವರು ಸಂಘದ ಸದಸ್ಯತ್ವ ಪಡೆಯಬಹುದಾಗಿದ್ದು, ತಮ್ಮ ಇಲಾಖೆ ಮುಖ್ಯಸ್ಥರುಗಳಿಂದ ಅರ್ಜಿ ಪಡೆದು ನೋಂದಣಿ ಮಾಡಿಕೊಳ್ಳಲು ತಿಳಿಸಿದ್ದಾರೆ.

# ಚನ್ನಗಿರಿ ಲೈಂಗಿಕ ದೌರ್ಜನ್ಯ ಆರೋಪಿಗೆ ಗಲ್ಲು ಶಿಕ್ಷೆ ವಿಧಿಸಿ: ಪ್ರಮೋದ್ ಮುತಾಲಿಕ್

ದಾವಣಗೆರೆ, ಫೆ. 2- ಚನ್ನಗಿರಿಯ ಮೆಡಿಕಲ್ ಶಾಪ್‌ನ ಅಮ್ಜದ್ ಎಂಬ ರಾಕ್ಷಸಿ ಪ್ರವೃತ್ತಿಯ ವ್ಯಕ್ತಿಯು ವ್ಯವಸ್ಥಿತವಾಗಿ ನೂರಾರು ಮಹಿಳೆಯರು, ವಿದ್ಯಾರ್ಥಿನಿಯರು, ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದು, ಸರ್ಕಾರ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಆರೋಪಿಗೆ ಗಲ್ಲು ಶಿಕ್ಷೆ ವಿಧಿಸುವಂತೆ ಶ್ರೀರಾಮ ಸೇನೆಯ ರಾಷ್ಟ್ರೀಯ ಸಂಸ್ಥಾಪಕ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆರೋಪಿಗೆ ಗಲ್ಲು ಶಿಕ್ಷೆ ವಿಧಿಸುವ ರೀತಿಯಲ್ಲಿ ದೋಷಾರೋಪಣೆ ಪಟ್ಟಿ ಸಲ್ಲಿಸಿದರೆ, ನ್ಯಾಯಾಲ ಆತನಿಗೆ ತಕ್ಕ ಶಿಕ್ಷೆ ನೀಡಲಿದೆ. ಈ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ಸಮಗ್ರ ತನಿಖೆ ನಡೆಸಬೇಕೆಂದು ಆಗ್ರಹಿಸಿದರು.

ಚನ್ನಗಿರಿಯಲ್ಲಿ ಜ. 30 ರಂದು ಆರೋಪಿ ಅಮ್ಜದ್ ಎಂಬಾತನನ್ನು ಬಂಧಿಸಿದ್ದು, ಆತನ ಬಳಿ ಹಲವಾರು ಅತ್ಯಾಚಾರದ ವಿಡಿಯೋ ತುಣುಕುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. 56 ವರ್ಷದ ಈ ಆರೋಪಿ ತನ್ನ ಮೆಡಿಕಲ್ ಶಾಪ್‌ನಲ್ಲಿ ರಾಕ್ಷಸಿ ಕೃತ್ಯ ನಡೆಸಿದ್ದು, ಇದರ ಹಿಂದೆ ವ್ಯವಸ್ಥಿತ ಸಂಘಟನೆಗಳು ಇರುವ ಶಂಕೆ ಇದೆ. ಈ ಘಟನೆ ಕುರಿತಂತೆ ರಾಜ್ಯ ಸರ್ಕಾರ, ಗೃಹ ಇಲಾಖೆ, ಪೊಲೀಸ್ ಇಲಾಖೆ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥ ಆರೋಪಿ ಯಾವುದೇ ಕಾರಣಕ್ಕೂ ಪ್ರಕರಣದಿಂದ ತಪ್ಪಿಸಿಕೊಳ್ಳದಂತೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಅಮ್ಜದ್ ಪ್ರಕರಣ ಕುರಿತಾಗಿ ಆತನ ಮೊದಲ ಹೆಂಡತಿ ಈ ಹಿಂದೆಯೇ ಈ ರೀತಿಯ ಅತ್ಯಾಚಾರ ಪ್ರಕರಣಗಳಲ್ಲಿ ತನ್ನ ಪತಿ ಇದ್ದ ಬಗ್ಗೆ ದೂರು ನೀಡಿದ್ದರು. ಎರಡು ವರ್ಷಗಳ ಹಿಂದೆ ಈ ವ್ಯಕ್ತಿ ಬಗ್ಗೆ ತನಿಖೆ ನಡೆಸಿದ್ದರೇ ಅವತ್ತೇ ಈ ವ್ಯಕ್ತಿಯು ಕಾಮಪುರಾಣ ಬಯಲಾಗುತ್ತಿತ್ತು. ಆದರೆ, ಅಂದು ಪೊಲೀಸರು ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಳ್ಳದೇ ರಾಜಿ ಸಂಧಾನ ಮಾಡಿದ್ದರ ಹಿನ್ನೆಲೆಯಲ್ಲಿ ಇಷ್ಟೆಲ್ಲಾ ಪ್ರಕರಣಗಳಿಗೆ ಕಾರಣ ಆಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಪ್ರಕರಣ ಕುರಿತು ಶ್ರೀರಾಮ ಸೇನೆಯಿಂದ ರಾಜ್ಯಾದ್ಯಂತ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಇದೇ ದಿನಾಂಕ 6 ರಂದು ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪರಶುರಾಮ ನಡುಮನಿ, ಮಣಿ ಸರ್ಕಾರ್, ಚನ್ನಗಿರಿಯ ವಿನಯ್, ನಿತೀನ್, ಪಿ. ಸಾಗರ್, ಶ್ರೀಧರ್, ಶಿವಕುಮಾರ್, ಅಜಯ್, ಪ್ರಭು ಇದ್ದರು.

# ರೈತನ ಉದಾರ ಗುಣದಿಂದ ಜಗತ್ತು ಹಸಿವು ಮುಕ್ತ

## ವಿರಕ್ತ ಮಠದ ಬಸವೇಶ್ವರ ಮಹಾದ್ವಾರ ಉದ್ಘಾಟನಾ ಸಮಾರಂಭದಲ್ಲಿ ಡಾ. ಮಲ್ಲಿಕಾರ್ಜುನ ಮುರುಘರಾಜೇಂದ್ರ ಶ್ರೀ

ಹರಪನಹಳ್ಳಿ, ಫೆ.2- ರೈತ ಒಕ್ಕಲುತನ ನಿಲ್ಲಿಸಿದರೆ, ಜಗತ್ತೇ ಹಸಿವಿನಿಂದ ಬಿಕ್ಕಬೇಕಾಗುತ್ತದೆ. ರೈತನ ಉದಾರ ಗುಣದಿಂದ ಎಲ್ಲರೂ ನೆಮ್ಮದಿಯಿಂದ ಜೀವಿಸುತ್ತಿದ್ದೇವೆ ಎಂದು ಶಿವಮೊಗ್ಗದ ಬೆಕ್ಕಿನ ಕಲ್ಮಠದ ಡಾ. ಮಲ್ಲಿಕಾರ್ಜುನ ಮುರುಘರಾಜೇಂದ್ರ ಶ್ರೀಗಳು ಹೇಳಿದರು.



ತಾಲ್ಲೂಕಿನ ಅರಸೀಕೆರೆ ಕೋಲಶಾಂತೇಶ್ವರ ವಿರಕ್ತ ಮಠದಲ್ಲಿ ಬಸವೇಶ್ವರ ಮಹಾದ್ವಾರ, ವಸತಿ ನಿಲಯ ಮತ್ತು ಇತರೆ ಕಟ್ಟಡವನ್ನು ಉದ್ಘಾಟಿಸಿ ಸರ್ವ ಧರ್ಮ ಸಮ್ಮೇಳನ, ಕೃಷಿ ಮೇಳದಲ್ಲಿ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಕೋಲಶಾಂತೇಶ್ವರ ಸ್ವಾಮಿಗಳು ಮಠಕ್ಕೆ ಸೀಮಿತವಾದ ಭೂಮಿಯಲ್ಲೇ ದುಡಿದು ಮಠವನ್ನು ಶ್ರೀಮಂತಗೊಳಿಸಿದ್ದಾರೆ. ಇಂದು ವ್ಯಾಪಾರಿಗಳ, ಮಧ್ಯವರ್ತಿಗಳ ಹಾವಳಿಯಿಂದ ಕೃಷಿಕ ಬಡವನಾಗಿದ್ದಾನೆ ಎಂದು ಶೋಚಿಸಿದರು.

ಇತ್ತೀಚಿಗೆ ಭೂಮಿಯಲ್ಲಿ ಅಂತರ್ಜಲ ಕಡಿಮೆ ಆಗುತ್ತಿದ್ದು, ಸರ್ಕಾರ ಮತ್ತು ವಿಜ್ಞಾನಿಗಳು ಕೃಷಿ ಕೇತ್ರಕ್ಕೆ ಅವಶ್ಯ ಸೌಲಭ್ಯ ಕಲ್ಪಿಸಬೇಕಿದೆ ಎಂದು ಹೇಳಿದರು.

ಅರಸೀಕೆರೆಯ ಕೋಲಶಾಂತೇಶ್ವರ ಶ್ರೀಗಳು ಕಾಯಕ ಯೋಗಿಗಳಾಗಿ ಕೃಷಿಯಲ್ಲಿ ತೊಡಗಿ ಇತರರಿಗೆ ಮಾದರಿ ಆಗಿದ್ದಾರೆ ಎಂದರು.

ಪಂಚಗಣಾಧೀಶ್ವರರು ಈ ಭಾಗದಲ್ಲಿ ಉತ್ತಮ ಕೆಲಸ ಮಾಡಿದ್ದಾರೆ. ಲೋಕಕ್ಕೆ ಉತ್ತಮ ಸಂದೇಶ ಕೊಟ್ಟ ಬಸವಣ್ಣನವರ ಮಹಾದ್ವಾರ ಮಾಡಿರುವುದು ಉತ್ತಮ ಬೆಳವಣಿಗೆ ಎಂದರು.

ಸಹಾಯಕ ಕೃಷಿ ನಿರ್ದೇಶಕ ವಿ.ಎಂ. ಉಮೇಶ್ ಮಾತನಾಡಿ, ರೈತನು ಅವಧಿಗೂ ಮುನ್ನ ಬೆಳೆಯನ್ನು ವೇಗವಾಗಿ ಬೆಳೆಯಲು ಭೂಮಿಗೆ ಅತಿಯಾದ ರಾಸಾಯನಿಕ ಗೊಬ್ಬರ ಸೇರಿಸುತ್ತಿರುವುದರಿಂದ ಭೂಮಿಯು ನೈಜ ಸತ್ವ ಕಳೆದುಕೊಳ್ಳುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸಾಯಯವ ಕೃಷಿ ಪದ್ದತಿ ಅಳವಡಿಸಿಕೊಳ್ಳುವ ಮೂಲಕ ಉತ್ತಮ ಇಳುವರಿ ಪಡೆದುಕೊಳ್ಳಬಹುದು. ರೈತನ ದುಡಿಮೆ ಫಲದಿಂದ ದೇಶದಲ್ಲಿ ಕೈಗಾರಿಕೆಗಳು ಹಾಗೂ ನವೋದ್ಯಮಗಳು ಸೇರಿದಂತೆ ದೇಶದ ವಿವಿಧ ಕ್ಷೇತ್ರಗಳ ಬೆಳವಣಿಗೆಯಾಗಲು ಸಾಧ್ಯ ಎಂದರು.

ಅಕ್ಷರ ಸಿಡ್ಸ್ ಮಾಲೀಕ ಎನ್. ಕೊಟ್ರೇಶ್ ಮಾತನಾಡಿ, ಇಂದಿನ ಆಹಾರ ಧಾನ್ಯಗಳಲ್ಲಿ ಪೌಷ್ಠಿಕಾಂಶಗಳ ಕೊರತೆ ಹೆಚ್ಚಾಗಿದೆ. ಹಾಗಾಗಿ ಹೆಚ್ಚು ಸಾವಯವ ಗೊಬ್ಬರ ಬಳಸಿ ಬೆಳೆ ಬೆಳೆದಾಗ ಧಾನ್ಯಗಳಲ್ಲಿ ಹೆಚ್ಚು ಪೌಷ್ಠಿಕಾಂಶ ಪಡೆಯಬಹುದು. ಇಂತಹ ಆಹಾರ ಸೇವನೆಯಿಂದ ಮನುಷ್ಯನ ಆರೋಗ್ಯ ಹಾಗೂ ಆಯಸ್ಸು ವೃದ್ಧಿಯಾಗುತ್ತದೆ ಎಂದು ಹೇಳಿದರು.

ಇದೇ ವೇಳೆ ಕೃಷಿ ಕೇತ್ರದಲ್ಲಿ ಸಾಧನೆಗೈದ ರೈತರಿಗೆ ಕೋಲಶಾಂತೇಶ್ವರ ಮಠದಿಂದ ಸನ್ಮಾನಿಸಿ, ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಡೂರು ವಿರಕ್ತ ಮಠದ ಪ್ರಭು ಶ್ರೀಗಳು, ನೀಲಗುಂದ ಗುಡ್ಡದ ವಿರಕ್ತ ಮಠದ ಚನ್ನಬಸವ ಶಿವಯೋಗಿಗಳು, ಕೂಡ್ಲಿಪೇಟೆಯ ಕಲ್ಲಳ್ಳಿಮಠದ ರುದ್ರಮುನಿ ಶ್ರೀಗಳು, ಕೂಲಹಳ್ಳಿ ಚಿನ್ಮಯಾನಂದ ಶ್ರೀಗಳು, ಅಡವಿಹಳ್ಳಿ ವೀರಗಂಗಾಧರ ಹಾಲಸ್ವಾಮಿಗಳು, ನಿಚ್ಚವ್ವನಹಳ್ಳಿಯ ಶಿವಯೋಗಿ ಹಾಲಸ್ವಾಮಿಗಳು, ಕ್ಯಾರಕಟ್ಟೆ ಅಜ್ಜಯ್ಯ ಸ್ವಾಮಿಗಳು, ಮಾಜಿ ಸಂಸದ ವೈ. ದೇವೇಂದ್ರಪ್ಪ, ಬಿಡಿಸಿಸಿ ನಿರ್ದೇಶಕ ವೈ.ಡಿ. ಅಣ್ಣಪ್ಪ, ಎ.ಬಿ. ಪ್ರಶಾಂತ್ ಪಾಟೀಲ್ ಸೇರಿದಂತೆ ಇತರರಿದ್ದರು.

## ತುಂಗಭದ್ರಾ ನದಿಗೆ ನೀರು ಬಿಡುಗಡೆ

ಹೂವಿನಹಡಗಲಿ, ಫೆ.2- ಹೂವಿನಹಡಗಲಿ ತಾಲ್ಲೂಕು ಮೈಲಾರ ಗ್ರಾಮದ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿಯ ವಾರ್ಷಿಕ ಕಾರಣಿಕೋತ್ಸವ ಫೆಬ್ರವರಿ 14 ರಂದು ನಡೆಯಲಿದ್ದು, ಜನರಿಗೆ ಅನುಕೂಲ ಕಲ್ಪಿಸಲು ಭದ್ರಾ ಜಲಾಶಯದಿಂದ ತುಂಗಭದ್ರಾ ನದಿಗೆ ಫೆಬ್ರವರಿ 5 ರಿಂದ 11 ರವರೆಗೆ ಒಟ್ಟು 5800 ಕ್ಯೂಸೆಕ್ಸ್ ನೀರು ಹರಿಸಲಾಗುವುದು. ಈ ಅವಧಿಯಲ್ಲಿ ನದಿಯಲ್ಲಿ ಸಾರ್ವಜನಿಕರು, ರೈತರು ತಿರುಗಾಡುವುದು, ದನಕರುಗಳನ್ನು ಮೇಯಿಸುವುದು ಮತ್ತು ತೋಟಗಾರಿಕೆಗೆ ಸಂಬಂಧಿಸಿದ ಕೆಲಸ ಮಾಡುವುದು ಹಾಗೂ ನದಿ ದಂಡೆಯಲ್ಲಿ ಪಂಪ್‌ಸೆಟ್ ಅಳವಡಿಸುವುದು ಮತ್ತು ಅನಧಿಕೃತವಾಗಿ ನೀರೆತ್ತುವುದನ್ನು ನಿಷೇಧಿಸಲಾಗಿದೆ ಎಂದು ಕ.ನೀ.ನಿ.ನಿ., ಭದ್ರಾ ಯೋಜನಾ ವೃತ್ತ ಅಧೀಕ್ಷಕ ಅಭಿಯಂತರರು ಹಾಗೂ ಭದ್ರಾ ನೀರಾವರಿ ಸಲಹಾ ಸಮಿತಿಯ ಸದಸ್ಯ ಕಾರ್ಯದರ್ಶಿ ಆರ್.ರವಿಚಂದ್ರ ತಿಳಿಸಿದ್ದಾರೆ.

## ಪಡಿತರ ಚೀಟಿದಾರರು ಇ-ಕೆವೈಸಿ ಮಾಡಿಸಿ

ಹರಿಹರ, ಫೆ.2- ತಾಲ್ಲೂಕಿನ ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿನ ಒಟ್ಟು 124 ನ್ಯಾಯಬೆಲೆ ಅಂಗಡಿ ವ್ಯಾಪ್ತಿಯ 58,335 ಅಂತ್ಯೋದಯ ಕಾರ್ಡ್, ಬಿ.ಪಿ.ಎಲ್ ಕಾರ್ಡ್ ಬಳಕೆದಾರರ ಪೈಕಿ 7,567 ಬಳಕೆದಾರರು ಇ-ಕೆವೈಸಿ ಮಾಡಿಸಿರುವುದಿಲ್ಲ. ಇ-ಕೆವೈಸಿ ಮಾಡಿಸಲು ಸರ್ಕಾರವು ಈಗಾಗಲೇ ಸಾಕಷ್ಟು ಸಮಯ ನೀಡಿದ್ದರೂ ಬಹುಸಂಖ್ಯೆಯ ಜನರು ಮಾಡಿಸಿರುವುದಿಲ್ಲ. ಕೂಡಲೇ ತಮ್ಮ ಕಾರ್ಡ್ ವ್ಯಾಪ್ತಿಯ ನ್ಯಾಯಬೆಲೆ ಅಂಗಡಿಗಳಲ್ಲಿ ಇ-ಕೆವೈಸಿ ಮಾಡಿಸಬೇಕೆಂದು ತಹಶೀಲ್ದಾರ ಕೆ.ಎಂ. ಗುರುಬಸವರಾಜ ತಿಳಿಸಿದ್ದಾರೆ.

## ತುಂಗಭದ್ರಾ ಹೌಸಿಂಗ್ ಬೋರ್ಡ್ ಅಧ್ಯಕ್ಷರಾಗಿ ಸಿ.ಸಿ. ಪಾಟೀಲ್ ಆಯ್ಕೆ



ರಾಣೇಬೆನ್ನೂರು, ಫೆ. 1- ತುಂಗಭದ್ರಾ ಹೌಸಿಂಗ್ ಬೋರ್ಡ್ ಅಧ್ಯಕ್ಷರಾಗಿ ಧಾರವಾಡ ಜಿಲ್ಲಾ ಪರಿಷತ್ ಮಾಜಿ ಸದಸ್ಯ ಸಿ.ಸಿ.ಪಾಟೀಲ ಅವರು ನಿನ್ನೆ ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ಸಿರಿಗೆರೆ : ಸದ್ಧರ್ಮ ಪೀಠದ ಕಲಾಪ ಇಲ್ಲ



ಸಿರಿಗೆರೆ, ಫೆ. 2- ತರಳಬಾಳ ಬಾಳು ಹುಣ್ಣಿಮೆ ಮಹೋತ್ಸವ ಪ್ರಯುಕ್ತ ಫೆಬ್ರವರಿ ದಿನಾಂಕ 3, 10 ಮತ್ತು 17 ಈ ಮೂರು ಸೋಮವಾರಗಳಂದು ಸದ್ಧರ್ಮ ನ್ಯಾಯಪೀಠದ ಕಾರ್ಯಕಲಾಪಗಳು ನಡೆಯುವುದಿಲ್ಲ ಎಂದು ಪೀಠದ ಕಾರ್ಯದರ್ಶಿ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 08194-268829, 268848.


|| ಶ್ರೀ ವೀತರಾಗಾಯ ನಮಃ || || ಶ್ರೀ ಪದ್ಮಾವತಿ ದೇವಿ ಪ್ರಸನ್ನ ||

### ಹದಿನಾಲ್ಕನೇ ವರ್ಷದ ಚಿರಸ್ಮರಣೆ



ದಿ. ಶ್ರೀ ಬಿ.ಕೆ. ಸಂತೋಷ್
ಜನನ: 18.12.1977 - ನಿಧನ: 03.02.2011
ನೀವು ನಮ್ಮನ್ನಗಲಿ
ಇಂದಿಗೆ ಹದಿನಾಲ್ಕು ವರ್ಷಗಳು ಕಳೆದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ:
ಅಕ್ಕ: ಶ್ರೀಮತಿ ಬಿ.ಕೆ. ಅರ್ಚನಾ
ಭಾವ : ಶ್ರೀ ಡಿ. ಮಹಾವೀರ್
ಪ್ರೀತಿಯ ಸೊಸೆ : ಕು|| ಎಂ. ಲಕ್ಷ್ಮಿ
ಪದ್ಮಾಂಬ (ಕುಬೇರಪ್ಪ) ಕಾಂಪ್ಲೆಕ್ಸ್, ದಾವಣಗೆರೆ.
ಮಹಾವೀರ ಭವನ, ದಾವಣಗೆರೆ.
ಬೇತೂರು ಕುಟುಂಬ ವರ್ಗದವರು
ಶ್ರೀ ಮಹಾವೀರ ಆಟೋಮೊಬೈಲ್ಸ್, ರಾಣೇಬೆನ್ನೂರು.


## ನಗರದಲ್ಲಿ ನಾಳೆ ಅನ್ನಪೂರ್ಣೇಶ್ವರಿ ರಥೋತ್ಸವ



ಶ್ರೀ ಡಿ. ದೇವರಾಜ ಅರಸು ಬಡಾವಣೆ ಎ ಬ್ಲಾಕ್‌ನಲ್ಲಿ ರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಶ್ರೀ ದೇವಿಯ ರಥೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ ಸುದರ್ಶನ ಹೋಮ, ರುದ್ರ ಹೋಮ, ಸಂಜೆ 6.30ಕ್ಕೆ ಶ್ರೀ ವಾಸವಿ ಗಾನಾಮೃತ ತಂಡದಿಂದ ನೃತ್ಯ ಮತ್ತ ಸಂಗೀತ ಸೇವೆ ನಡೆಯಲಿದೆ. ನಾಳೆ ಮಂಗಳವಾರ 8ಕ್ಕೆ ಅಭಿಷೇಕ, ಮಧ್ಯಾಹ್ನ 12.05ಕ್ಕೆ ಶ್ರೀ ಮಾತಾ ಅನ್ನಪೂರ್ಣೇಶ್ವರಿ ರಥೋತ್ಸವ, ಸಂಜೆ 5ಕ್ಕೆ ಶ್ರೀ ವಾಸವಿ ಯುವತಿಯರ ಭಜನಾ ಮಂಡಳಿಯಿಂದ ಭಜನೆ ಜರುಗಲಿದೆ.


ssims SPARSH
CENTRE FOR ACCIDENTS BONE & JOINT CARE

ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು
ಪ್ರತೀ ಹದಿನೈದು ದಿನಗಳಿಗೊಮ್ಮೆ
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಕೀಲು ಮರುಜೋಡಣೆ
- ಮೊಣಕಾಲು ನೋವು
- ಹಿಪ್ ಮರುಜೋಡಣೆ
- ಭುಜದ ನೋವು
- ರಿವಿಷನ್ ಶಸ್ತ್ರಚಿಕಿತ್ಸೆ
- ಸ್ಪೋರ್ಟ್ಸ್ ಇಂಜುರೀಸ್
- ಡಿಫಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಗುರುವಾರ, 6ನೇ ಫೆಬ್ರುವರಿ, 2025 | ಸಮಯ: ಬೆಳಿಗ್ಗೆ 11 ರಿಂದ ಸಂಜೆ 4 ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: 96869 29090 / 99800 33277

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ



|| ಶ್ರೀ ಅಂಬಾಭವಾನಿ ಪ್ರಸನ್ನ || || ಶ್ರೀ ಗಣಪತಿ ಪ್ರಸನ್ನ || || ಶ್ರೀ ಪಾಂಡುರಂಗ ಪ್ರಸನ್ನ ||



ದಾವಣಗೆರೆ ಜಿಲ್ಲೆ, ಹರಿಹರದ ಹರಿಹರೇಶ್ವರ ಲೇಔಟ್,
ನಾಗರಾಜಪ್ಪ ಬಡಾವಣೆ ವಾಸಿ
ದಿ|| ಶ್ರೀಮತಿ ಸುನಂದಬಾಯಿ,
ದಿ|| ಶ್ರೀ ಗೋವಿಂದರಾವ್ ಹೋವಳೆ
ಇವರ ಆಶೀರ್ವಾದದೊಂದಿಗೆ
ಶ್ರೀಮತಿ ಸುಧಾ, ಶ್ರೀ ಭವಾನಿಶಂಕರ್ ಹೋವಳೆ
ಇವರು ನೀಡುವ ಸವಿನಯ ಆಮಂತ್ರಣ
ಸ್ವಸ್ತಿಶ್ರೀ ವಿಜಯಾಭ್ಯುದಯ ಶ್ರೀಮನ್ನೃಪ ಶಾಲಿವಾಹನ ಶಕೆ 1946ನೇ ಶ್ರೀ ಕ್ರೋಧಿನಾಮ ಸಂವತ್ಸರದ ಮಾಘ ಮಾಸ ಶುಕ್ಲ ಪಕ್ಷ ಪಂಚಮಿ ತಿಥಿಯಂದು
ದಿನಾಂಕ: 03-02-2025ನೇ ಸೋಮವಾರ
ಬೆಳಗ್ಗೆ 8-45 ಗಂಟೆಗೆ

ಸಲ್ಲುವ ಕುಂಭ ಲಗ್ನದ ಶುಭ ಮುಹೂರ್ತದಲ್ಲಿ ನಾವು ಹರಿಹರದ ಹರಿಹರೇಶ್ವರ ಲೇಔಟ್ ನಗರದಲ್ಲಿ ನೂತನವಾಗಿ ನಿರ್ಮಿಸಿರುವ

|| ಶ್ರೀ ಭವಾನಿ ನಿಲಯ ||

ಇದರ ಗೃಹ ಪ್ರವೇಶವನ್ನು
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಸಕುಟುಂಬ ಸಮೇತರಾಗಿ ಆಗಮಿಸಿ ಶುಭ ಹಾರೈಸಬೇಕಾಗಿ ವಿನಂತಿ.

ಸ್ಥಳ : ಶ್ರೀ ಭವಾನಿ ನಿಲಯ
ನಂ. 78, 6ನೇ ಕ್ರಾಸ್, ಡಿ. ನಾಗರಾಜಪ್ಪ ಬಡಾವಣೆ,
ಹರಿಹರೇಶ್ವರ ಲೇಔಟ್, ಹರಿಹರ, ದಾವಣಗೆರೆ ಜಿಲ್ಲೆ.





ನಮ್ಮ ಪ್ರೀತಿಯ ಸತ್ಕಾರ
ಮಧ್ಯಾಹ್ನ 12 ರಿಂದ

ತಮ್ಮ ಆಗಮನಾಭಿಲಾಷಿಗಳು :
ಶ್ರೀಮತಿ ಅರ್ಚನಾ, ಡಾ|| ಕಿರಣ್ ಕುಮಾರ ಬಿ. ಹೋವಳೆ
ಶ್ರೀಮತಿ ಶಾಲಿನಿ, ಶ್ರೀ ಪ್ರವೀಣ್‌ಕುಮಾರ ಪತಂಗೆ
ಲಶೀತಾ, ಲಿಕಿತಾ ಕೆ. ಹೋವಳೆ, ಶ್ರೇಯಾಂಕ್, ಸಾನಿಕ ಪಿ. ಪತಂಗೆ

ತಮ್ಮ ಸುಖಾಗಮನ ಬಯಸುವವರು :
ಹೋವಳೆ ಕುಟುಂಬ ವರ್ಗದವರು ಹಾಗೂ ಬಂಧುಗಳು-ಮಿತ್ರರು



|| ಶ್ರೀ ಹಲಕರ್ಟಿ ವೀರಭದ್ರೇಶ್ವರ ಪ್ರಸನ್ನ || || ಶ್ರೀ ಗುರು ಗದ್ದಿಗೆಪ್ಪಜಯ್ಯ ನಮಃ ||



### ಬೆನಕನಕೊಂಡಿ ಬಂಧುಗಳ ವಿವಾಹ ಆಮಂತ್ರಣ



ಹರಿಹರ ತಾಲ್ಲೂಕು, ಮಲೇಬೆನ್ನೂರು ಪಟ್ಟಣ ವಾಸಿ
ಶ್ರೀ ಬೆನಕನಕೊಂಡಿ ಪಂಚಪ್ಪ ಮತ್ತು ಸಹೋದರರು, ಶ್ರೀಮತಿ ಬೆನಕನಕೊಂಡಿ ಬಸಮ್ಮ ಕೋಂ ದಿ|| ಸಿದ್ದಲಿಂಗಪ್ಪ ಮತ್ತು ಮಕ್ಕಳು
ಇವರುಗಳು ಮಾಡುವ ವಿಜ್ಞಾಪನೆಗಳು.
ಶ್ರೀ ಶ್ರೀ ಶ್ರೀ ಷ|| ಬ್ರ|| ಶ್ರೀಮದ್ ಗಿರಿರಾಜ ಸೂರ್ಯ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಡಾ|| ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು ಶ್ರೀ ಶೈಲ ಪೀಠ ಇವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಷ||ಬ್ರ|| ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು, ಹಿರೇಕಲ್ಮಠ ಹೊನ್ನಾಳಿ, ಶ್ರೀ ಶ್ರೀ ಶ್ರೀ ಷ||ಬ್ರ|| ಅಭಿನವ ಮುನೀಂದ್ರ ಶಿವಾಚಾರ್ಯ ಮಹಾಸ್ವಾಮೀಜಿಯವರ ಕಟ್ಟಿಮನಿ ಹಿರೇಮಠ, ಹಲಕರ್ಟಿ, ಚಿತ್ತಾಪುರ ತಾ|| ಇವರುಗಳ ಸಮ್ಮುಖದಲ್ಲಿ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕೆ 1946ನೇ ಕ್ರೋಧಿ ನಾಮ ಸಂವತ್ಸರ, ಮಾಘ ಮಾಸ ಶುಕ್ಲ ಪಕ್ಷದ ಪಂಚಮಿ ಶುದ್ಧ ಉತ್ತರಾಯಣೇ ಶಿಶಿರ ಋತು ದಿನಾಂಕ : 03.02.2025ನೇ ಸೋಮವಾರ ಮಧ್ಯಾಹ್ನ 12.42 ರಿಂದ 1.10ರವರೆಗೆ ಸಲ್ಲುವ ವೃಷಭ ಲಗ್ನದ ಶುಭ ಮುಹೂರ್ತದಲ್ಲಿ
ಇವರ ಮೊಮ್ಮಗ
ಶ್ರೀಮತಿ ಬಿ.ಎಂ. ವಿಶಾಲಾಕ್ಷಮ್ಮ, ಶ್ರೀ ಬಿ. ಮಲ್ಲಿಕಾರ್ಜುನಪ್ಪ ಇವರ ಸುಪುತ್ರ
ಚಿ|| ರಾ|| ಕಿರಣ್ ಬಿ.ಎಂ. MBA., USA
ಚಿ|| ಕುಂ|| ಸೌ|| ಸಹನಾ ಯು.ಎಂ. M.B.A.
ಶ್ರೀಮತಿ ಸುಧಾ ಉಮೇಶ್ ಚ. ಮಹಾರಾಜಪೇಟೆ, ಸಾ|| ಹಾವೇರಿ ಇವರ ದ್ವಿತೀಯ ಸುಪುತ್ರಿ
ಇವರ ವಿವಾಹ ಮಹೋತ್ಸವವನ್ನು ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಕುಟುಂಬ ಸಮೇತರಾಗಿ ಆಗಮಿಸಿ, ವಧು-ವರರಿಗೆ ಆಶೀರ್ವದಿಸಿ, ನಮ್ಮ ಅತಿಥ್ಯವನ್ನು ಸ್ವೀಕರಿಸಬೇಕಾಗಿ ಕೋರುವ.
ತಮ್ಮ ಆಗಮನಾಭಿಲಾಷಿಗಳು :
ಶ್ರೀಮತಿ ಬಿ.ಎಂ. ವಿಶಾಲಾಕ್ಷಿ ಮತ್ತು ಶ್ರೀ ಬಿ. ಮಲ್ಲಿಕಾರ್ಜುನಪ್ಪ ಮತ್ತು ಸಹೋದರರು ಹಾಗೂ ಕು|| ಬಿ.ಎಂ. ಕೀರ್ತಿಲಕ್ಷ್ಮಿ
ಶ್ರೀಮತಿ ಸುಧಾ ಶ್ರೀ ಉಮೇಶ ಚ. ಮಹಾರಾಜಪೇಟ್, ಹಾವೇರಿ ಹಾಗೂ ಬಂಧು-ಮಿತ್ರರು.

ವಿವಾಹ : ದಿನಾಂಕ : 03.02.2025, ಸೋಮವಾರ
ಅಕ್ಷತಾರೋಹಣ : ಮಧ್ಯಾಹ್ನ 12.42 ರಿಂದ 1.10ರವರೆಗೆ
ವಿವಾಹ ಸ್ಥಳ : ಎಸ್.ಎಸ್. ಕನ್ವೆನ್ಷನ್ ಹಾಲ್, ಶಾಮನೂರು ರಸ್ತೆ, ದಾವಣಗೆರೆ.
ಗುಗ್ಗಳ ಕಾರ್ಯಕ್ರಮ : ದಿನಾಂಕ : 04.02.2025 ಮಂಗಳವಾರ ಬೆಳಿಗ್ಗೆ 6.30ಕ್ಕೆ ವರನ ಸ್ವಗೃಹ, ಮಲೇಬೆನ್ನೂರು.

ಸುಖಾಗಮನ ಬಯಸುವವರು :
- ★ ಶ್ರೀ ಬೆನಕನಕೊಂಡಿ ದಿ|| ಸಿದ್ದಲಿಂಗಪ್ಪ ಮತ್ತು ಮಕ್ಕಳು, ಮಲೇಬೆನ್ನೂರು.
- ★ ಶ್ರೀ ಬೆನಕನಕೊಂಡಿ ಪಂಚಪ್ಪ ಮತ್ತು ಮಕ್ಕಳು, ಮಲೇಬೆನ್ನೂರು.
- ★ ಶ್ರೀ ಬೆನಕನಕೊಂಡಿ ನಾಗೇಂದ್ರಪ್ಪ ಮತ್ತು ಮಕ್ಕಳು, ಮಲೇಬೆನ್ನೂರು.
- ★ ಶ್ರೀ ಬೆನಕನಕೊಂಡಿ ದಿ|| ವೀರಪ್ಪ ಮತ್ತು ಮಕ್ಕಳು, ಮಲೇಬೆನ್ನೂರು.
- ★ ಶ್ರೀ ಬೆನಕನಕೊಂಡಿ ಚಿದಾನಂದಪ್ಪ ಮತ್ತು ಮಕ್ಕಳು, ಮಲೇಬೆನ್ನೂರು.
- ★ ಶ್ರೀ ಕೇಣಿ ವೃಷಭೇಂದ್ರಪ್ಪ ಮತ್ತು ಸಹೋದರರು, ಮಲೇಬೆನ್ನೂರು.
- ★ ಶ್ರೀಮತಿ ಸವಿತಾ ಶ್ರೀ ಬಿ.ಹೆಚ್. ಮಂಜುನಾಥ್ ಮತ್ತು ಸಹೋದರರು, ಬೆಳಗುತ್ತಿ
- ★ ಶ್ರೀ ಚಂದ್ರಶೇಖರಪ್ಪ ಎಂ. ಸುರುಳಿಹಳ್ಳಿ ಮತ್ತು ಸಹೋರರು, ಹಾವೇರಿ (ನಿವೃತ್ತ ಪ್ರೊಫೆಸರ್)
- ★ ಶ್ರೀ ಎಸ್.ಎನ್. ಶಂಭುಲಿಂಗಪ್ಪ ಮತ್ತು ಬಂಧುಗಳು, ಮಲೇಬೆನ್ನೂರು.
- ★ ಶ್ರೀ ಉಮೇಶ್ ಚ. ಮಹಾರಾಜಪೇಟ್ ಮತ್ತು ಸಹೋದರರು ಹಾವೇರಿ. ಹಾಗೂ ಬಂಧು-ಮಿತ್ರರು.



SV RM SWASTIK RICE MALEBENNUR
ಇವರಿಂದ :
ಶ್ರೀಮತಿ ಬಿ.ಎಂ. ವಿಶಾಲಾಕ್ಷಿ ಮತ್ತು ಶ್ರೀ ಬಿ. ಮಲ್ಲಿಕಾರ್ಜುನಪ್ಪ
ಶ್ರೀ ವೀರಭದ್ರೇಶ್ವರ ರೈಸ್ & ಫ್ಲೋರ್ ಮಿಲ್
ಮಲೇಬೆನ್ನೂರು ಪಟ್ಟಣ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.
ಫೋ. : 9845075799 / 9663649657



ವಿಶೇಷ ಸೂಚನೆ : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas